
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಬ್ರಾಹ್ಮಣಶಾಹಿ ಬಂಡವಾಳಶಾಹಿ ಮತ್ತು ಜಾಗತೀಕರಣ

ಆಗಸ್ಟ್ 10, 2011 ಪುಟ 20 ರೂ. 14/-





ದಗಲ್‌ಬಾಜಿ ಧನಂಜಯನ ದಶಾವತಾರ

ಫೋನ್ ಟ್ಯಾಪ್ ಮಾಡಿದ್ದು ಸಿಸಿಬಿ

ಲೋಕಾಯುಕ್ತ ವರದಿಯಲ್ಲಿ ಏನೇನಿದೆ?

ಸದ್ಯ ಹೋದ

...ಕ್ಕಿಬಿದ್ದ PWD ತಿಮಿಂಗಲ ಮೃತ್ಯುಂಜಯಸ್ವಾಮಿ



ಬೆಂಗಳೂರು

ಉಪ ಮೇಯರ್ ಹರೀಶನ ...ಕೀಚಕ ಚೇಷ್ಟೆ



ಹುಬ್ಬಳ್ಳಿ

ಬೆತ್ತಲಾದ ಪ್ರಿನ್ಸಿ ರಿಚೇಲ್



ಬಾಗಲಕೋಟೆ

ಕಾರಜೋಳನ ನೆರಳಲ್ಲಿ ದಂಧೆಗಳು

...ಹೆಬ್ಬೆಟ್ಟು ಮಂಜನ ಪಡೆಗೆ ಗುಂಡು



ನೋ ಕಾಮೆಂಟ್ಸ್

"ಮಾವೋವಾದಿ-ನಕ್ಸಲ್‌ವಾದಿಗಳ ವಿರುದ್ಧದ ಹೋರಾಟವನ್ನು ಒಂದು ಕಾನೂನು-ಸುವ್ಯವಸ್ಥೆಯ ವಿಷಯದಂತೆ ನಡೆಸಲು ಸಾಧ್ಯವಿಲ್ಲ. ಈ ಸಮಸ್ಯೆಯ ಆಳ ಬಹಳ ಹಿಂದಿನದ್ದು ಮತ್ತು ಈಗಾಗಲೇ ವಿಕೃತ ಮತ್ತು ಭೀಕರ ಅಸಮಾನತೆಗಳಿಂದ ನರಳುತ್ತಿದ್ದ ಸಮಾಜವೊಂದರ ಮೇಲೆ ಹೇರಲ್ಪಟ್ಟ ಸಮಾಜೋ-ಆರ್ಥಿಕ ನೀತಿಗಳಿಂದ ಈ ಸಮಸ್ಯೆ ಉದ್ಭವಿಸಿದೆ. ಹೀಗಾಗಿ ಈ ಹೋರಾಟವು ಜನರ ಮನಸ್ಸು ಮತ್ತು ಹೃದಯವನ್ನು ಗೆದ್ದುಕೊಳ್ಳಲು ನಡೆಸುವ ನೈತಿಕ, ಸಾಂವಿಧಾನಿಕ ಮತ್ತು ಕಾನೂನು ಹೋರಾಟಗಳಿಗಿಂತ ಏನೂ ಕಡಿಮೆಯಿಲ್ಲ. ನಮ್ಮ ಸಂವಿಧಾನವು ಯಾವ ಚೌಕಟ್ಟಿನೊಳಗೆ ನಮ್ಮ ಸರ್ಕಾರವು ವ್ಯವಹರಿಸಬೇಕೆಂಬ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿಕೊಟ್ಟಿದೆ. ಅಂಥಾ ಸಾಂವಿಧಾನಿಕ ಸೂತ್ರಗಳನ್ನು ಉಲ್ಲಂಘಿಸುವುದೆಂದರೆ ಕಾನೂನುಬಾಹಿರವಾಗಿ ನಡೆದುಕೊಳ್ಳುವುದೆಂದೇ ಅರ್ಥ."

- ಛತ್ತೀಸ್‌ಘಡ್‌ನ ಸಾಲ್ವಾ ಜುದುಂ ವಿಷಯದ ಬಗ್ಗೆ ಸುಪ್ರೀಂಕೋರ್ಟ್

"ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಿ ದೇಶದ ಸಂಪತ್ತನ್ನು ಶ್ರೀಮಂತರಿಂದ ಬಡವರಿಗೆ ಹಂಚುವ ಸಲುವಾಗಿ 1950-70ರ ದಶಕದಲ್ಲಿ ಸಂವಿಧಾನಕ್ಕೆ 30-ಎ, 30-ಬಿ, 300-ಎ ತಿದ್ದುಪಡಿಗಳನ್ನು ತರಲಾಯ್ತು. ಇದು ಜಮೀನ್ದಾರರಿಂದ ಬಲವಂತವಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರವನ್ನು ಸರ್ಕಾರಕ್ಕೆ ಒದಗಿಸಿತು. ಆದರೆ ಈಗ ಅದೇ ಕಾನೂನು ಅವಕಾಶವನ್ನು ಸಣ್ಣ ಪುಟ್ಟ ರೈತರಿಂದ ಜಮೀನು ಕಸಿದು ಕಾರ್ಪೊರೇಟ್ ಕಂಪನಿಗಳಿಗೆ ಒದಗಿಸಲು ಅರ್ಥಾತ್ ದೇಶದ ಸಂಪತ್ತನ್ನು ಬಡವರಿಂದ ಕಿತ್ತು ಶ್ರೀಮಂತರಿಗೆ ಒದಗಿಸಲು ಬಳಸಿಕೊಳ್ಳಲಾಗುತ್ತಿದೆ."

- Economic and Political Weekly ಸಂಪಾದಕೀಯದಿಂದ

"ಅಮೆರಿಕದಲ್ಲಾದ ಆರ್ಥಿಕ ಹಿಂದ್ಸರಿತ ಮತ್ತು ಗ್ರೀಕ್‌ನಲ್ಲಾಗಿರುವ ಸಂಕ್ಷೋಭೆ ಎಲ್ಲಕ್ಕೂ ಜಾಗತೀಕರಣವೇ ಕಾರಣ. ಈ ಬಗೆಯ ಸಂಕ್ಷೋಭೆಗಳು ಭಾರತವನ್ನು ಆವರಿಸಿಕೊಳ್ಳುತ್ತಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ಭಾರತವು ಮುಕ್ತ ಆರ್ಥಿಕ ನೀತಿಯನ್ನು ಅನುಸರಿಸಿದ್ದರಿಂದ ಉಳ್ಳವ ರಿಂದ ಕಳ್ಳುದರೋಡೆ ನಡೆಯುತ್ತಿದೆ. ಬಡತನವು ಹಿಂದೆಯೂ ಇತ್ತು, ಮುಂದೆಯೂ ಇರಬಹುದು. ಈ ಹಿಂದೆ ಜನರು ಬಡತನಕ್ಕೆ ಹೆದರುತ್ತಿರಲಿಲ್ಲ. ಆದರೆ ಈಗಿನ ಬಡತನ ಬಡವರನ್ನು ದೈನೇಸಿಗಳನ್ನಾಗಿ ಮಾಡಿದೆ. ದೇಶದ ಅಭಿವೃದ್ಧಿಯು ಒಂಟಿ ಚಕ್ರದ ರಥದಂತೆ ನಾಗಾಲೋಟದಲ್ಲಿ ಓಡುತ್ತಿದೆ. ಆದರೆ ಈ ರಥಕ್ಕೆ ಸಮಾನತೆಯ ಮತ್ತೊಂದು ಚಕ್ರವನ್ನು ಜೋಡಿಸಿದಾಗ ಮಾತ್ರ ಸರಿಯಾಗಿ ಸಾಗಲು ಸಾಧ್ಯ."

- ದೇವನೂರು ಮಹಾದೇವ

"ರಸ್ತೆ ವಿಸ್ತರಣೆಯ ನೆಪದಲ್ಲಿ ಮರ ಕಡಿಯುತ್ತಿರುವ ಬಿಬಿಎಂಪಿಯು ಮತ್ತೊಂದು ಕಡೆ ದೊಡ್ಡ ದೊಡ್ಡ ಕಟ್ಟಡಗಳ ಕಾಂಪೌಂಡ್‌ಗಳ ಮೇಲೆ ಗಿಡಮರಗಳ ಚಿತ್ರವನ್ನು ಬರೆಸಿ ಕಡಿದ ಮರಗಳನ್ನು ನೆನಪಿಸಿಕೊಳ್ಳುತ್ತಿದೆ."

- ಎಂ.ಎಚ್. ಕೃಷ್ಣಯ್ಯ

ನಂಬಿದ್ರೆನಂಬಿ ಬಿಟ್ರೆಬಿಡಿ

"ಅದಿರು ರಫ್ತು ನಿಷೇಧಿಸಿ ಲಕ್ಷಾಂತರ ಕೋಟಿ ರೂಪಾಯಿಯನ್ನು ಉಳಿಸಿದ್ದಕ್ಕೆ ನನಗೆ ಕೇಂದ್ರ ಸರ್ಕಾರ ನೊಬೆಲ್ ಪ್ರೈಜ್ ಕೊಡಬೇಕಿತ್ತು. ಅದರ ಬದಲು ನನ್ನನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸಲಾಗುತ್ತಿದೆ."

- ಯಡಿಯೂರಪ್ಪ

"ರಾಜ್ಯದ ಕಾಂಗ್ರೆಸ್ ಪಕ್ಷದಲ್ಲಿ ಡಿಕೆ ಶಿವಕುಮಾರ್ ಬಣ ಮತ್ತು ಸೋನಿಯಾ ಬಣ ಎಂಬ ಎರಡು ಬಣಗಳಿವೆ. ರಾಮನಗರದ ಕಾಂಗ್ರೆಸ್ ಕಾರ್ಯಕ್ರಮವನ್ನು ಏರ್ಪಡಿಸಿದ್ದು ಡಿಕೆ ಶಿವಕುಮಾರ್ ಬಣ. ಆದ್ದರಿಂದಲೇ ನನಗೆ ಮಾತನಾಡಲು ಅವಕಾಶ ನಿರಾಕರಿಸಲಾಯಿತು."

- ತೇಜಸ್ವಿನಿ ಗೌಡ

ದುರಹಂಕಾರದ ಪರಮಾವಧಿ


"ನಾನು ಮುಖ್ಯಮಂತ್ರಿಯಾಗಿದ್ದರೆ ಇನ್ನೂ ಇಪ್ಪತ್ತು ವರ್ಷ ಬಿಜೆಪಿ ಅಧಿಕಾರದಲ್ಲಿರುತ್ತದೆ. ಇಲ್ಲದಿದ್ದರೆ ಕಷ್ಟ. ಲೋಕಾಯುಕ್ತ ವರದಿಯಿಂದ ಏನೂ ಆಗುವುದಿಲ್ಲ. ಇಂತಹ ಎಷ್ಟೇ ವರದಿಗಳು ಬಂದರೂ ನನ್ನನ್ನು ಕೆಳಗಿಳಿಸಲು ಸಾಧ್ಯವಿಲ್ಲ. ಇದೇ ಮಾತನ್ನು ನನ್ನ ಎದುರಾಳಿಗಳಿಗೂ ಹೇಳಿದ್ದೇನೆ. ಆದ್ದರಿಂದ ನೀವೆಲ್ಲ ನನ್ನ ಬೆಂಬಲಕ್ಕೆ ಇರಿ."

- ಯಡಿಯೂರಪ್ಪ

ಬ್ರಾಹ್ಮಣಶಾಹಿ, ಬಂಡವಾಳಶಾಹಿ ಮತ್ತು ಜಾಗತೀಕರಣ



ಶಿವಸುಂದರ್ – ಚಾರ್ವಾಕ



ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿ ಈ ದೇಶದ ದಮನಿತ ಮತ್ತು ದುಡಿಯುವ ಜನತೆಯ ಶತ್ರು ಎಂದು ಡಾ. ಅಂಬೇಡ್ಕರ್‌ರವರು 1927ರಲ್ಲೇ ಸ್ಪಷ್ಟವಾಗಿ ಘೋಷಿಸಿದ್ದರು. ಜಾಗತೀಕರಣದ ನೀತಿಗಳು ಈ ದೇಶವನ್ನು ಅದೇ ಹೆಸರಿನಲ್ಲಿ ಆಕ್ರಮಣ ಮಾಡಿ ಇಪ್ಪತ್ತು ವರ್ಷಗಳೇ ಕಳೆದಿರುವ ಈ ಸಂದರ್ಭದಲ್ಲಿ ಜಾಗತೀಕರಣವೆಂದರೆ ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿಯ ಸಂಘಟಿತವಾದ ಹೊಸ ಸ್ವರೂಪದ ಆಕ್ರಮಣವೆಂದೇ ಹೇಳಬಹುದು. ಜಾಗತೀಕರಣ ದುಡಿಯುವ ಮತ್ತು ದಮನಿತ ಜನರ ಶತ್ರುವೇ ಎಂಬ ಪ್ರಶ್ನೆ ಇಂದು ಅಷ್ಟಾಗಿ ಉಳಿದಿಲ್ಲವಾದರೂ ಎಷ್ಟು ದೊಡ್ಡ ಶತ್ರು ಎಂಬ ಪ್ರಶ್ನೆ ಮಾತ್ರ ಉಳಿದೇ ಇರುವಂತೆ ಕಾಣುತ್ತಿದೆ. ಇತ್ತೀಚೆಗೆ ನ್ಯಾಷನಲ್ ಲಾ ಸ್ಕೂಲಿನಲ್ಲಿ "ಜಾಗತೀಕರಣದ ಪರಿಣಾಮಗಳು ಮತ್ತು ಸಾಮಾಜಿಕ ಚಳವಳಿಗಳು: ಕರ್ನಾಟಕದ ಅನುಭವ ಅವಲೋಕನ" ಎಂಬ ಬಗ್ಗೆ ನಡೆದ ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಈ ವಿಷಯ ಇನ್ನಷ್ಟು ಸ್ಪಷ್ಟವಾಗಿ ಗೋಚರಿಸುವಂತಿತ್ತು.

ಒಟ್ಟು ಎರಡು ದಿನಗಳ ಆ ಚಿಂತನ ಮಂಥನದಲ್ಲಿ ಜಾಗತೀಕರಣದ ಪರಿಕಲ್ಪನೆಯ ಸುತ್ತಾ, ಅದರ ಅಪಾಯದ ಸುತ್ತ ಮತ್ತು ಅದನ್ನು ಎದುರಿಸಬೇಕಾದ ಮಾರ್ಗ ಮತ್ತು ಪರ್ಯಾಯಗಳ ಸುತ್ತ ಹಲವು ಬಗೆಯ ಚಿಂತನೆಗಳು ಚರ್ಚಿಸಲ್ಪಟ್ಟವು. ವಿರೋಧಿಸುವ ಮಾರ್ಗ ಮತ್ತು ಪರ್ಯಾಯಗಳ ಬಗ್ಗೆ ಸಹಜವಾಗಿಯೇ ಹಲವು ಅಭಿಪ್ರಾಯಗಳು ಇರಲು ಸಾಧ್ಯ. ಆದರೆ ಜಾಗತೀಕರಣದ ಉದ್ದೇಶ ಮತ್ತು ಅದು ಭಾರತದ ಸಮಾಜದ ಮೇಲೆ ಮಾಡುತ್ತಿರುವ ಪರಿಣಾಮಗಳ ಗಂಭೀರತೆಯ ಬಗ್ಗೆ ಕೆಲವು ಮೂಲಭೂತ ಸಂದೇಹಗಳು ಈಗಲೂ ಕೆಲವರಲ್ಲಿ ಉಳಿದಿರುವುದು ಮಾತ್ರ ಆಶ್ಚರ್ಯ ತರಿಸುವಂತಿತ್ತು. ಅದರಲ್ಲೂ ದಮನಿತ ಸಮುದಾಯದ ಮೇಲೆ ಜಾಗತೀಕರಣದ ಪ್ರಭಾವ ಮತ್ತು ಪರಿಣಾಮವನ್ನು ಎಷ್ಟು ತೀವ್ರವಾಗಿ ತೆಗೆದುಕೊಳ್ಳಬೇಕು ಎಂಬುದು ಈಗಲೂ ದಮನಿತ ಸಮುದಾಯಗಳನ್ನು ಸಂಘಟಿಸುತ್ತಿರುವ ಕೆಲವು ಪ್ರಮುಖ ಸಂಘಟನೆಗಳಲ್ಲಿ ಮತ್ತು ಬುದ್ಧಿಜೀವಿಗಳಲ್ಲಿ ಪ್ರಶ್ನೆಯಾಗಿಯೇ ಉಳಿದುಕೊಂಡಿರುವುದನ್ನು ಈ ವಿಚಾರ ಸಂಕಿರಣ ಸ್ಪಷ್ಟಪಡಿಸುತ್ತಿತ್ತು. ಜಾಗತೀಕರಣದ ರೂಪದಲ್ಲಿ ವ್ಯಕ್ತವಾಗುತ್ತಿರುವ ಬಂಡವಾಳಶಾಹಿಯ ಆಕ್ರಮಣ ಈ ದೇಶದ ಬ್ರಾಹ್ಮಣಶಾಹಿಶಾಹಿಯ ಜೊತೆ ಅನುಸಂಧಾನಮಾಡಿಕೊಂಡು ದಮನಿತರ ಬದುಕಿನ ಮೇಲೆ ದೊಡ್ಡ ರೂಪದ ಶತ್ರುಗಳಾಗಿ ಎರಗುತ್ತಿವೆ. ಈ ನೈಚ್ಯಾನುಸಂಧಾನವೇ ಶತ್ರುವಿನ ಸ್ವರೂಪವನ್ನು ಮರೆಮಾಚುತ್ತಿದೆ ಮತ್ತು ಗೊಂದಲಗಳಿಗೆ ದೂಡುತ್ತಿದೆ. ಜಾಗತೀಕರಣದ ಇಪ್ಪತ್ತು ವರ್ಷಗಳ ನಂತರವೂ ಈ ಸ್ವದೇಶಿ ಮತ್ತು ವಿದೇಶೀ ಶತ್ರುಗಳ ಮೈತ್ರಿಯಿಂದಾಗಿ ಉಂಟಾಗಿರುವ ಶತ್ರುವಿನ ಗಂಡಭೇರುಂಡ ಸ್ವರೂಪದ ಚಹರೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದೇ ಇರುವುದೇ ಒಂದು ಜಾಗತೀಕರಣ ಮುಂದಿಡುತ್ತಿರುವ ಸವಾಲಿನ ಸ್ವರೂಪವನ್ನು ಅರ್ಥಪಡಿಸುತ್ತಿದೆ. ಶತ್ರುವಿನ ಚಹರೆಯನ್ನೇ ಸರಿಯಾಗಿ ಅರ್ಥಮಾಡಿಕೊಳ್ಳದಿದ್ದರೇ ಅದನ್ನು ಎದುರಿಸುವುದಾದರೂ ಹೇಗೆ?

ಕೆಲವು ಚಿಂತಕರು ಈ ಜಾಗತೀಕರಣವೆನ್ನುವುದೂ ಸಹ ಮನುಷ್ಯನ ಸಹಜ ವಿಕಾಸದ ಅಲೆಯಲ್ಲಿ ಬಂದಿರುವ ಒಂದು ಕಾಲಘಟ್ಟ ಮತ್ತು ಸಹಜ ವಿಕಾಸದ ಭಾಗವಾಗಿಯೇ ಅದು ಮಾಯವಾಗುತ್ತದೆ ಎಂದು ನಂಬಿಕೊಂಡಿದ್ದಾರೆ. ಜಾಗತೀಕರಣವನ್ನು ವಿರೋಧಿಸುವ ಅಥವಾ ಪ್ರತಿರೋಧಿಸುವ ಎರಡು ಮಾರ್ಗಗಳು ತಪ್ಪೆಂದೂ ಎರಡಕ್ಕೂ ಮಧ್ಯಮದ ಮಾರ್ಗವನ್ನು ಅನುಸರಿಸಬೇಕೆಂದೂ ಸಲಹೆ ಮಾಡುತ್ತಾರೆ. ಇನ್ನು ಕೆಲವರು ಜಾಗತೀಕರಣ ತಂದಿಟ್ಟಿರುವ ತಂತ್ರಜ್ಞಾನದ ಪವಾಡವನ್ನು ನೋಡಿ ಮಂತ್ರಮುಗ್ಧರಾಗಿ ನಾರಾಯಣಮೂರ್ತಿಯಂತ ಸಾಫ್ಟ್ ಶೋಷಕರನ್ನು ಹಾಡಿಹೊಗಳುವ ಮುಗ್ಧಕ್ರೌರ್ಯವನ್ನು ತೋರುತ್ತಾರೆ. ಅಂಥವರು ವಾದಿಸುವಂತೆ ಮನುಷ್ಯ ಇತಿಹಾಸದಲ್ಲಿ ಸಂಭವಿಸಿರುವುದೆಲ್ಲಾ ಸಹಜವಾಗಿಯೇ ಸಂಭವಿಸುತ್ತದೆ ಎನ್ನುವುದು ನಮ್ಮನ್ನು ವಿಧಿವಾದಕ್ಕೆ ಕೊಂಡೊಯ್ಯುವುದಲ್ಲದೆ ಮನುಷ್ಯನ ಪ್ರಜ್ಞಾಪೂರ್ವಕ ಮಧ್ಯಪ್ರವೇಶ ಮತ್ತು ಸಾಹಸ ಪ್ರವೃತ್ತಿಯನ್ನೇ ನಿರಾಕರಿಸುತ್ತದೆ.

ಮಾರ್ಕ್ಸ್ ಹೇಳಿದಂತೆ ಮನುಷ್ಯ ಇತಿಹಾಸವನ್ನು ಬದಲಿಸುತ್ತಾನೆ ಆದರೆ ಇತಿಹಾಸದ ನಿಯಮಗಳಿಗೆ ಒಳಪಟ್ಟು. ಅಂದರೆ ಬದಲಾವಣೆಯ ಸ್ವರೂಪವನ್ನು ಇತಿಹಾಸದ ಕಾಲಘಟ್ಟ ನಿರ್ಧರಿಸಿದರೂ ಮನುಷ್ಯನ ಪ್ರಜ್ಞಾಪೂರ್ವಕ ಮಧ್ಯಪ್ರವೇಶವಿಲ್ಲದೆ ಬದಲಾವಣೆ ಸಾಧ್ಯವಿಲ್ಲ. ಇಪ್ಪತ್ತನೇ ಶತಮಾನದ ಇತಿಹಾಸವೇ ಅದಕ್ಕೆ ಸಾಕ್ಷಿ. ಎಲ್ಲೆಲ್ಲಿ ದಮನಿತ ಸಮುದಾಯದ ಸಂಘಟಿತ ಪ್ರಯತ್ನ ನಡೆದಿದೆಯೋ ಅಲ್ಲೆಲ್ಲಾ ಜನರ ಬದುಕು ಇನ್ನಷ್ಟು ಹಸನುಗೊಂಡಿದೆ. ಎಲ್ಲೆಲ್ಲಿ ಆದಿಲ್ಲವೋ ಅಲ್ಲಿ ಬದುಕು ಇನ್ನಷ್ಟು ದಾರುಣಗೊಂಡಿದೆ. ಅಷ್ಟೆಲ್ಲಾ ಏಕೆ ಸಾಮಾಜಿಕ ಚಳವಳಿಗಳು ಪ್ರಬಲವಾಗಿದ್ದ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ದಮನಿತ ಸಮುದಾಯಗಳ ಬದುಕು ಮತ್ತು ಆತ್ಮವಿಶ್ವಾಸ ಇಂದಿಗಿಂತಲೂ ಹೆಚ್ಚಿತ್ತಲ್ಲವೇ? ಅಂತರರಾಷ್ಟ್ರೀಯ ಬಂಡವಾಳಶಾಹಿಗಳ ಮತ್ತು ಅವರ ಬೆಂಬಲಕ್ಕೆ ನಿಂತಿರುವ ಸಾಮ್ರಾಜ್ಯಶಾಹಿ ಪ್ರಭುತ್ವಗಳ ಮತ್ತು ಅವರ ದಲ್ಲಾಳಿತನ ಮಾಡುತ್ತಿರುವ ನಮ್ಮಂಥ ದೇಶಗಳ ಆಳುವ ವರ್ಗಗಳ ಸಂಘಟಿತ ಪ್ರಜ್ಞಾಪೂರ್ವಕ ಆಕ್ರಮಣದ ಭಾಗವಾಗಿಯೇ ಜಾಗತೀಕರಣ ಇಂದು ಭಾರತದ ಬಡ ಜನತೆಯನ್ನು ಅದರಲ್ಲೂ ದಲಿತ ಶ್ರಮಜೀವಿಗಳನ್ನು ದಮನಿಸುತ್ತಿದೆ. ಹೀಗಾಗಿ ದಲಿತ ಮತ್ತು ಎಲ್ಲಾ ಶೋಷಿತ ಮತ್ತು ದಮನಿತರ ಸಂಘಟಿತ ಬಂಡಾಯದಿಂದ ಮಾತ್ರ ಆ ಆಕ್ರಮಣವನ್ನು ಹಿಮ್ಮೆಟ್ಟಿಸಲು ಸಾಧ್ಯ.

ಅಂಬೇಡ್ಕರ್‌ರವರೂ ಗುರುತಿಸಿದಂತೆ ಈ ದೇಶದ ದಮನಿತರ ಶತ್ರುಗಳಾದ ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿಗಳನ್ನು ನಾವು 1947ರಲ್ಲಿ ಪಡೆದ ಸ್ವಾತಂತ್ರ್ಯ ಯಾವ ರೀತಿಯಲ್ಲೂ ನಿರ್ನಾಮ ಮಾಡಲಿಲ್ಲ. ಈಗ ಜಾಗತೀಕರಣ ಈ ಎರಡು ಶತ್ರುಗಳು ಒಂದಾಗುವುದಕ್ಕೆ ಹಾಗೂ ಹೊಸ ರೀತಿಯಲ್ಲಿ ದಮನಿತ ಜನತೆಯನ್ನು ಬಲಿ ಹಾಕುವ ವೇದಿಕೆಯನ್ನು ಸಿದ್ಧಪಡಿಸಿದೆ.

ಜಾಗತೀಕರಣದ 20 ವರ್ಷಗಳಲ್ಲಿ ದಲಿತ ಸಮುದಾಯದ ಬಡತನದ ದಾರುಣತೆ ಹೆಚ್ಚಾಗಿದೆ. ಸರ್ಕಾರಿ ಅಂಕಿಅಂಶಗಳ ಪ್ರಕಾರವೇ ಬಡತನದ ಪ್ರಮಾಣ ಕಳೆದ ಇಪ್ಪತ್ತು ವರ್ಷಗಳಲ್ಲಿ ಶೇ. 29ರಿಂದ ಶೇ.50ಕ್ಕೆ ಹೆಚ್ಚಾಗಿದೆ. ಆ ಬಡವರಲ್ಲಿ ಜಾತಿ ಪ್ರಧಾನವಾಗಿ ದಲಿತ ಅಥವಾ ಶೂದ್ರ ಜಾತಿಗಳೇ ಆಗಿರುತ್ತದೆ. ಪ್ರಾಯಶಃ ಅಲ್ಪಸಂಖ್ಯಾತ ಮೇಲ್ಜಾತಿ ಬಡವರೂ ಇದರಲ್ಲಿ ಸೇರಿಕೊಳ್ಳುತ್ತಾರೆ. ಬಂಡವಾಳಶಾಹಿ ವಿದೇಶಿಯರದ್ದೇ ಆದರೂ ಸ್ವದೇಶಿಯರದ್ದೇ ಆದರೂ ಜಾತಿ ವ್ಯವಸ್ಥೆಯನ್ನು ಅಲುಗಾಡಿಸಲಿಲ್ಲ. ಅಲ್ಲದೆ ಇದು ಬಡತನದ ದಾರುಣತೆಯನ್ನು ಹೆಚ್ಚಿಸಿ ದಲಿತ-ದಮನಿತ-ಶೋಷಿತ-ಬಡಜನತೆಯನ್ನು ಇನ್ನಷ್ಟು ದೀನರನ್ನಾಗಿ ಮಾಡಿ ಅಪಮಾನಕ್ಕೆ ಗುರಿ ಮಾಡಿದೆ. ಮತ್ತೊಂದೆಡೆ ಸಾಂಪ್ರದಾಯಿಕ ಬ್ರಾಹ್ಮಣಶಾಹಿ ಸಾಮಾಜಿಕ ರಚನೆಗಳಿಗೆ ಹೊಸ ಜೀವ ತುಂಬಿ ಅಪಮಾನವನ್ನು ಜಾಸ್ತಿ ಮಾಡಿದೆ. ಹಸಿವು ಮತ್ತು ಅಪಮಾನಗಳೆರಡು ಹೀಗೆ ಬ್ರಾಹ್ಮಣವಾದ ಮತ್ತು ಬಂಡವಾಳವಾದದ ಮೈತ್ರಿಯ ಅವಳಿ ಮಕ್ಕಳೇ ಆಗಿವೆ. ಜಾಗತೀಕರಣದ ಕಾಲಘಟ್ಟದಲ್ಲಿ ಆಗಿರುವ ಒಂದೇ ಬದಲಾವಣೆಯೆಂದರೆ ದಮನಿತ ಸಮುದಾಯಗಳಲ್ಲಿ ಶ್ರೀಮಂತರ ಸಂಖ್ಯೆ ಹೆಚ್ಚಾಗದಿದ್ದರೂ ಜಾಗತೀಕರಣದ ಫಲಾನುಭವೀ ಮಧ್ಯಮವರ್ಗವೊಂದು ಹುಟ್ಟುಕೊಂಡಿದೆ. ಇದು ಈ ಹಿಂದಿನ ಮಧ್ಯಮವರ್ಗದಂತೆ ಸಮುದಾಯದಲ್ಲಿ ಬೇರು ಬಿಟ್ಟ ವರ್ಗವಲ್ಲ, ಸಮುದಾಯದ ಹಿತಕ್ಕಾಗಿ ಹೋರಾಡಿದ ವರ್ಗವಲ್ಲ. ಇದು ಜಾಗತೀಕರಣ ಬಿತ್ತುವ ಪರಮ ಸ್ವಾರ್ಥವನ್ನು ಮತ್ತು ತಾವು ಶ್ರೇಷ್ಠವೆಂದು ಭಾವಿಸುವ ಬ್ರಾಹ್ಮಣವಾದಿ ಮೌಲ್ಯವನ್ನು ಹೊಂದಿರುವ ಮಧ್ಯಮವರ್ಗವಾಗಿದೆ. ದಮನಿತ ಸಮುದಾಯಗಳ ಸಾಂಸ್ಕೃತಿಕ ಮತ್ತು ಬೌದ್ಧಿಕ ಬಂಡವಾಳವೇ ಈ ಮಧ್ಯಮ ವರ್ಗ. ಎಲ್ಲಾ ದಮನಿತ ಸಮುದಾಯಗಳನ್ನು ಚಳವಳಿಗೆ ಪ್ರೇರೇಪಿಸುವುದೇ ಮಧ್ಯಮವರ್ಗ. ಆದರೆ ಈಗ ನವಉದಾರವಾದಿ ಶಾಲೆಯಲ್ಲಿ ಪಳಗಿದ ಈ ಹೊಸ ಮಧ್ಯಮವರ್ಗದ ಅರ್ಜುನರು ತಮ್ಮ ಸಮುದಾಯಗಳ ಬಗ್ಗೆ ಎಂದೆಂದಿಗೂ ಯೋಚಿಸದಂತೆ ಮಾಡಲು ಪರಮ ವ್ಯಕ್ತಿವಾದಿ ಸ್ವಾರ್ಥದ ಭಗವದ್ಗೀತೆಯನ್ನು ಬೋಧಿಸಿ ನಮ್ಮ ಕೈಯಿಂದಲೇ ನಮ್ಮ ಕಣ್ಣನ್ನು ಚುಚ್ಚುತ್ತಿದೆ. ಇದು ಪಿತೂರಿಯೋ ಕುತಂತ್ರವೋ ಅಲ್ಲ, ಅಂತರರಾಷ್ಟ್ರೀಯ ಬಂಡವಾಳಶಾಹಿ ಅನುಸರಿಸುತ್ತಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ನೀತಿ. ಹೀಗಾಗಿ ಇಂದು ಬ್ರಾಹ್ಮಣಶಾಹಿ ಮೌಲ್ಯಗಳು ಎಲ್ಲಾ ಸಮುದಾಯಗಳಲ್ಲಿ ಹುಟ್ಟಿಕೊಂಡಿರುವ ಈ ನವ ಅರ್ಜುನ ವರ್ಗದಲ್ಲಿ ಹೊಸಹುಟ್ಟನ್ನು ಕಂಡುಕೊಂಡಿದೆ. ಇದು ಸಾಮಾಜಿಕ ಚಳವಳಿಗಳ ಮೇಲೂ ನೇರ ಪರಿಣಾಮ ಬೀರುತ್ತಿದೆ.

ಈ ವಾಸ್ತವ ಇಂದು ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿಯ ನಡುವೆ ಇರುವ ಅವಿನಾಭಾವ ಸಂಬಂಧವನ್ನು ತೋರಿಸುತ್ತದೆ ಹಾಗೂ ಬ್ರಾಹ್ಮಣಶಾಹಿ ವಿರೋಧಿ ಹೋರಾಟ ಈ ಹಿಂದಿನಂತೆ ಕೇವಲ ಧರ್ಮಶಾಸ್ತ್ರಿಯ ಬ್ರಾಹ್ಮಣವಾದಕ್ಕೆ ಮಾತ್ರ ಸೀಮಿತವಾಗಬಾರದೆಂಬ ಎಚ್ಚರವನ್ನು ನೀಡುತ್ತದೆ. ವಾಸ್ತವವಾಗಿ ಆ ಹಳೆಯ ಧರ್ಮಶಾಸ್ತ್ರೀಯ ಬ್ರಾಹ್ಮಣವಾದ ಹಿಂದೂತ್ವದ ಪುನರುತ್ಥಾನದ ಅಲೆಯಲ್ಲಿ ಮರುಹುಟ್ಟನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡುತ್ತಿದೆಯೆಂಬುದು ನಿಜ. ಆದರ ವಿರುದ್ಧದ ಹೋರಾಟ ಖಂಡಿತಾ ಮುಂದುವರೆಯಬೇಕು. ಆದರೆ ಅಷ್ಟು ಮಾತ್ರ ಸಾಲುವುದಿಲ್ಲ. ಬ್ರಾಹ್ಮಣವಾದ ಮತ್ತು ಬಂಡವಾಳವಾದ ಜಾಗತೀಕರಣದ ಕಾಲಘಟ್ಟದಲ್ಲಿ ಮಾಡಿಕೊಂಡಿರುವ ಹೊಸ ಮೈತ್ರಿ ಮತ್ತು ಅದರ ಸ್ವರೂಪ, ಚಹರೆ ಮತ್ತು ದಮನಿತ ಸಮುದಾಯಗಳಲ್ಲೇ ಹುಟ್ಟಿಕೊಂಡಿರುವ ಅದರ ವಕ್ತಾರ ಫಲಾನುಭವಿಗಳ ಅಪಾಯಗಳ ಬಗ್ಗೆ ಇನ್ನೂ ಹೆಚ್ಚಿನ ಅರಿವು ಮೂಡುವ ಅಗತ್ಯ ಹಿಂದೆಂದಿಗಿಂತಲೂ ಇದೆ.

ಶಿಕ್ಷಣ, ಉದ್ಯೋಗಾವಕಾಶಗಳು ಮತ್ತು ಆಸ್ತಿ ಇವುಗಳ ಪ್ರಜಾತಾಂತ್ರಿಕ ಮರುಹಂಚಿಕೆಯಾಗದೆ ಈ ದೇಶದ ದಲಿತರ ಮತ್ತು ದಮನಿತ ಸಮುದಾಯಗಳ ಹಸಿವಾಗಲೀ ಅಪಮಾನವಾಗಲೀ ತೀರುವುದಿಲ್ಲ. ಜಾಗತೀಕರಣದ ನೀತಿಗಳು ಈ ಆಶಯಗಳಿಗೆ ತದ್ವಿರುದ್ಧವಾಗಿದೆ.

ಹಸಿವು ಮತ್ತು ಅಪಮಾನಗಳು, ಸಮಾಜ ಮತ್ತು ಆರ್ಥಿಕತೆ, ಅಭಿವೃದ್ಧಿ ಮಾದರಿ ಮತ್ತು ಪ್ರಜಾತಂತ್ರದ ಸ್ವರೂಪ ಒಂದಕ್ಕೊಂದು ಕಾರ್ಯಕಾರಣ ಸಂಬಂಧವನ್ನೇ ಹೊಂದಿವೆ. ಇವುಗಳಲ್ಲಿ ಕರ್ಮಠ ಮಾರ್ಕ್ಸ್‌ವಾದಿಗಳು ಮಾಡಿದಂತೆ ಕೇವಲ ಹಸಿವು, ಆರ್ಥಿಕತೆ ಅಥವಾ ಅಭಿವೃದ್ಧಿಗೆ ಇವುಗಳಿಗೆ ಮಾತ್ರ ಒತ್ತುಕೊಟ್ಟು ಅರ್ಥಮಾಡಿಕೊಂಡರೆ ಈ ವಿದ್ಯಮಾನದ ಮತ್ತೊಂದು ಮುಖವೇ ಆಗಿರುವ ಅಪಮಾನ, ಸಾಮಾಜಿಕ ರಚನೆ ಮತ್ತು ಪ್ರಜಾತಂತ್ರದ ಹೂರಣ ಇವುಗಳು ಹಾಗೆಯೇ ಉಳಿದುಕೊಂಡು ಬದಲಾವಣೆ ಸಾಧ್ಯವೇ ಆಗುವುದಿಲ್ಲ. ಹಾಗೆಯೇ ಇತರ ಲೋಹಿಯಾ ವಾದಿ ಅಥವಾ ಉದಾರವಾದಿ ಸಂಘಟನೆಗಳು ಒತ್ತುಕೊಡುವಂತೆ ಹಸಿವಿನ ಪ್ರಶ್ನೆಯನ್ನೇ ಎತ್ತದೆ ಅಪಮಾನದ ಪ್ರಶ್ನೆಯನ್ನು, ಆರ್ಥಿಕತೆಯ ಪ್ರಶ್ನೆಯನ್ನೇ ಗಮನಿಸದೆ ಕೇವಲ ಸಾಮಾಜಿಕ ಬದಲಾವಣೆಯ ಪ್ರಶ್ನೆಯನ್ನು, ಅಭಿವೃದ್ಧಿ ಮಾದರಿಯ ಪ್ರಶ್ನೆಯನ್ನೇ ಕೇಳದೆ ಕೇವಲ ವಿಕೇಂದ್ರೀಕರಣದಂತಹ ಪ್ರಜಾತಾಂತ್ರಿಕ ರಚನೆಗಳ ಬಗ್ಗೆ ಒತ್ತುಕೊಟ್ಟು ಹೋರಾಡುವುದು ಜಾಗತೀಕರಣದ ಹಿಂದಿನ ಬಂಡವಾಳಶಾಹಿ ಶಕ್ತಿಗಳ ಮೇಲೆ ಯಾವ ಪರಿಣಾಮವನ್ನು ಬೀರುವುದಿಲ್ಲ. ಬದಲಿಗೆ ಸತ್ಯವನ್ನು ಹೀಗೆ ವಿಘಟಿತವಾಗಿ ಗ್ರಹಿಸುವುದು ಶತ್ರುಗಳಿಗೆ ಅಪ್ಯಾಯಮಾನವಾದದ್ದೇ ಆಗಿರುತ್ತದೆ.

ಆ ಎರಡು ದಿನಗಳ ವಿಚಾರಸಂಕಿರಣದಲ್ಲಿ ಜಾಗತೀಕರಣದ ಬಗ್ಗೆ ಇನ್ನೂ ಸಂಘಟಿತವಾಗಿ ಹೋರಾಡಬೇಕೆಂಬ ಒಟ್ಟಾರೆ ಅಭಿಪ್ರಾಯ ಮೂಡಿಬಂದರೂ ಜಾಗತೀಕರಣದ ಈ ಕಾಲಘಟ್ಟದಲ್ಲಿ ವರ್ಗ-ಜಾತಿ ಶೋಷಣೆಗಳು, ಆರ್ಥಿಕ ಮತ್ತು ಸಾಮಾಜಿಕ ವಿದ್ಯಮಾನಗಳು ಹೇಗೆ ಒಂದರ ಜೊತೆ ಒಂದು ಹೆಣೆದುಕೊಂಡಿವೆ ಎಂಬುದರ ಬಗ್ಗೆ ಗೊಂದಲಗಳಿರುವುದು ಸ್ಪಷ್ಟವಾಗಿತ್ತು. ಎಲ್ಲಾ ಜನಪರ ಸಂಘಟನೆಗಳು ಜಂಟಿ ಹೋರಾಟವನ್ನು ನಡೆಸುತ್ತಲೇ ಈ ಗೊಂದಲಗಳ ತಾತ್ವಿಕ ಪರಿಹಾರದ ಕಡೆ ಸಾಧ್ಯವಾದಷ್ಟು ಬೇಗ ಹೆಜ್ಜೆ ಹಾಕಬೇಕಿದೆ.

ಶನಿ ಹೆಗಲಿಳಿದರೂ ಕಂಟಕ ಕಳೆದಿಲ್ಲ!



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಕೊನೆ ಕ್ಷಣದವರೆಗೂ ಹೋರಾಟ ಮಾಡಿದ, ಪಕ್ಷದ ಹೈಕಮಾಂಡಿಗೇ ಸೆಡ್ಡುಹೊಡೆಯಲು ನೋಡಿದ ಬಿ.ಎಸ್.ಯಡ್ಡಿಯೂರಪ್ಪ ಅಂತೂ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಲಿದ್ದಾರೆ. ಆ ಮೂಲಕ ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯವನ್ನು ದುಸ್ವಪ್ನದಂತೆ ಕಾಡಿದ್ದ ಆತನ ದುರಾಡಳಿತ ಅಂತ್ಯಗೊಳ್ಳಲಿದೆ.

ಆದರೆ ಪರಮಭ್ರಷ್ಟ, ಜಾತಿವಾದಿ, ಕೋಮುವಾದಿ, ಸ್ವಜನಪಕ್ಷಪಾತಿ ಮತ್ತು ಅಪ್ಪಟ ಸುಳ್ಳುಗಾರನಾದ ಯಡ್ಡಿ ತೊಲಗಿರುವುದರಿಂದ ಇನ್ನು ಮುಂದಾದರೂ ಬಿಜೆಪಿ ರಾಜ್ಯಕ್ಕೆ ದಕ್ಷ ಆಡಳಿತ ನೀಡುತ್ತದೆ ಎಂಬ ಯಾವ ಭರವಸೆಯೂ ಇಲ್ಲ.

ಯಾಕೆಂದರೆ ಒಬ್ಬ ಯಡ್ಡಿ ಹೋದರೂ, ಆತನಿಗಿಂತಲೂ ದೊಡ್ಡ ಕ್ರಿಮಿನಲ್‌ಗಳಾದ ರೆಡ್ಡಿ ಗ್ಯಾಂಗ್ ಮತ್ತು ಚೆಡ್ಡಿ ಪಟಾಲಂ ಇನ್ನೂ ಅದೇ ಬಿಜೆಪಿಯಲ್ಲಿವೆ. ಮಾತ್ರವಲ್ಲ ಆ ಪಕ್ಷದ ಪ್ರತಿಯೊಂದು ಆಗುಹೋಗುಗಳ ಮೇಲೆ ಈ ಎರಡು ತಂಡಗಳ ಹಿಡಿತ ಇದ್ದೇ ಇರುತ್ತದೆ. ಇವತ್ತು ಗಣಿಚೋರ ರೆಡ್ಡಿ ಮಾಫಿಯಾ ಬಿಜೆಪಿಗೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕಪ್ಪು ಹಣವನ್ನು ಸರಬರಾಜು ಮಾಡುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಈ ಹಣವಿಲ್ಲದಿದ್ದರೆ ಬಿಜೆಪಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ 'ಸ್ಪಿರಿಟ್'ಎಲ್ಲಿಂದ ಬರಬೇಕು?!



ಬಿಜೆಪಿ ಇವತ್ತು ಏಳು ರಾಜ್ಯಗಳಲ್ಲಿ ಅಧಿಕಾರ ಹಿಡಿದಿದೆ. ಅವುಗಳಲ್ಲಿ ಉತ್ತರಖಂಡ ಕೂಡ ಒಂದು. ಅಲ್ಲಿ ರಮೇಶ್ ಪೋಖ್ರಿಯಾಲ್ ಎಂಬಾತನೇ ಮುಖ್ಯಮಂತ್ರಿ. ಈತ ಎಂತಹ ಭ್ರಷ್ಟನೆಂದರೆ ಯಾವ ನದಿಯನ್ನು ಚೆಡ್ಡಿಗಳು 'ಪವಿತ್ರ' ಎಂದು ಕರೆಯುತ್ತಾರೋ ಆದೇ ಗಂಗಾನದಿಯ ಮರಳನ್ನು ಬಗೆದು ಹಣ ಮಾಡುತ್ತಿರುವ ಮಾಫಿಯಾ ಗ್ಯಾಂಗ್‌ನ ಲೀಡರ್ ಈತನ ಸಚಿವ ಸಂಪುಟದಲ್ಲಿ ಸದಸ್ಯ.

ಈ ಗ್ಯಾಂಗಿನ ಹಣದಾಸೆಗೆ ಕಡಿವಾಣ ಹಾಕಿ ಗಂಗೆಯನ್ನು ರಕ್ಷಿಸಬೇಕೆಂದು 114 ದಿನಗಳ ಕಾಲ ಉಪವಾಸ ಸತ್ಯಾಗ್ರಹ ಹೂಡಿದ್ದ ಸ್ವಾಮಿ ನಿಗಮಾನಂದ ಎಂಬಾತ ಕಳೆದ ತಿಂಗಳು ಸಾವನ್ನಪ್ಪಿದ. ಆದರೆ ಇವತ್ತಿಗೂ ಪೋಖ್ರಿಯಾಲ್ ಗಂಗೆಯನ್ನು ಲೂಟಿ ಮಾಡುತ್ತಿರುವವರ ರಕ್ಷಣೆಗೆ ನಿಂತಿದ್ದಾನೆ. ಆದರೆ ಉತ್ತರಖಂಡ್ ಪುಟ್ಟ ರಾಜ್ಯವಾದ್ದರಿಂದ ಅಲ್ಲಿ ಬಿಜೆಪಿಯ ಅಗತ್ಯಗಳನ್ನು ಪೂರೈಸುವಷ್ಟು ಕಪ್ಪು ಹಣ ಹುಟ್ಟುವುದಿಲ್ಲ.

ಹಾಗೆಯೇ ಛತ್ತೀಸಗಢದಲ್ಲಿರುವ ಬಿಜೆಪಿ ಸರ್ಕಾರಕ್ಕೆ ರಮಣ್‌ಸಿಂಗ್ ಎಂಬಾತನೇ ಮುಖ್ಯಮಂತ್ರಿ. ರಮಣ್‌ಸಿಂಗ್‌ನಿಗೆ ತನ್ನ ರಾಜ್ಯದಲ್ಲಿರುವ ಅಪಾರ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಲು ಬಹುರಾಷ್ಟ್ರೀಯ ಕಂಪನಿಗಳಿಗೆ ಪರಮಾನಗಿ ಕೊಡುವ ಆಶೆ. ಆದರೆ ಆತನ ದುರಾದೃಷ್ಟಕ್ಕೆ ಸಿಂಗ್‌ನ ಇಂತಹ ಯೋಜನೆಗಳನ್ನು ಛತ್ತೀಸಗಢದ ಅರಣ್ಯಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಮಾವೋವಾದಿಗಳ ನೇತೃತ್ವದಲ್ಲಿ ವಿರೋಧಿಸುತ್ತಿದ್ದಾರೆ. ಎಲ್ಲಿಯತನಕ ಜನರ ವಿರೋಧಿ ಇರುತ್ತದೋ ಅಲ್ಲಿಯತನಕ ಆ ರಾಜ್ಯದಿಂದಲೂ ಬ್ಲಾಕ್‌ಮನಿ ಹುಟ್ಟುವುದು ಕಷ್ಟ.

ಇದೇ ಸಮಸ್ಯೆಯನ್ನು ಜಾರ್ಖಂಡದಲ್ಲಿರುವ ಬಿಜೆಪಿಯ ಅರ್ಜುನ್ ಮುಂಡಾ ಸರ್ಕಾರ ಎದುರಿಸುತ್ತಿದೆ. ಹಿಮಾಚಲಪ್ರದೇಶದ ಮುಖ್ಯಮಂತ್ರಿ ಆಗಿರುವ ಪ್ರೇಮ್‌ಕುಮಾರ್ ಧುಮಾಲ್ ಅವರ ಕೈಯಿಂದ ಹೆಚ್ಚು ಸಾಧ್ಯವಿಲ್ಲ. ಯಾಕೆಂದರೆ ಆ ರಾಜ್ಯ ಬಹಳ ಚಿಕ್ಕದಾಗಿದ್ದು ಅಲ್ಲಿ ಲೂಟಿಗೈಯಲು ಹೆಚ್ಚೇನೂ ಇಲ್ಲ. ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್‌ಸಿಂಗ್ ಚೌಹಾಣ್ ಸಮಸ್ಯೆಯೂ ಅಂತಹದ್ದೇ. ಯಾಕೆಂದರೆ ಮಧ್ಯಪ್ರದೇಶ ನಮ್ಮ ದೇಶದ ಅತಿ ಹಿಂದುಳಿದ ರಾಜ್ಯಗಳಲ್ಲಿ ಒಂದು.

ಇವತ್ತು ಗುಜರಾತಿನಲ್ಲಿ ಅಧಿಕಾರ ಹಿಡಿದಿರುವ ನರಹಂತಕ ನರೇಂದ್ರ ಮೋದಿ ಅಲ್ಲಿ ತನ್ನದೇ ಆದ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡಿರುವುದರಿಂದ ಆತ ಬಿಜೆಪಿ ಹೈಕಮಾಂಡಿಗೆ ಸಲಾಮನ್ನೇ ಹೊಡೆಯುತ್ತಿಲ್ಲ, ಇನ್ನು ಕಪ್ಪವನ್ನು ಯಾಕೆ ಕೊಟ್ಟಾನು?

ಆದ್ದರಿಂದ ಬಿಜೆಪಿ ನಾಯಕರ ರಾಜಕೀಯ ಆಕಾಂಕ್ಷೆಗಳನ್ನು ಪೂರೈಸಲು, ಆ ಪಕ್ಷದ ಚುನಾವಣೆಯ ವೆಚ್ಚವನ್ನು ಭರಿಸಲು, 'ಆಪರೇಷನ್ ಕಮಲ'ದಂತಹ ಮಲ ಹೊರುವ ಯೋಜನೆಗಳನ್ನು ಜಾರಿಗೆ ತರಲು ಕರ್ನಾಟಕವನ್ನು ಲೂಟಿ ಮಾಡಿ ಗಳಿಸಿದ ಕಪ್ಪುಹಣ ಬೇಕೇಬೇಕು. ಅದರರ್ಥ ಬಿಜೆಪಿ ಪಕ್ಷದ ಬೇರೆ ಯಾರೇ ಮುಖ್ಯಮಂತ್ರಿಯಾದರೂ ನಮ್ಮ ರಾಜ್ಯವನ್ನು ದೋಚುವ ಕೆಲಸ ಯಡ್ಡಿ ಆಡಳಿತದಲ್ಲಿ ನಡೆದಂತೆಯೇ ಮುಂದುವರೆಯುತ್ತದೆ.

ಇನ್ನು ಚೆಡ್ಡಿ ಪಟಾಲಂ ಬಗ್ಗೆ. ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಈ ಕೇಸರಿ ಪಡೆ ರಾಜ್ಯದಲ್ಲಿ ಮಾಡಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನಾಹುತಗಳು ಒಂದೆರಡಲ್ಲ. ಮಹಿಳೆಯರಿಗೆ ಬಡಿತ, ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ, ಚರ್ಚ್‌ಗಳ ಮೇಲೆ ದಾಳಿ, ಲವ್ ಜಿಹಾದ್ ಎಂಬ ಕಾಲ್ಪನಿಕ ಕಾರ್ಯಾಚರಣೆಯ ನೆಪದಲ್ಲಿ ಯುವಕರಿಗೆ ಹಿಂಸೆ, ಶಾಲಾ ಮಕ್ಕಳ ಮೇಲೆ ಭಗವದ್ಗೀತೆಯ ಹೇರಿಕೆ, ಭಯೋತ್ಪಾದನೆ ನಿಗ್ರಹದ ನೆಪದಲ್ಲಿ ಒಂದು ಧರ್ಮದವರ ಅವಹೇಳನ, ಮಠ ಮತ್ತು ದೇವಸ್ಥಾನಗಳಿಗೆ ಖಜಾನೆಯಿಂದ ಕೋಟಿಕೋಟಿ ಲೂಟಿ, ತಮಗೆ ಬೇಕಾದ ಸ್ವಾಮಿಗಳಿಗೆ ದೇವಸ್ಥಾನಗಳ ಉಂಬಳಿ, ಶಾಲೆಗಳಿಗೆ ಆರೆಸ್ಸೆಸ್ ಪ್ರಕಟಿಸಿರುವ ಪುಸ್ತಕಗಳ ಸರಬರಾಜು..... ಹೀಗೆ ಈ ಚೆಡ್ಡಿ ಪಡೆ ನಮ್ಮ ರಾಜ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣವನ್ನೇ ವಿಷಮಗೊಳಿಸಿದೆ. ಈಗ ಯಡ್ಡಿ ತೊಲಗಿ ಬೇರೆ ಯಾರೇ ಆತನ ಜಾಗಕ್ಕೆ ಬಂದರೂ ಈ ಎಲ್ಲ ವಿದ್ಯಮಾನಗಳು ಮುಂದುವರೆಯಲಿವೆ.

ಆದ್ದರಿಂದ ಯಡ್ಡಿ ತೊಲಗಿರುವುದರ ಬಗ್ಗೆ ಸಂಭ್ರಮಿಸದೆ "ಹೋದೆಯಾ ಪಿಶಾಚಿ ಅಂದರೆ ಬಂದೆ ಗವಾಕ್ಷೀಲಿ" ಎಂಬ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಮುಂದೆ ಬರುವ ಚುನಾವಣೆಯ ಲ್ಲಾದರೂ ಕನ್ನಡಿಗರು ಈ ಭ್ರಷ್ಟರ, ಭಂಡರ ಪಕ್ಷವಾದ ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸಲೇಬೇಕಿದೆ...

******

ಬುಧವಾರ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಅವರು "ಕಳೆದ ನಾಲ್ಕು ವರ್ಷಗಳಲ್ಲಿ ಗಣಿ ಅಕ್ರಮದಿಂದ ರಾಜ್ಯ ಬೊಕ್ಕಸಕ್ಕೆ 16,085 ಕೋಟಿ ರೂಪಾಯಿಗಳ ನಷ್ಟವಾಗಿದೆ" ಎಂದು ಘೋಷಿಸಿದರು. ಅದನ್ನು ಕೇಳಿಸಿಕೊಳ್ಳುತ್ತಿದ್ದ ನಮ್ಮ ಶಿವಸುಂದರ್ ಅವರ ಕಂಪ್ಯೂಟರ್ ತರಹದ ಬ್ರೈನ್ ಕೂಡಲೇ ಒಂದು ಲೆಕ್ಕಾಚಾರವನ್ನು ಹಾಕಿತು. ಅದು ಹೀಗಿದೆ:

ನಾಲ್ಕು ವರ್ಷಗಳಲ್ಲಿ 16,085 ಕೋಟಿ ರೂಪಾಯಿ ನಷ್ಟವೆಂದರೆ ಒಂದು ವರ್ಷಕ್ಕೆ 4021 ಕೋಟಿ ರೂಪಾಯಿ ನಷ್ಟ ಎಂದಾಗುತ್ತದೆ. ಈ 4021 ನಷ್ಟವನ್ನು 2011-2012ರ ಬಡ್ಜೆಟ್‌ನಲ್ಲಿ ವಿವಿಧ ಇಲಾಖೆಗಳಿಗೆ ಯಡಿಯೂರಪ್ಪ ಸರ್ಕಾರ ಘೋಷಿಸಿರುವ ಹಣವನ್ನು ಹೋಲಿಸಿದರೆ ಇದೆಷ್ಟು ದೊಡ್ಡ ಮೊತ್ತ ಎಂದು ಗೊತ್ತಾಗುತ್ತದೆ:

* ತನ್ನನ್ನು ಆರ್ಥಿಕ ತಜ್ಞ ಎಂದೇ ಕರೆದುಕೊಳ್ಳುವ ಯಡಿಯೂರಪ್ಪ ಪ್ರಕಟಿಸಿದ 2011-2012ರ ಬಜೆಟ್ ಪ್ರಕಾರ ರಾಜ್ಯದ ಆದಾಯ ಕೊರತೆ 12,482 ಕೋಟಿ ರೂಪಾಯಿ. ಈ ಮೊತ್ತ ಕಳೆದ ನಾಲ್ಕು ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆಯಿಂದಾದ ನಷ್ಟಕ್ಕಿಂತ ಮೂರುವರೆ ಸಾವಿರ ಕೋಟಿಯಷ್ಟು ಕಡಿಮೆ (16,085-12,482= 3,599)
* ನೆರೆಹಾವಳಿಯಿಂದ ತಮ್ಮ ಭೂಮಿ-ಬದುಕು-ಮನೆ ಕಳೆದುಕೊಂಡವರಿಗೆ ಆಸರೆ ಮನೆಗಳನ್ನು ನಿರ್ಮಿಸಲು ಯಡ್ಡಿ ಸರ್ಕಾರ ಘೋಷಿಸಿದ್ದು 2,000 ಕೋಟಿ ರೂಪಾಯಿಗಳು. ಒಂದು ವರ್ಷದಲ್ಲಿ ಅಕ್ರಮ ಗಣಿಗಾರಿಕೆ ಈ ಮೊತ್ತಕ್ಕಿಂತ ಎರಡರಷ್ಟು ರಾಜ್ಯ ಬೊಕ್ಕಸಕ್ಕೆ ವಂಚಿಸಿದೆ. (ಅಂದಹಾಗೆ ಇಲ್ಲಿಯತನಕ ರಾಜ್ಯ ಸರ್ಕಾರ ನಿರಾಶ್ರಿತರಿಗೆ 2,000 ಕೋಟಿ ರೂಪಾಯಿಗಳಲ್ಲಿ ಹಲವು ಕೋಟಿಗಳನ್ನು ವೆಚ್ಚ ಮಾಡಿ ಆಸರೆ ಮನೆಗಳನ್ನು ಕಟ್ಟಿಸಿಲ್ಲ ಎಂಬುದು ವಾಸ್ತವ)
* ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನಿಗದಿಪಡಿಸಿದ್ದ ಹಣ ಕೇವಲ 2,428 ಕೋಟಿ ರೂಪಾಯಿಗಳು. ಬಳ್ಳಾರಿಯ ಗಣಿ ಮಾಫಿಯಾ ಇದಕ್ಕಿಂತ 1.75 ಹೆಚ್ಚು ಹಣವನ್ನು ದೋಚಿದೆ.
* ಬುಡಕಟ್ಟು ಜನರ ಉದ್ಧಾರಕ್ಕೆಂದು ರಾಜ್ಯ ಸರ್ಕಾರ ಎತ್ತಿಟ್ಟಿದ್ದು 1,867 ಕೋಟಿ ರೂಪಾಯಿ. ಗಣಿ ಮಾಫಿಯಾದಿಂದ ಆದ ನಷ್ಟ ಇದಕ್ಕಿಂತ 2.25 ಪಟ್ಟು ಹೆಚ್ಚು.
* ಅಲ್ಪಸಂಖ್ಯಾತರ ಅಭಿವೃದ್ಧಿಗೆ ಯಡ್ಡಿ ನೀಡಿದ್ದು 326 ಕೋಟಿ ರೂ. ಗಣಿ ಕಳ್ಳರು ಕದ್ದದ್ದು ಇದಕ್ಕಿಂತ 13 ಪಟ್ಟು ಹೆಚ್ಚು ಹಣ.
* ಭಾಗ್ಯಲಕ್ಷ್ಮಿ ಯೋಜನೆಗೆ ಯಡ್ಡಿ ಕೊಟ್ಟಿದ್ದು 4000 ಕೋಟಿ ರೂಪಾಯಿಗಳು. ಯಡ್ಡಿ ಮತ್ತು ಗ್ಯಾಂಗ್ ಗಣಿಗಾರಿಕೆಯಿಂದ ರಾಜ್ಯ ಬೊಕ್ಕಸಕ್ಕೆ ನಷ್ಟ ಮಾಡಿದ್ದು ಇದಕ್ಕಿಂತ ಹತ್ತು ಪಟ್ಟು ಹೆಚ್ಚು ಮೊತ್ತವನ್ನು.
* ಕೃಷಿ ಮತ್ತು ತೋಟಗಾರಿಕೆಗೆ ಯಡ್ಡಿ ನೀಡಿದ್ದು 3,179 ಕೋಟಿ ರೂಪಾಯಿ. ಆದರೆ ಗಣಿಗಾರಿಕೆಯಿಂದಾಗಿ ಆದ ವಾರ್ಷಿಕ ನಷ್ಟ 4021 ಕೋಟಿ ರೂ.ಗಿಂತಲೂ ಹೆಚ್ಚು.
* ಸಮಾಜ ಕಲ್ಯಾಣಕ್ಕಾಗಿ ಯಡ್ಡಿ ನೀಡಿದ್ದು 3,264 ಕೋಟಿ ರೂಪಾಯಿ. ಇದು ಗಣಿಕಳ್ಳರು ದೋಚಿದ್ದ ಹಣಕ್ಕಿಂತ 800 ಕೋಟಿ ಕಡಿಮೆ!!


ಯಡ್ಡಿ ಮತ್ತು ಆತನ ಬಿಜೆಪಿಯಲ್ಲಿರುವ ಚೋರರ ದುಷ್ಟತನ ಯಾವ ಮಟ್ಟದ್ದು ಎಂದು ಈ ಅಂಕಿಅಂಶಗಳು ಸ್ಪಷ್ಟಪಡಿಸುತ್ತವೆಯಲ್ಲವೇ?

ಪಿ. ಲಂಕೇಶರ ಪತ್ನಿ ಇಂದಿರಾ ಅವರ ಬಗ್ಗೆ ಜನರಿಗೆ ಹೆಚ್ಚು ಗೊತ್ತಿಲ್ಲ. ಇವರಿಬ್ಬರೂ ಪ್ರೀತಿಸಿ ಮದುವೆಯಾಗಿದ್ದರೂ, ನಾಲ್ಕು ದಶಕಗಳ ಕಾಲ ದಂಪತಿಗಳಾಗಿದ್ದರೂ ಇಂದಿರಾ ಅವರು ಲಂಕೇಶರೊಂದಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾಗಲಿ, ಲಂಕೇಶರನ್ನು ಕುರಿತು ಮಾತನಾಡಿದ್ದಾಗಲಿ ಬಹಳ ಕಡಿಮೆ. ಬದಲಾಗಿ ಗಂಡ, ಮಕ್ಕಳು ಮನೆ ಎಂದು ಆರಂಭದಲ್ಲಿ ತನ್ನ ಬದುಕನ್ನು ಸೀಮಿತಗೊಳಿಸಿಕೊಂಡಿದ್ದ ಇಂದಿರಾ ಆನಂತರ ತಮ್ಮದೇ ಆದ ವ್ಯಕ್ತಿತ್ವವನ್ನು ಕಂಡುಕೊಂಡು ಯಶಸ್ವಿ ಬಿಸಿನೆಸ್ ವುಮನ್ ಆಗಿದ್ದವರು.

ಲಂಕೇಶರ ವ್ಯಕ್ತಿತ್ವದ ಹಲವಾರು ಮಗ್ಗಲುಗಳನ್ನು ಹತ್ತಿರದಿಂದ ಕಂಡಿರುವ ಇಂದಿರಾ ಅವರು ಈಗ ಮೊದಲ ಬಾರಿಗೆ ಅವುಗಳನ್ನು 'ಹುಳಿಮಾವು ಮತ್ತು ನಾನು' ಎಂಬ ಅಂಕಣದಲ್ಲಿ ರೂಪಿಸಲಿದ್ದಾರೆ.

ಲೇಖಕನಾಗಿ, ಚಿಂತಕನಾಗಿ, ಮಾರ್ಗದರ್ಶಿಯಾಗಿ ಲಂಕೇಶರನ್ನು ನೋಡಿರುವ ಓದುಗರಿಗೆ ಈ ಅಂಕಣದ ಮೂಲಕ ಈಗ ಅವರನ್ನು ಕುರಿತ ಅನೇಕ ಹೊಸ ವಿಚಾರಗಳು ಹಾಗೂ ವೈಯಕ್ತಿಕ ಆಯಾಮಗಳೂ ಪರಿಚಯವಾಗಲಿವೆ. ಇಂದಿರಾ ಅವರ ಈ ಬರಹ ಎಲ್ಲರಿಗೂ ಇಷ್ಟವಾಗುತ್ತದೆ ಎಂಬ ಭರವಸೆ ನಮಗಿದೆ.

ಹುಳಿಮಾವು ಮತ್ತು ನಾನು



• ಇಂದಿರಾ ಲಂಕೇಶ್

ಮುಂದಿನ ವಾರದಿಂದ

ಉಪಮೇಯರ್ ಹರೀಶನ ಕೀಚಕ ಚೇಷ್ಟೆ


ಮಹಿಳೆಯೊಬ್ಬಳನ್ನು ಬೆಂಗಳೂರಿಗೆ ಮೇಯರ್ ಮಾಡಿದ ಬಿಜೆಪಿಯ ಅಸಲೀಯತ್ತು ಉಪಮೇಯರ್ ಹರೀಶನ ಕೀಚಕತನದ ಮೂಲಕ ಜಗಜ್ಜಾಹೀರಾಗಿದೆ!

ಮೊನ್ನೆ ಜುಲೈ 18 ರಂದು ಬಿಬಿಎಂಪಿಯ ಉಪ ಮೇಯರ್ ಛೇಂಬರಿನಲ್ಲೊಂದು ವಿಲಕ್ಷಣ ಪತ್ರಿಕಾಗೋಷ್ಠಿಯಿತ್ತು. ನೆರೆದ ಟೀವಿ ಕ್ಯಾಮರಾಗಳಿಗೆ ಉಪಮೇಯರ್ ಹರೀಶ್ ಮಹಿಳೆಯೊಬ್ಬಳು ತನ್ನ ಮಾಜಿ ಗಂಡನ ಜೊತೆ ನಿಂತಿದ್ದ ಫೋಟೋಗಳನ್ನು ಎತ್ತೆತ್ತಿ ತೋರಿಸುತ್ತಾ "ನೋಡಿ ಇವಳೇ ನನ್ನ ವಿರುದ್ಧ ಪೊಲೀಸರಿಗೆ ದೂರು ಕೊಟ್ಟವಳು. ಈಕೆಯ ಕ್ಯಾರೆಕ್ಟರ್ ಸರಿ ಇಲ್ಲ. ಇವಳು ತನ್ನ ಗಂಡನನ್ನು ಬಿಟ್ಟು ಬೇರೆ ಯಾರದೋ ಜೊತೆಗಿದ್ದಾಳೆ. ಇವಳು ವ್ಯಭಿಚಾರ ನಡೆಸುತ್ತಿದ್ದಾಳೆ. ನೋಡಿ; ಇವರೇ ಆಕೆಯ ಗಂಡ. ಬೇಕಿದ್ರೆ ಆಕೆ ಎಂಥವಳು ಅನ್ನೋದನ್ನ ಈತನ ಬಾಯಿಂದಲೇ ಕೇಳಿ.....!"



ಆವತ್ತು ಪತ್ರಿಕಾಗೋಷ್ಠಿಗೆ ಬಂದಿದ್ದ ಒಂದಿಬ್ಬರು ಟೀವಿ ಹುಡುಗಿಯರು "ಇದು ಪರ್ಸನಲ್ ವಿಷಯ, ಇದಕ್ಕೂ ಬಿಬಿಎಂಪಿಗೂ ಏನ್ರೀ ಸಂಬಂಧ?" ಎಂದು ಪ್ರಶ್ನಿಸಿದರೆ "ಈಕೆಯೇ ನನ್ನ ವಿರುದ್ಧ ದೂರು ಕೊಟ್ಟವಳು ಆಕೆ ಎಂಥವಳು ಅಂತ ನಿಮಗೆ ಗೊತ್ತಾಗ ಬೇಕಲ್ವ?" ಎಂದು ಉಪಮೇಯರ್ ಹರೀಶ್ ದಬಾಯಿಸಿಬಿಟ್ಟ.

ವಿಷಯವಿಷ್ಟೆ: ಮಹಾಲಕ್ಷ್ಮಿ ಲೇಔಟಿನಲ್ಲಿ ಸೃಷ್ಟಿ ಚಾರಿಟೇಬಲ್ ಟ್ರಸ್ಟ್ ಹೆಸರಲ್ಲಿ ಬಾಡಿಗೆ ತಾಯಂದಿರು ಮತ್ತು ಗರ್ಭಿಣಿಯರ ಸೇವಾ ಕೇಂದ್ರ ನಡೆಸುವ ಗುರುಮೂರ್ತಿ ಮತ್ತು ಮೀನಾಕ್ಷಿ ಈ ಹಿಂದೆ ಉಪಮೇಯರ್ ಹರೀಶ್ ಗೂಂಡಾಬಂಟರ ವಿರುದ್ಧ ನಂದಿನಿ ಲೇಔಟ್ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ. ಗರ್ಭಿಣಿಯರ ಸೇವಾಕೇಂದ್ರದಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದೀರ ಅದಕ್ಕೆ ತೊಂದರೆ ಆಗಬಾರದು ಅಂದರೆ ನಮಗೆ ರೋಲ್ ಕಾಲ್ ಕೊಡಲೇಬೇಕು ಎಂದು ಮಚ್ಚು ಲಾಂಗ್ ಸಮೇತ ಅಟ್ಯಾಕ್ ಶುರುವಿಟ್ಟ ಲೋಕಲ್ ರೌಡಿಗಳೆಲ್ಲರೂ ಬಿಜೆಪಿ ಕಾರ್ಯಕರ್ತರು ಮತ್ತು ಉಪಮೇಯರ್ ಹರೀಶ್ ಬಂಟರು.



ಇಂಥ ಹರೀಶ್ ಬಂಟರ ರೌಡಿ ಪಡೆಗೆ ನಾಯಕನಂತಿರುವ ವೆಂಕಟೇಶ್ ಉರ್ಫ್ ಆಟೋ ವೆಂಕಟೇಶ್ ಸದ್ಯ ಉಪಮೇಯರ್‌ನ ಬಲಗೈ ಬಂಟ ಮತ್ತು ಮಾರಪ್ಪನ ಪಾಳ್ಯ ವಾರ್ಡ್ ಬಿಜೆಪಿಗೆ ಅಧ್ಯಕ್ಷ ಕೂಡ.


ಆಟೋ ವೆಂಕಟೇಶ, ದೀಪು, ಅಂಜಿ, ಪ್ರಕಾಶ್ ಇತ್ಯಾದಿ ಲೋಕಲ್ ರೌಡಿಗಳ ಹಾವಳಿ ಯಾವ ಮಟ್ಟದ್ದೆಂದರೆ ಇಲ್ಲಿಗೆ ವಾರದ ಹಿಂದಷ್ಟೇ ಸೃಷ್ಟಿ ಟ್ರಸ್ಟ್ ಕಟ್ಟಡದ ಮೇಲೆ ದಾಳಿ ನಡೆಸಿ ಕಿಟಕಿ ಗಾಜು ಪುಡಿಗೈದು ಮುಂದೆ ನಿಲ್ಲಿಸಿದ್ದ ಕಾರನ್ನೂ ಬಿಡದೆ ಜಖಂಗೊಳಿಸಿದ್ದಾರೆ. ಅದಕ್ಕೂ ತಿಂಗಳ ಹಿಂದೆ ಟ್ರಸ್ಟ್ ವ್ಯವಸ್ಥಾಪಕಿ ಮೀನಾಕ್ಷಿ ಜೊತೆಗಿಬ್ಬರು ಹುಡುಗರನ್ನು ಕರಕೊಂಡು ತಮಗೆ ತೊಂದರೆ ಕೊಡದಂತೆ ಪ್ರಾರ್ಥಿಸಲೆಂದು ಹರೀಶನ ವಾರ್ಡ್ ಕಚೇರಿಗೆ ಬಂದರೆ ಅಲ್ಲೇ ಇದ್ದ ವೆಂಕಟೇಶನ ರೌಡಿ ಪಡೆ ಮೀನಾಕ್ಷಿಯ ಮೇಲೆ ಕೈಮಾಡಿದೆ. ಜೊತೆಗಿದ್ದ ಹುಡುಗರನ್ನು ಎರಡು ಗಂಟೆಗಳ ಕಾಲ ವಾರ್ಡ್ ಕಚೇರಿಯಲ್ಲಿ ಕೂಡಿಟ್ಟು ಹಿಂಸಿಸಿದೆ.

ಹರೀಶ್ ಬಂಟರ ಗೂಂಡಾಗಿರಿಯ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಗೆ ದೂರು ಕೊಟ್ಟರೆ ತನ್ನ ಇನ್ನೂರು ಮಂದಿ ಬಂಟರ ಸಮೇತ ಪೊಲೀಸ್ ಠಾಣೆಗೇ ನುಗ್ಗಿದ ಹರೀಶ್ ಇನ್ಸ್‌ಪೆಕ್ಟರ್ ಅನಿಲ್‌ಕುಮಾರ್ ಎದುರೇ ಸೃಷ್ಟಿ ಟ್ರಸ್ಟ್‌ನ ಅಧ್ಯಕ್ಷ ಗುರುಮೂರ್ತಿಗೆ ಕೊಲೆ ಬೆದರಿಕೆ ಹಾಕಿದ್ದ.

ಉಪಮೇಯರ್ ಆಗಿದ್ದೇ ಪಾಲಿಕೆಯ ಆರೋಗ್ಯಾಧಿಕಾರಿಗಳನ್ನು ಸೃಷ್ಟಿ ಟ್ರಸ್ಟ್ ವಿರುದ್ಧ ಛೂಬಿಟ್ಟ ಹರೀಶ್ ಅಲ್ಲಿದ್ದ ಗರ್ಭಿಣಿಯರಿಗೆ ನಾನಾ ಹಿಂಸೆ ಕೊಟ್ಟ. ಇಲ್ಲದ ಕಾರಣ ಕೊಟ್ಟು ಟ್ರಸ್ಟ್ ನಡೆಸುತ್ತಿದ್ದ ಪ್ರಯೋಗಶಾಲೆಯ ಲೈಸೆನ್ಸನ್ನೇ ರದ್ದುಪಡಿಸಿದ. ಸದ್ಯ ಹೈಕೋರ್ಟ್ ಪಾಲಿಕೆಯ ಆದೇಶಕ್ಕೆ ತಡೆಯಾಜ್ಞೆ ನೀಡಿ ಉಪಮೇಯರ್‌ನ ದೌರ್ಜನ್ಯಕ್ಕೆ ಅಡ್ಡಗಾಲಿಟ್ಟಿದೆ. ಉಪಮೇಯರ್ ಗೂಂಡಾಗಿರಿ ಮತ್ತು ಪಾಲಿಕೆ ಅಧಿಕಾರಿಗಳ ದೌರ್ಜನ್ಯದ ವಿರುದ್ಧ ಸೃಷ್ಟಿ ಟ್ರಸ್ಟ್‌ನ ಗರ್ಭಿಣಿ ಮಹಿಳೆಯರು ಈಗಾಗಲೇ ಪಾಲಿಕೆಯೆದುರು ಪ್ರತಿಭಟಿಸಿದ್ದಾರೆ.

ಆದರೆ ಹರೀಶ ತನ್ನ ಜಿದ್ದು ಬಿಡಬೇಕಲ್ಲ, ಒಂದೆಡೆ ತನ್ನ ಗೂಂಡಾ ಬಂಟರ ವಿರುದ್ಧ ದೂರು ಕೊಟ್ಟ ಸಿಟ್ಟು, ಮತ್ತೊಂದೆಡೆ ತನ್ನ ವಿರುದ್ಧ ಮಾಧ್ಯಮಗಳಿಗೆ ಹೇಳಿಕೆ ಕೊಟ್ಟ ಜಿದ್ದು, ಜೊತೆಗೆ ಪತ್ರಿಕೆಗಳಲ್ಲಿ ಈ ಬಗ್ಗೆ ಸುದ್ದಿ ಬಂದ ಹತಾಶೆ ಎಲ್ಲವನ್ನೂ ಸೇರಿಸಿ ಜುಲೈ 18 ರ ಸೋಮವಾರ ತನ್ನ ಬಿಬಿಎಂಪಿಯ ಕಚೇರಿಯಲ್ಲೇ ಸೇಡಿನ ಪತ್ರಿಕಾಗೋಷ್ಠಿಯೊಂದನ್ನು ಕರೆದ. ಅಸಹ್ಯ ಹೇಗಿತ್ತೆಂದರೆ ಸೃಷ್ಟಿ ಟ್ರಸ್ಟ್‌ನ ಮೀನಾಕ್ಷಿ ಎಂಬಾಕೆಯ ವಿಚ್ಛೇದಿತ ಪತಿಯನ್ನೇ ಹರೀಶ ತನ್ನ ಪತ್ರಿಕಾಗೋಷ್ಠಿಗೆ ಮುಖ್ಯ ಅತಿಥಿಯನ್ನಾಗಿ ಕರೆಸಿದ್ದ!

ಹರೀಶ್ ತನ್ನ ಉಪಮೇಯರ್ ಛೇಂಬರಿನಲ್ಲಿ ಮೀನಾಕ್ಷಿಯವರ ಪರಿತ್ಯಕ್ತ ಪತಿ ಶ್ರೀನಿವಾಸ್ ಎಂಬಾತನನ್ನು ಕೂಡ್ರಿಸಿಕೊಂಡು ಮೊದಲು ಸೃಷ್ಟಿ ಟ್ರಸ್ಟ್ ವಿರುದ್ಧ ಕಿಡಿಕಾರಿದ. ಅಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿದೆ. ಟ್ರಸ್ಟ್ ನಡೆಸಲು ಬೇಕಾದ ವಿದ್ಯಾರ್ಹತೆಯೇ ಇಲ್ಲ ಎಂದೆಲ್ಲ ಕಿಡಿಕಾರಿದ. ಮಹಾಲಕ್ಷ್ಮಿ ಲೇಔಟಿನ ಶಾಸಕ ನರೇಂದ್ರ ಬಾಬು ಕುಮ್ಮಕ್ಕಿನಿಂದಲೇ ಸೃಷ್ಟಿ ಟ್ರಸ್ಟ್‌ನವರು ತನ್ನ ವಿರುದ್ಧ ದೂರು ದಾಖಲಿಸುತ್ತಿದ್ದಾರೆ ಎಂದ. ಕಳೆದ ಪಾಲಿಕೆ ಚುನಾವಣೆಯಲ್ಲಿ ತನ್ನ ವಿರುದ್ಧ ನರೇಂದ್ರ ಬಾಬು ತಮ್ಮ ರವಿಶಂಕರ್ ಸೋತಿದ್ದೇ ಶಾಸಕರ ಜಿದ್ದಿಗೆ ಕಾರಣ ಎಂದು ಛೇಡಿಸಿದ. ಆತನಕ ಸಮಾಧಾನವಾಗಿ ಕೇಳಿಸಿಕೊಂಡ ಪತ್ರಕರ್ತರಿಗೆ ಅಸಹ್ಯವೆನಿಸಿದ್ದು ಉಪಮೇಯರ್ ಹರೀಶ್ ಮಹಿಳೆಯೊಬ್ಬಳ ಜೊತೆ ಪುರುಷನೊಬ್ಬ ನಿಂತಿದ್ದ ಫೋಟೋ ತೆಗೆದು ಟೀವಿ ಕ್ಯಾಮರಾಗಳಿಗೆ ತಿವಿತಿವಿದು ತೋರಿಸಿದಾಗ.



ಅದು ಸೃಷ್ಟಿ ಟ್ರಸ್ಟ್‌ನ ಮೀನಾಕ್ಷಿಯವರ ಮದುವೆಯ ಫೋಟೋ!

ಮೀನಾಕ್ಷಿಯ ಗಂಡ ಶ್ರೀನಿವಾಸ್ ಹುಟ್ಟು ಕುಡುಕ ಮತ್ತು ಧನಪಿಶಾಚಿ. ಈತನ ವಿರುದ್ಧ ಮೀನಾಕ್ಷಿ ವರದಕ್ಷಿಣೆ ಕಿರುಕುಳದ ದೂರು ದಾಖಲಿಸಿದ್ದಾರೆ. ಸದ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಛೇದನ ಕೋರಿ ಮೀನಾಕ್ಷಿ ಮೊಕದ್ದಮೆಯನ್ನೂ ಹೂಡಿದ್ದಾರೆ. ಹಾಗೊಮ್ಮೆ ಮೀನಾಕ್ಷಿಯ ನಡತೆ ಸರಿಯಿಲ್ಲವೆಂದರೆ ಅದಕ್ಕೂ ಬಿಬಿಎಂಪಿಗೂ ಸಂಬಂಧವಿಲ್ಲ. ಲಂಪಟ ಗಂಡನನ್ನು ತೊರೆದ ಮಾತ್ರಕ್ಕೆ ಯಾವ ಹೆಣ್ಣೂ ನಡತೆಗೆಟ್ಟವಳಾಗುವುದಿಲ್ಲ ಅಥವಾ ಬೇರೊಬ್ಬ ಪುರುಷನನ್ನು ಅವಲಂಬಿಸಿದಳೆಂದರೆ ಅದು ವ್ಯಭಿಚಾರವಲ್ಲ. ಇದೊಂದೇ ಕಾರಣಕ್ಕೆ ಹರೀಶನ ರೌಡಿ ಬಂಟರು ನಡೆಸಿದ ದೌರ್ಜನ್ಯವನ್ನು ಮೀನಾಕ್ಷಿ ಸಹಿಸಿಕೊಂಡು ಸುಮ್ಮನಿರಬೇಕಿಲ್ಲ.



ಆದರೆ ಹರೀಶ್ ತನ್ನ ಸ್ಥಾನಮಾನವೇನು, ಉಪಮೇಯರ್ ಪದವಿಯ ಘನತೆಯೇನು ಎಂಬುದನ್ನೂ ಲೆಕ್ಕಿಸದೆ ತನ್ನ ವಿರುದ್ಧ ದೂರು ಕೊಟ್ಟ ಮಹಿಳೆಯ ವೈಯಕ್ತಿಕ ಚಾರಿತ್ರ್ಯಕ್ಕೆ ಕೈಯಿಡುತ್ತಾನೆ. ಆಕೆ ತನ್ನ ಗಂಡನ ಜೊತೆಗಿರುವ ಫೋಟೋ ಅನ್ನು ಇನ್ನಾರೋ ಪರಪುರುಷನ ಜೊತೆಗಿರುವ ದಾಖಲೆಯೆಂಬಂತೆ ಟೀವಿ ಕ್ಯಾಮರಾಗಳ ಮುಂದೆ ಹಿಡಿಯುತ್ತಾನೆ. ಆಕೆಯ ಪರಿತ್ಯಕ್ತ ಪತಿಯನ್ನು ಉಪಮೇಯರ್ ಛೇಂಬರಿಗೇ ಕರೆಸಿ ಆತನಿಂದ ಅವಾಚ್ಯ ಬೈಗುಳ ಹೇಳಿಸುತ್ತಾನೆ. ಮಹಿಳೆಯೊಬ್ಬಳ ವೈಯಕ್ತಿಕ ಬದುಕನ್ನು ಪತ್ರಿಕಾಗೋಷ್ಠಿ ಕರೆದು ಹೀಗಳೆಯುವ ದುರುಳತನವನ್ನು ಬಹುಶಃ ಈತನಕ ಯಾವೊಬ್ಬ ಉಪಮೇಯರ್ ಕೂಡ ತೋರಿರಲಿಲ್ಲ.

ಉಪಮೇಯರ್ ಕಚೇರಿಯಿರುವುದು ಬಿಬಿಎಂಪಿಗೆ ಸಂಬಂಧಪಟ್ಟ ವಿಷಯಕ್ಕೇ ಹೊರತು ಇನ್ನಾರೋ ಮಹಿಳೆಯ ಚಾರಿತ್ರ್ಯವಧೆಗಲ್ಲ ಎಂಬುದನ್ನು ಹರೀಶ್ ಮರೆತುಬಿಟ್ಟಿದ್ದ.

ಇನ್ನೂ ದುರಂತವೆಂದರೆ ಆತುರಕ್ಕೆ ಬಿದ್ದ ಸಮಯ ಟೀವಿ ಮೀನಾಕ್ಷಿ ತನ್ನ ಗಂಡನ ಜೊತೆಗಿದ್ದ ಫೋಟೋವನ್ನೇ ಪದೇಪದೇ ತೋರಿಸಿ ಮಹಾನ್ ತನಿಖೆಗೈದಂತೆ ಸುದ್ದಿ ಬಿತ್ತರಿಸಿತು. ಕನಿಷ್ಠ ಸೌಜನ್ಯಕ್ಕೂ ಮೀನಾಕ್ಷಿಯವರ ಪ್ರತಿಕ್ರಿಯೆ ಕೇಳಲಿಲ್ಲ. ಮಿಕ್ಕಂತೆ ಪತ್ರಿಕೆಗಳು ಉಪಮೇಯರ್ ಬಾಯಿಂದ ಹೊರಬಿದ್ದ ಅಸಹ್ಯವನ್ನು ಪ್ರಕಟಿಸುವ ಧೈರ್ಯ ತೋರಿಲ್ಲ.

ಒಂದು ಪಕ್ಷ ಸೃಷ್ಟಿ ಟ್ರಸ್ಟ್‌ನಲ್ಲಿ ಅನೈತಿಕ ಚಟುವಟಿಕೆ ನಡೆದಿದ್ದರೆ ಅದರ ವಿರುದ್ಧ ಕ್ರಮ ಜರುಗಿಸುವುದು ಪೊಲೀಸರ ಕರ್ತವ್ಯ. ಮೀನಾಕ್ಷಿಯವರೇನಾದರೂ ವ್ಯಭಿಚಾರ, ಅನೈತಿಕತೆ ಎಸಗಿದ್ದರೆ ಶಿಕ್ಷೆ ನೀಡಲು ಕೋರ್ಟಿದೆ. ಯಾವುದೇ ಪೊಲೀಸ್ ಠಾಣೆಯಲ್ಲಿ ಇಂಥ ಯಾವುದೇ ದೂರು, ಮೊಕದ್ದಮೆಗಳಿಲ್ಲದಿದ್ದರೂ ವಿಷಯಕ್ಕೆ ಸಂಬಂಧವೇ ಇಲ್ಲದ ಮಹಿಳೆಯೊಬ್ಬಳ ಚಾರಿತ್ರ್ಯವಧೆ ಮಾಡಲು ಉಪಮೇಯರ್ ಹರೀಶ್ ಯಾರು? ಉಪಮೇಯರ್‌ಗೂ ಅಕ್ಕತಂಗಿಯರಿದ್ದರೆ ಇನ್ನಾರೋ ಲಫಂಗ ಅವರ ವಿರುದ್ಧ ಕ್ಷುಲ್ಲಕವಾಗಿ ಮಾತಾಡಿದರೆ ಅದನ್ನಾತ ಸಹಿಸುತ್ತಾನಾ?

ತನ್ನ ಅಕ್ಕ ತಂಗಿಯರಂತೆ ಬೇರೆ ಹೆಣ್ಣುಮಕ್ಕಳಿಗೂ ವೈಯಕ್ತಿಕ ಬದುಕಿದೆ, ಗೌರವವಿದೆ ಎಂಬುದನ್ನು ಆತನಿಗೆ ಹೇಳುವವರ್‍ಯಾರು?

ದೌರ್ಭಾಗ್ಯವೆಂದರೆ ತಾನೊಬ್ಬ ಮಹಿಳೆಯಾಗಿ ತನ್ನ ಪಕ್ಕದ ಛೇಂಬರಿನಲ್ಲೇ ಉಪಮೇಯರ್ ಮಹಿಳೆಯೊಬ್ಬಳ ಚಾರಿತ್ರ್ಯವಧೆ ನಡೆಸಿದ್ದನ್ನು ಕಂಡೂ ಮೇಯರ್ ಶಾರದಮ್ಮ ಈ ಬಗ್ಗೆ ದನಿಯೆತ್ತಲಿಲ್ಲ. ಬಿಜೆಪಿಯಲ್ಲೇ ಡಜನ್ನು ಮಹಿಳಾ ಕೌನ್ಸಿಲರ್‌ಗಳಿದ್ದಾರೆ. ಕರಂದ್ಲಾಜೆ, ವಿಮಲಾಗೌಡ, ಭಾರತಿ ಶೆಟ್ಟಿಯಂಥ ಮಹಿಳಾ ನಾಯಕಿಯರಿದ್ದಾರೆ. ಮರ್ಯಾದಸ್ಥ ನಾಯಕರಂತಿರುವ ಸುರೇಶ್ ಕುಮಾರ್, ಆಚಾರ್ಯ, ಸಂತೋಷ್‌ಜಿ ಯಾರಿಗೂ ಉಪಮೇಯರ್ ಹರೀಶನ ಕೀಚಕತನ ಅರ್ಥವಾಗಿಲ್ಲವೆ?

ಬಿಜೆಪಿಯ ಸ್ತ್ರೀಕಾಳಜಿಯೆಂದರೆ ಇದೇನಾ ಅಥವಾ ಲಫಂಗನೊಬ್ಬನನ್ನು ಉಪಮೇಯರ್ ಹುದ್ದೆಗೆ ತಂದ ತಪ್ಪಿಗೆ ಪಡಬೇಕಾದ ಪೇಚಾಟವಾ?

• ರಾ.ಸೋಮನಾಥ್

ನಂದಿನಿ ಲೇಔಟ್ ಎಸ್.ಐ. ಕೆಂಪರಾಜನ ಖಾಕಿ ಅಟ್ಟಹಾಸ


ಪತ್ರಿಕಾಗೋಷ್ಠಿ ಕರೆದು ಸೃಷ್ಟಿ ಟ್ರಸ್ಟ್ ಮುಖ್ಯಸ್ಥ ಗುರುಮೂರ್ತಿ ವಿರುದ್ಧ ಉಪಮೇಯರ್ ಹರೀಶ್ ವಿಷಕಾರಿದ ಕೇವಲ ಆರು ಗಂಟೆಯ ಒಳಗೆ ಪೊಲೀಸರು ಗುರುಮೂರ್ತಿಯನ್ನು ಬಂಧಿಸಿದ್ದಾರೆ. ಒಂದು ವಾರದ ಕಾಲ ನಂದಿನಿ ಲೇಔಟ್ ಠಾಣೆಯ ಲಾಕಪ್ಪಿನಲ್ಲಿಟ್ಟು ಗುರುಮೂರ್ತಿಗೆ ಚಿತ್ರಹಿಂಸೆ ನೀಡಿದ್ದಾರೆ. ಕೈಗೆ ಕೋಳ ತೊಡಿಸಿ ಸೃಷ್ಟಿ ಟ್ರಸ್ಟ್ ಎದುರೇ ಪರೇಡು ಮಾಡಿಸಿದ್ದಾರೆ. ಅದರ ಮರುದಿನ ಮತ್ತೆ ಕೈಕಾಲಿಗೆ ಕೋಳ ತೊಡಿಸಿಕೊಂಡೇ ಸೃಷ್ಟಿ ಟ್ರಸ್ಟಿಗೆ ಕರೆತಂದು ನೆರೆದ ಬಿಜೆಪಿ ಗೂಂಡಾಗಳೆಲ್ಲರಿಗೂ ತೃಪ್ತಿಯಾಗುವಂತೆ ನಡುರಸ್ತೆಯಲ್ಲಿ ನಿಲ್ಲಿಸಿ ಕೈಗೆ ಸ್ಲೇಟು ಕೊಟ್ಟು ಫೋಟೋ ತೆಗೆಸಿದ್ದಾರೆ. ಇದಾಗಿ ಎರಡೇ ದಿನಕ್ಕೆ ನಂದಿನಿ ಲೇಔಟ್ ಎಸ್.ಐ. ಕೆಂಪರಾಜು ಅರ್ಧ ಡಜನ್ ಪೊಲೀಸರ ಸಮೇತ ಮತ್ತೆ ಸೃಷ್ಟಿ ಟ್ರಸ್ಟಿಗೆ ನುಗ್ಗಿದ್ದೇ ತನ್ನ ಅಟ್ಟಹಾಸ ಗೊತ್ತಾಗದಿರಲಿ ಎಂದು ಮೊದಲು ಅಲ್ಲಿದ್ದ ಸೀಸಿ ಟೀವಿಯನ್ನು ಕಿತ್ತೆಸೆದಿದ್ದಾರೆ. ನಂತರ ಅಲ್ಲಿದ್ದ ಏಳೆಂಟು ಮಂದಿ ಮಹಿಳಾ ಸಿಬ್ಬಂದಿಯನ್ನು ಪೊಲೀಸರೇ ಎಳೆದೆಳೆದು ತಂದು ಹಾಲ್ ಒಂದರಲ್ಲಿ ಕೂಡಿ ಹಾಕಿದ್ದಾರೆ.

"ನಾವು ಇಲ್ಲಿ ನೌಕರಿಗಿರೋದು. ದೂರು ಇರೋದು ಗುರುಮೂರ್ತಿ ಮೇಲೆ ತಾನೆ?" ಎಂದು ಯುವತಿಯೊಬ್ಬಳು ಪ್ರಶ್ನಿಸಿದರೆ ದುರುಳ ಎಸ್.ಐ. ಕೆಂಪರಾಜು 'ಏನೇ ಲೌಡಿ ಮುಂಡೆ; ನಿನ್ನನ್ನೂ ಲಾಕಪ್ಪಿಗೆ ಹಾಕಿ ರುಬ್ಬಬೇಕಾ?' ಎಂದು ಆಕೆಯ ರಟ್ಟೆ ಹಿಡಿದದ್ದೇ ಗೋಡೆಗೆ ನೂಕಿಬಿಟ್ಟ. ಇಷ್ಟಾಗಿದ್ದೇ ಹೆದರಿದ ಈ ಹೆಣ್ಣು ಮಕ್ಕಳೆಲ್ಲ ಗರಬಡಿದವರಂತೆ ಅಳುವುದು, ಚೀರಾಡುವುದು ಮಾಡಿದ್ದಾರೆ. ನಂತರ ಅಲ್ಲಿದ್ದ ಪ್ರತಿ ಮಹಿಳಾ ಸಿಬ್ಬಂದಿಯನ್ನೂ ಒಬ್ಬೊಬ್ಬರಾಗಿ ಎಳೆದು ತಂದು ಗೋಡೆಗೆ ಒತ್ತಿ ಹಿಡಿದು ಪ್ರತ್ಯೇಕವಾಗಿ ಪ್ರತಿಯೊಬ್ಬರ ಫೋಟೋ ತೆಗೆಯಲಾಗಿದೆ. ಪ್ರತ್ಯೇಕವಾಗಿ ಫೋಟೋ ತೆಗೆದಿದ್ದು ಸಾಲದೆಂಬಂತೆ ಅಲ್ಲಿದ್ದ ಎಲ್ಲಾ ಹೆಣ್ಣುಮಕ್ಕಳನ್ನು ಒಟ್ಟಿಗೆ ನಿಲ್ಲಿಸಿ ಬೇರೆಬೇರೆ ದಿಕ್ಕಿನಿಂದ ಮತ್ತೆಮತ್ತೆ ಫೋಟೋ ಕ್ಲಿಕ್ಕಿಸಿದ್ದಾರೆ.

ಇದು ಜುಲೈ 22 ರ ಅಪರಾಹ್ನ ಸೃಷ್ಟಿ ಟ್ರಸ್ಟಿಗೆ ನುಗ್ಗಿದ ನಂದಿನಿ ಲೇಔಟ್ ಎಸ್.ಐ. ಕೆಂಪರಾಜು ಮತ್ತಾತನ ಖಾಕಿಪಡೆ ನಡೆಸಿದ ಕ್ರೌರ್ಯದ ಸ್ಯಾಂಪಲ್ಲಷ್ಟೆ. ಫೋಟೋ ತೆಗೆಯಲೆಂದೇ ಪೇದೆಯೊಬ್ಬನ ಕೈಗೆ ಎಸ್.ಐ. ಕೆಂಪರಾಜು ಕ್ಯಾಮರಾ ಕೊಟ್ಟಿದ್ದ. ನೀವೂ ಕೂಡ ಬಾಡಿಗೆ ತಾಯಿಗಳಾ ಅಥವಾ ಬಾಡಿಗೆಗೆ ಬರೋ ಗಾಡಿಗಳಾ? ಎಂದು ಅಲ್ಲಿದ್ದ ಹೆಣ್ಣುಮಕ್ಕಳನ್ನು ಛೇಡಿಸಿದ ಪೊಲೀಸರು ಫೋಟೋ ತೆಗೆಯುವ ಮುನ್ನ ಪ್ರತಿ ಯುವತಿಯ ಮನೆ ವಿಳಾಸ, ಫೋನ್ ನಂಬರು ಬರೆದುಕೊಂಡರು. ನಿಮಗೆಲ್ಲ ಮಾನಮರ್ಯಾದೆ ಇದ್ದಿದ್ದರೆ ನೀವೆಲ್ಲ ಒಳ್ಳೇ ಮನೆತನದ ಹೆಣ್ಣುಮಕ್ಕಳಾಗಿದ್ರೆ ಇಲ್ಲಿಗೇಕೆ ಕೆಲಸಕ್ಕೆ ಬರುತ್ತಿದ್ರಿ? ಎಂದು ಪೊಲೀಸರು ಪೀಡಿಸುತ್ತಿದ್ದುದ್ದನ್ನು ಕಂಡೇ ಯುವತಿಯೊಬ್ಬಳು ತಲೆಸುತ್ತು ಬಂದುಬಿದ್ದಳು. ಅಷ್ಟಕ್ಕೇ ಭೀತಿಗೆ ಬಿದ್ದ ಪೊಲೀಸರು ಇನ್ನೆಲ್ಲಿ ತಮ್ಮ ಬಣ್ಣ ಬಯಲಾಗುತ್ತೋ ಎಂದು ಪರಾರಿಯಾಗಿದ್ದಾರೆ. ಮರುದಿನವೇ ಟ್ರಸ್ಟ್‌ನ ಡ್ರೈವರ್ ನಾಗೇಶ್ ಎಂಬಾತನನ್ನು ಅನ್ಯಾಯವಾಗಿ ಲಾಕಪ್ಪಿಗೆ ಹಾಕಿದ್ದಾರೆ.



ಸೃಷ್ಟಿ ಟ್ರಸ್ಟ್‌ನ ಲೈಸೆನ್ಸ್ ರದ್ದು ಮಾಡಿದ ಪಾಲಿಕೆ ವಿರುದ್ಧ ಈಗಾಗಲೇ ರಾಜ್ಯ ಹೈಕೋರ್ಟ್ ತಡೆಯಾಜ್ಞೆ ನೀಡಾಗಿದೆ. ಹಾಗಿದ್ದೂ ತನ್ನ ಅಟ್ಟಹಾಸದ ವಿರುದ್ಧ ಪ್ರತಿಭಟಿಸಿದ ಗುರುಮೂರ್ತಿ ವಿರುದ್ಧ ಸೇಡು ತೀರಿಸಿಕೊಳ್ಳಬೇಕಲ್ಲ; ಅದಕ್ಕೆಂದು ಹರೀಶ್ ಛೂಬಿಟ್ಟಿದ್ದು ಪೊಲೀಸರನ್ನು. ಗುರುಮೂರ್ತಿ ಲೈಸೆನ್ಸ್ ಪಡೆಯಲು ನೀಡಿದ ಪದವಿ ಸರ್ಟಿಫಿಕೇಟೇ ನಕಲಿ ಎಂದು ಮಹಾಲಕ್ಷ್ಮಿ ಲೇಔಟಿನ ಆರೋಗ್ಯಾಧಿಕಾರಿ ನಂದಿನಿ ಲೇಔಟ್ ಠಾಣೆಗೆ ದೂರು ಸಲ್ಲಿಸುತ್ತಾನೆ. ಇದೆಲ್ಲವನ್ನೂ ಉಪಮೇಯರ್ ಹರೀಶನೇ ನಿಂತು ಮಾಡಿಸುತ್ತಾನೆ.



ಬೆಳಗ್ಗೆ ಪಾಲಿಕೆ ಕಚೇರಿಯಲ್ಲಿ ಈ ಬಗ್ಗೆ ಹರೀಶ್ ಪತ್ರಿಕಾಗೋಷ್ಠಿ ನಡೆಸಿದ ಬೆನ್ನಲ್ಲೇ ಸಮಯ ಟೀವಿಯ ಸುರೇಶ ಮತ್ತು ವಾಗೀಶ ಸೇರಿಕೊಂಡು ಗುರುಮೂರ್ತಿಯನ್ನು ಚರ್ಚೆಗೆ ಕರೆಸುತ್ತಾರೆ. ಏನೋ ಟೀವಿ ಸಂದರ್ಶನವೆಂದು ಬಂದರೆ ಸಮಯದ ಕ್ರೈಮ್ ರಿಪೋರ್ಟರ್ ನರೇಂದ್ರ ಮಡಿಕೇರಿ ಮತ್ತು ಹರೀಶನ ಗೂಂಡಾ ಬಂಟರು ಸೇರಿ ಗುರುಮೂರ್ತಿಯನ್ನು ಹಿಡಿದು ಎದುರಿದ್ದ ಕಬ್ಬನ್‌ಪಾರ್ಕ್ ಪೊಲೀಸರಿಗೊಪ್ಪಿಸುತ್ತಾರೆ. ಅಲ್ಲಿಗೆ ಬಂದ ಮಹಾಲಕ್ಷ್ಮಿ ಲೇಔಟ್ ಇನ್ಸ್‌ಪೆಕ್ಟರ್ ಅನಿಲ್‌ಕುಮಾರ್ ಗುರುಮೂರ್ತಿಯನ್ನು ತನ್ನ ಜೀಪಿಗೆ ಎತ್ತಾಕಿಕೊಳ್ಳುತ್ತಾರೆ. ಅಲ್ಲಿಂದ ನೇರವಾಗಿ ನಂದಿನಿ ಲೇಔಟ್ ಠಾಣೆಗೊಯ್ದು ಗುರುಮೂರ್ತಿಯನ್ನು ಲಾಕಪ್ಪಿಗೆ ಹಾಕುತ್ತಾರೆ. ಜಾಮೀನು ಸಿಗದಿರಲಿ ಎಂದು ಮರುದಿನ ನಡುರಾತ್ರಿ ಮ್ಯಾಜಿಸ್ಟ್ರೇಟರ ಮನೆಗೊಯ್ದು ಮತ್ತೆ ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆಯುತ್ತಾರೆ. ಆನಂತರ ನಡೆದದ್ದು ಖಾಕಿ ಕ್ರೌರ್ಯವೊಂದೇ. ಉಪಮೇಯರ್ ಹರೀಶ್ ಮತ್ತು ಆತನ ಬಿಜೆಪಿ ಬ್ರಿಗೇಡ್ ವಿರುದ್ಧ ಸೃಷ್ಟಿ ಟ್ರಸ್ಟ್ ಸಿಬ್ಬಂದಿ ಕೊಟ್ಟ ದೂರುಗಳಿಗೆ ಲೆಕ್ಕವಿಲ್ಲ. ವಾರದ ಹಿಂದಷ್ಟೇ ಟ್ರಸ್ಟ್ ಕಟ್ಟಡದ ಮೇಲೆ ದಾಳಿ ನಡೆಸಿದ ಹರೀಶನ ಶಿಷ್ಯರು ಕಚೇರಿಯ ಕಿಟಕಿ ಗಾಜಿಗೆ ಕಲ್ಲು ತೂರಿ ಮುಂದೆ ನಿಲ್ಲಿಸಿದ್ದ ಕಾರನ್ನು ಜಖಂಗೊಳಿಸಿದ್ದಾರೆ. ಅದಕ್ಕೂ ಹಿಂದೆ ಹರೀಶನ ವಾರ್ಡ್ ಕಚೇರಿಯಲ್ಲೇ ನ್ಯಾಯ ಕೇಳಲು ಬಂದಿದ್ದ ಮೀನಾಕ್ಷಿ ಮತ್ತಿಬ್ಬರು ಸಿಬ್ಬಂದಿಯನ್ನು ಕೂಡಿಟ್ಟು ಹಿಂಸಿಸಲಾಯ್ತು. ಈ ಬಗ್ಗೆ ದೂರು ನೀಡಲೆಂದು ಗುರುಮೂರ್ತಿ ಠಾಣೆಗೆ ಬಂದರೆ ಅಲ್ಲಿಗೆ ನುಗ್ಗಿದ ಹರೀಶ್ ಪೊಲೀಸ್ ಅಧಿಕಾರಿಗಳ ಎದುರೇ ಕೊಲೆ ಬೆದರಿಕೆ ಹಾಕಿದ. ಆತನ ರೌಡಿ ಬಂಟರು ಮಚ್ಚು ಲಾಂಗ್ ಹಿಡಿದು ಟ್ರಸ್ಟ್ ಸಿಬ್ಬಂದಿ ವಿರುದ್ಧ ನಡೆಸಿದ ಗೂಂಡಾಗಿರಿಯನ್ನು ಚಿತ್ರೀಕರಿಸಿ ವೀಡಿಯೋ ಸಮೇತ ದೂರು ನೀಡಿದರೂ ಪೊಲೀಸರಿಗಿದು ಲೆಕ್ಕಕ್ಕಿಲ್ಲ. ಈತನಕ ಯಾವೊಬ್ಬ ಬಿಜೆಪಿ ಪುಂಡನನ್ನೂ ಪೊಲೀಸರು ಬಂಧಿಸಿಲ್ಲ. ದೂರನ್ನೇ ಸ್ವೀಕರಿಸುವುದಿಲ್ಲ. ಆದರೆ ಹರೀಶ್ ಪಾಲಿಕೆ ಅಧಿಕಾರಿಗಳನ್ನು ಛೂಬಿಟ್ಟು ಕಳ್ಳದೂರು ಕೊಡಿಸಿದರೆ ಕೋರ್ಟ್ ತಡೆಯಿದ್ದರೂ ಪೊಲೀಸರು ಅಟ್ಟಹಾಸಗೈಯುತ್ತಾರೆ.

ಇನ್ನೂ ದುರಂತವೆಂದರೆ ಇದು ಬಿಜೆಪಿ ಗೂಂಡಾಗಿರಿಯ ವಿರುದ್ಧದ ಹೋರಾಟವೆಂದು ಗೊತ್ತಿದ್ದೂ ಡಿಸಿಪಿ ರೇವಣ್ಣ ಟೀವಿ ಕ್ಯಾಮರಾಗಳನ್ನು ಕರೆಸಿ ಗುರುಮೂರ್ತಿ ವಿರುದ್ಧ ಪತ್ರಿಕಾಗೋಷ್ಠಿ ನಡೆಸುತ್ತಾರೆ. ಹರೀಶ್ ಹೇಳಿಕೊಟ್ಟ ಪಾಠವನ್ನೇ ಪತ್ರಕರ್ತರಿಗೊಪ್ಪಿಸುತ್ತಾರೆ. ಹಾಗೊಮ್ಮೆ ಗುರುಮೂರ್ತಿ ನಕಲಿ ಅಂಕಪಟ್ಟಿ ಕೊಟ್ಟೇ ಲೈಸೆನ್ಸ್ ಪಡೆದಿದ್ದೇ ಆಗಿದ್ದರೆ ಅದಕ್ಕೆಂದು ಕೈಗೆ ಕಾಲಿಗೆ ಬೇಡಿ ಹಾಕಿ ಅವರದೇ ಆಫೀಸಿಗೇಕೆ ಕರೆತರಬೇಕು? ಟ್ರಸ್ಟ್‌ನಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳು ಮಾಡಿದ ತಪ್ಪಾದರೂ ಏನು? ಸಂಬಂಧವೇ ಇಲ್ಲದ ಹೆಣ್ಣುಮಕ್ಕಳ ಫೋಟೋ ತೆಗೆಸಿ, ಮೈಮೇಲೆ ಕೈಮಾಡಿ ದೌರ್ಜನ್ಯವೆಸಗಿದ ಪೊಲೀಸರ ಉದ್ದೇಶ ಗುರುಮೂರ್ತಿಯ ವಿರುದ್ಧ ಕಾನೂನುಕ್ರಮ ಜರುಗಿಸುವುದಾ ಉಪಮೇಯರ್ ಹರೀಶ್ ರೌಡಿ ಪಡೆಯ ವಿರುದ್ಧ ಬಾಯಿ ಮುಚ್ಚಿಸುವುದಾ?

ಗೃಹಮಂತ್ರಿ ಅಶೋಕ್ ಈ ಪಾಟ ಕುಲಗೆಟ್ಟರೆ ಬಿಜೆಪಿ ಗೂಂಡಾಗಿರಿಗೆ ಅಂಕುಶವೆಲ್ಲಿದೆ?


ಓಂ

ಲೋಕಾಯುಕ್ತರಿಗೆ ಮೋಡಿ ಮಸಲತ್ತು

ದಗಲುಬಾಜಿ ಧನಂಜಯನ ದಶಾವತಾರ

ಕರಾವಳಿಯ ಬಿಜೆಪಿ ಭೂಪರು ಆಗಾಗ ಗಣಿ ಗಲಾಟೆಗೆ ಅನಾಹುತಕಾರಿ ಸೆನ್ನೇಷನಲ್ ಆಯಾಮ ಕೊಡುತ್ತಲೇ ಇದ್ದಾರೆ. ಬಂದರು ಮಂತ್ರಿ ಕೃಷ್ಣ ಪಾಲೇಮಾರ್ ಎಂಬ ಪಾಕಡ ಪುರುಷ ಬೇಲೇಕೇರಿ ಬಂದರಿನಲ್ಲಿ ಲೋಕಾಯುಕ್ತ ಸೀಜ್ ಮಾಡಿದ್ದ ಕೋಟ್ಯಂತರ ರೂ. ಅಕ್ರಮ ಅದಿರನ್ನು ಕದ್ದು ವಿದೇಶಕ್ಕೆ ಸಾಗಿಸಿದ ಹಗರಣದಲ್ಲಿ ಮೂಗು ತೂರಿಸಿದ್ದು ದೊಡ್ಡ ರಾದ್ಧಾಂತಕ್ಕೆ ಕಾರಣವಾಗಿತ್ತು. ಪಾಲೇಮಾರ್‌ನ ಅಧಿಕಪ್ರಸಂಗ ಲೋಕಾಯುಕ್ತ ಸಂತೋಷ್ ಹೆಗ್ಡೆಯನ್ನೇ ರಾಜೀನಾಮೆ ಕೊಡುವಷ್ಟು ಕೆರಳಿಸಿತ್ತು. ಆಗ ಯಡ್ಡಿ ಸರ್ಕಾರದ ಗಣಿ ಲೂಟಿಯ ಒಂದು ಮುಖ ಸ್ಪಷ್ಟವಾಗಿ ಅನಾವರಣಗೊಂಡಿತ್ತು.

ಈಗ ಮತ್ತದೇ ಕರಾವಳಿ ಕಡೆಯ ಚೆಡ್ಡಿ ಧೂಮಕೇತುಗಳಾದ ಧನಂಜಯಕುಮಾರ್, ಡಾ.ವಿ.ಎಸ್.ಆಚಾರ್ಯ ಮತ್ತು ಎ.ಗೋಪಾಲಕೃಷ್ಣ ಕೊಡ್ಗಿ ಗ್ಯಾಂಗ್ ಕಟ್ಟಿಕೊಂಡು ಕಳ್ಳ ಯಡ್ಡಿ ಪರವಾಗಿ ಲೋಕಾಯುಕ್ತ ಹೆಗ್ಡೆ ಬಳಿ ವಿಫಲ ವಶೀಲಿಬಾಜಿಗೆ ಹೋಗಿದ್ದು ನ್ಯಾಯಾಂಗನಿಂದನೆಯಂಥ ಗಂಭೀರ ವಿವಾದದವನ್ನು ಎಬ್ಬಿಸಿಬಿಟ್ಟಿದೆ! "...ನಾವು ಲೋಕಾಯುಕ್ತ ಹೆಗ್ಡೆ ಮನೆಗೆ ಹೋಗಿದ್ದೇ ಆತನನ್ನು ಯಡ್ಡಿಗೆ ಡ್ಯಾಮೇಜ್ ಮಾಡದಂತೆ ಪಳಗಿಸಲಿಕ್ಕೆ..." ಎಂದು ಬಾಯಿಬಡುಕ ಧನಂಜಯ ಕಂಡ-ಕಂಡಲ್ಲಿ ಬೊಗಳತೊಡಗಿದ. ಇದು ಲೋಕಾಯುಕ್ತ ಹೆಗ್ಡೆ ಕಿವಿಗೂ ತಲುಪಿತ್ತು. ಧನಂಜಯನ ದುರಾಚಾರದಿಂದ ಸಿಟ್ಟಿಗೆದ್ದ ನ್ಯಾ.ಹೆಗ್ಡೆ ಆತನಿಗೆ ಫೋನಾಯಿಸಿ "... ಏನ್ರಿ ಧನಂಜಯ್... ಊರ ಕಡೆಯವರೆಂದು ಸಲಿಗೆ ಕೊಟ್ಟಿದ್ದಕ್ಕೆ ನನ್ನ ಬಗ್ಗೆ ಏನೇನೋ ಮಾತಾಡ್ತಾ ದ್ದೇನ್ನೋ ನಿಜ. ಆದರೆ ಆತನಿಗಿಂತ ಫಿಟ್ಟಿಂಗ್ ಮಾಸ್ಟರ್ ಧನಂಜಯನೇ ಯಡ್ಡಿ ಅಂತಃಪುರದಲ್ಲಿ ಪವರ್‌ಫುಲ್ ಆಗಿಹೋಗಿದ್ದ. ಸದಾ ಧನಂಜಯ ಒಂದಲ್ಲ ಒಂದು ಕಿರುಕುಳ ಪಾಲೇಮಾರ್‌ಗೆ ಕೊಡುತ್ತಲೇ ಇದ್ದ; ಈ ಕಿರಿಕಿರಿ ಒಂದು ಹಂತದಲ್ಲಿ ಪಾಲೇಮಾರ್‌ನನ್ನು 'ಮಾಜಿ ಮಂತ್ರಿ' ಮಾಡುವ ತನಕ ತಲುಪಿತ್ತು! ಧನಂಜಯನ ಚಾಡಿ ಮಾತು ಕೇಳಿ ಯಡ್ಡಿ ಕೆಲ ತಿಂಗಳ ಹಿಂದೆ ಪಾಲೇಮಾರ್‌ನನ್ನು ಮನೆಗೆ ಕಳಿಸಲು ಅಣಿಯಾಗಿದ್ದರು. ಕೊನೆಗೆ ಕರಾವಳಿಯ ಆರೆಸ್ಸೆಸ್ ಡಾನ್ ಡಾ.ಕಲ್ಲಡ್ಕ ಪ್ರಭಾಕರ ಭಟ್ಟನಿಗೆ ಒಂದಿಷ್ಟು ಕಪ್ಪ ಒಪ್ಪಿಸಿ ಉದ್ದಂಡ ನಮಸ್ಕಾರ ಮಾಡಿ ಪಾಲೇಮಾರ್ ಸಚಿವ ಸ್ಥಾನ ಉಳಿಸಿಕೊಳ್ಳಬೇಕಾಗಿ ಬಂದಿತ್ತು, ಪಾಪ!!




ಲೋಕಾಯುಕ್ತ ಸಂತೋಷ್ ಹೆಗ್ಡೆ

ತನ್ನನ್ನು ಸದಾ ಕಾಡುವ ಧನಂಜಯನಿಗೊಂದು 'ಗತಿ' ಕಾಣಿಸಲು ಪಾಲೇಮಾರ್ ಸಮಯಸಾಧಿಸುತ್ತಲೇ ಇದ್ದ. ಧನಂಜಯ ತಾನು ಲೋಕಾಯುಕ್ತರೊಂದಿಗೆ 'ಡೀಲ್' ನಡೆಸಿ ಸಿಎಂ ಸಾಹೇಬರ ಬಚಾಯಿಸಿದ್ದೇನೆಂದು ಬೊಂಬಡಾ ಬಜಾಯಿಸಿದ್ದನ್ನೇ ಪಾಲೇಮಾರ್ ಶತ್ರು ಸಂಹಾರಕ್ಕೆ ಅಸ್ತ್ರ ಮಾಡಿಕೊಂಡುಬಿಟ್ಟ! ಆರಂಭದಲ್ಲಿ ಧನಂಜಯನ ದುಸ್ಸಾಹಸದ ಕತೆ ಲೀಕ್ ಮಾಡಿದ್ದೇ ಈ ಪಾಲೇಮಾರ್ ತೊಡಗಿಸಿಕೊಂಡಿದ್ದ. 1983ರಲ್ಲಿ ಅಚಾನಕ್ ಮಂಗಳೂರಿನ ಶಾಸಕನಾಗಿ ಎರಡು ವರ್ಷ ಕಳೆದಿದ್ದ. ಆಗಾತ ಅಸೆಂಬ್ಲಿಯಲ್ಲಿ ಬಾಯಿ ಬಡಿದುಕೊಳ್ಳುತ್ತಿದ್ದ ರೀತಿ ಅಸಹ್ಯಕರವಾಗಿರುತ್ತಿತ್ತು. ಆ ನಂತರ ಮಂಗಳೂರಿನ ಎಂ.ಪಿ.-ಕೇಂದ್ರ ಮಂತ್ರಿಯಾಗಿದ್ದಾಗಲೂ ಈತನ ಸಡಿಲ ನಾಲಿಗೆ- ಸಡಿಲ ಚೆಡ್ಡಿ ಬಿಗಿಯಾಗಿರಲೇ ಇಲ್ಲ. ಎಂಪಿಯಾಗಿದ್ದಾಗಲೂ ಈತ ಭ್ರಷ್ಟಾಚಾರ-ರಂಗಿಲೂ ರಗಳೆಯಲ್ಲೇ ಸದಾ ಮುಳುಗೇಳುತ್ತಿದ್ದ. ಕೊಡಗಿನ ಕಾಫಿ ಬೋರ್ಡ್ ಗೆಸ್ಟ್ ಹೌಸಿನಲ್ಲಿ ಇಸ್ಪೀಟು-ಗುಂಡು-ತುಂಡುಗಳ ಆಟದಲ್ಲಿ ಹಗಲಿರುಳೂ ಮೈಮರೆಯುತ್ತಿದ್ದ.

ಕೇಂದ್ರದ ಹಣಕಾಸು ಖಾತೆಯ ಸಹಾಯಕ ಮಂತ್ರಿಯಾಗಿದ್ದಾಗ ಮಂಗಳೂರು ಮೂಲದ ಬಾಲಿವುಡ್ ನಟಿ ಐಶ್ವರ್ಯ ರೈ ಬುಡದವರೆಗೂ ಈತನ ಬಾಯಿಬಡುಕತನ ಹೋಗಿ ರಾದ್ಧಾಂತವಾಗಿತ್ತು. ಆಗ ಪ್ರಧಾನಿ ವಾಜಪೇಯಿಯೇ ಈತನ ಬಾಲ ಕಟ್ ಮಾಡಬೇಕಾಗಿ ಬಂದಿತ್ತು. ಈತನ ರಸಿಕತೆ-ರಗಳೆ-ಅವ್ಯವಹಾರ-ಜನಪೀಡನೆ ಸಂಘಪರಿವಾರದ ಸೂತ್ರಧಾರರನ್ನೇ ಕಂಗೆಡಿಸಿಬಿಟ್ಟಿತ್ತು. ಸೊಕ್ಕು ಮಿತಿಮೀರಿಹೋಗಿತ್ತು. ಆಗ ಕಲ್ಲಡ್ಕ ಭಟ್ರು ಈ ಧನಂಜಯ್‌ಗೆ ಇಲೆಕ್ಟಿವ್ ಪಾಲಿಟಿಕ್ಸ್‌ನಿಂದ ಮುಕ್ತಿ ನೀಡಿ ಡಾಗ್‌ಹೌಸ್‌ಗೆ ಕಳಿಸಿದ್ದರು. ಎಂಪಿಗಿರಿ ಟಿಕೆಟ್ ಫಲಾನುಭವಿ ಎ.ಜಿ.ಕೊಡ್ಗಿಯೂ ಇದ್ದರೂ ಫೇವರ್ ಕೇಳಿದ್ದು ಹಿಂದೆ-ಮುಂದೆ ಯೋಚಿಸದೆ ಮಾತಾಡುವ ಮಳ್ಳ ಧನಂಜಯನಾದರೂ ಈ ಗ್ಯಾಂಗಿಗೆ ಲೀಡರ್ ವಿ.ಎಸ್.ಆಚಾರ್ಯನಾಗಿದ್ದರು. ಈ ವಿಪ್ರೋತ್ತಮರು ತಾವು ನ್ಯಾ.ಹೆಗ್ಡೆಯ ಊರಮನೆಯವರೆಂಬ 'ಸಂಬಂಧ' 'ರಿಯಾಯತಿ' ದುರುಪಯೋಗಪಡಿಸಿಕೊಂಡು ಹೋಗಿದ್ದರು. ಗಣಿ ಹಗರಣದ ತನಿಖೆ ಮಾಡುತ್ತಿದ್ದ ಲೋಕಾಯುಕ್ತರ ಮನೆಗೇ ಆರೋಪಿ ಸ್ಥಾನದಲ್ಲಿರುವ ಸರ್ಕಾರದ-ಸಿಎಂನ ಪ್ರತಿನಿಧಿಗಳಾಗಿ 'ವಯೋವೃದ್ಧ ಚೆಡ್ಡಿ ಅನುಭವಿ' ಆಚಾರ್ಯ ಮತ್ತು ಕೊಡ್ಗಿಗಳು ರಹಸ್ಯವಾಗಿ ಹೋಗಿದ್ದು ಮೂರ್ಖತನವಷ್ಟೇ ಅಲ್ಲ, ಅಕ್ಷಮ್ಯ ಅಪರಾಧ. ಜತೆಗೆ ಮಾನಗೇಡಿ ಸಂಗತಿ ಬೇರೆ!!

ಸದಾ ಸುಭಗನಂತೆ ಪೋಸು ಕೊಡುತ್ತ ಕೊಚ್ಚೆ ರಾಜಕಾರಣ ಮಾಡುವ ಡಾ.ಆಚಾರ್ಯ ಲೋಕಾಯುಕ್ತರ ಕಾಣಲು ಹೋಗಿದ್ದು ಕಾನೂನು ಬಾಹಿರ-ಸಮಾಜ ಬಾಹಿರ-ಶಿಷ್ಟಾಚಾರಬಾಹಿರವಾಗಿ ವಶೀಲಿ ಮಾಡಲೆಂಬುದೀಗ ನಿಸ್ಸಂಶಯವಾಗಿ ಸಾಬೀತಾಗಿ ಹೋಗಿದೆ. ಧನಂಜಯರಷ್ಟೇ ಅಪರಾಧ ಮಾಡಿರುವ ಈ ಆಚಾರ್ಯ-ಕೊಡ್ಗಿ ಮಂತ್ರಿ ಅಥವಾ ಮಂತ್ರಿಗಿರಿ ಸಮಾನ ಸ್ಥಾನಮಾನದಲ್ಲಿರಲು ನಾಲಾಯಕ್ ಎಂಬುದನ್ನು ಸ್ವಯಂ ಸಾಬೀತುಪಡಿಸಿಕೊಂಡಿದ್ದಾರೆ. ಬಾಸ್ ಯಡ್ಡಿ ಸೂಚನೆಯಿಲ್ಲದೆ ಈ ತರಲೆ ತ್ರಿಮೂರ್ತಿಗಳು ನ್ಯಾಯಮೂರ್ತಿಗಳನ್ನೇ ದಾರಿ ತಪ್ಪಿಸುವ ದುಷ್ಕೃತ್ಯಕ್ಕೆ ಕೈಹಾಕಲು ಸಾಧ್ಯವೇ ಇಲ್ಲ. ಸಾಕ್ಷಾತ್ ಸಿಎಂ ಸಾಹೇಬರೇ ಬೆಂಗಾವಲಾಗಿರುವುದರಿಂದ ಈ ಪಾಪಿಗಳು ಘನಘೋರ ಪಾತಕ ಮಾಡಿಯೂ ಏನೂ ಇದ್ದೀರಲ್ರಿ... ಇನ್ನು ನನ್ನ ಮನೆ ಕಡೆ ಬಂದ್ರೆ... ಅಪಪ್ರಚಾರ ಮಾಡಿದ್ರೆ ಹುಷಾರ್...!!" ಎಂದು ಮಂಗಳಾರತಿ ಎತ್ತಿದ್ದೂ ಆಯ್ತು. ಅಲ್ಲಿಗೆ ಕರಾವಳಿಯ ಬಿಜೆಪಿ ಬಹದ್ದೂರರೇ ಯಡ್ಡಿ ಸರ್ಕಾರದ ಗಣಿ ಕರ್ಮಕಾಂಡ ತಾರ್ಕಿಕ ಅಂತ್ಯಕ್ಕೆ ತಂದು ನಿಲ್ಲಿಸಿದಂತಾಗಿ ಹೋಯ್ತು!




ಮಾಜಿ ಮಂತ್ರಿ ಧನಂಜಯಕುಮಾರ್

ತಾನು ಆಡುವ ಮಾತಿನ ಪರಿಣಾಮದ ಬಗ್ಗೆ ಎಂದೂ ತಲೆ ಕೆಡಿಸಿಕೊಳ್ಳದ ಎಡವಟ್ಟು ಬುದ್ಧಿಯ ಧನಂಜಯ ಇವತ್ತು ಬಿಜೆಪಿ ರಾಜ್ಯದಲ್ಲಿ ಪ್ರಾಕ್ಟೀಸ್ ಮಾಡುತ್ತಿರುವ ಅನೈತಿಕ-ನಿರ್ಲಜ್ಜ ರಾಜಕೀಯದ ಪ್ರಾತಿನಿಧಿಕ ಮಾಡೆಲ್‌ನಂತಿದ್ದಾನೆ! ಯಡ್ಡಿ (ಸರ್ಕಾರದ)ಯ ಈ ಪಿಆರ್ ಪ್ರಭೃತಿ ನ್ಯಾ.ಹೆಗ್ಡೆಯ ಬದ್ಧತೆ-ಪ್ರಾಮಾಣಿಕತೆ-ಕಾನೂನು ನಿಷ್ಠೆಯನ್ನೇ ಅನುಮಾನಕ್ಕೀಡುಮಾಡುವಂಥ ಪಾತಕ ಮಾಡಿಮುಗಿಸಿದ್ದಾನೆ. ಸದಾ ಕಾಲನ್ನು ಬಾಯಲ್ಲಿಟ್ಟುಕೊಳ್ಳುವ ಜಾಯಮಾನದ ದಗಲ್ಬಾಜಿ ಧನಂಜಯ ಕಳೆದಾರು ತಿಂಗಳಿಂದ "ನಾನು-ಆಚಾರ್ಯ-ಕೊಡ್ಗಿ ಲೋಕಾಯುಕ್ತ ಹೆಗ್ಡೆಯನ್ನು ಯಡ್ಡಿಗೆ ತೊಂದರೆ ಮಾಡದಂತೆ 'ಬುಕ್' ಮಾಡಿದ್ದೇವೆ... ಈಗೆಲ್ಲ ಸೆಟ್ಲ್ ಆಗಿದೆ.... ಲೋಕಾಯುಕ್ತರು ಗಣಿ ಹಗರಣದ ತನಿಖಾ ವರದಿ ಕೊಡದೇ ಹಾಗೇ ರಿಟೈರ್ಡ್ ಆಗ್ತಾರೆ... ಬೇಕಾದ್ರೆ ಬೆಟ್ ಕಟ್ತೇನೆ..." ಎಂದೆಲ್ಲ ಟಾಂ-ಟಾಂ ಮಾಡಿಕೊಂಡು ಓಡಾಡಿಕೊಂಡಿದ್ದ.


ಲೋಕಾಯುಕ್ತ ಹೆಗ್ಡೆ ಅಂತಿಮ ಗಣಿ ವರದಿಯಲ್ಲಿ ಸಿಎಂ ಯಡ್ಡಿ ವಿರುದ್ಧ ಏನೂ ಉಲ್ಲೇಖಿಸದಂತೆ 'ಮಂತ್ರ' ಮಾಡಿದ್ದೇನೆಂದು ಬಿಜೆಪಿಯ ಮಂತ್ರಿ-ಮಾಡಲೀಕರ ಮುಂದೆ ಬಡಾಯಿ ಕೊಚ್ಚಿಕೊಳ್ಳುವುದೇ ಧನಂಜಯಗೆ ಈಗೀಗ ಚಟವಾಗಿ ಹೋಗಿತ್ತು. ಧನಂಜಯನ ಈ 'ಸಾಧನೆ-ಸಾಹಸ ಪವರ್' ಆತನನ್ನು ಖೆಡ್ಡಾಕ್ಕೆ ಕೆಡವಲು ತವರೂರು(ಮಂಗಳೂರು) ಶತ್ರು-ಮಂತ್ರಿ, ಕೃಷ್ಣ ಪಾಲೇಮಾರ್ ನಾಜೂಕಾಗಿ ಬಳಸಿಕೊಂಡುಬಿಟ್ಟ! ಈ ಸೇಡಿಗೆ ಮಂಗಳೂರಿನ ಲೋಕಲ್ ರಾಜಕಾರಣ ಕಾರಣವಾಗಿತ್ತು. ಯಡ್ಡಿ ತಲೆಗೆ ಎಣ್ಣೆ ತಿಕ್ಕಿ ರಾಜ್ಯ ಸರ್ಕಾರದ ದಿಲ್ಲಿ ಪ್ರತಿನಿಧಿಯಾದ ಮರುಕ್ಷಣವೇ ಧನಂಜಯ ತನ್ನ ವಕೀಲಿ ಚಮತ್ಕಾರದ ದಾಳಿ ಅರೆಶಿಕ್ಷಿತ ಪೊಡ್ಮಣಿ ಪಾಲೇಮಾರ್ ಮೇಲೆ ಮಾಡಲಾರಂಭಿಸಿದ್ದ.

ಪಾಲೇಮಾರ್ ತನ್ನ ರಿಯಲ್ ಎಸ್ಟೇಟ್ ದಂಧೆಯ ಕಳ್ಳ ಕಾಸಿಂದ ಕ್ಯಾಬಿನೆಟ್ ದರ್ಜೆ ಮಂತ್ರಿಗಿರಿ ಖರೀದಿಸಿ ಮಹಾತ್ಮ! ಆ ನಂತರ ಧನಂಜಯನ ವಶೀಲಿಬಾಜಿ ಪುರಾಣ ಬರ್ನಿಂಗ್ ಈಶ್ಯೂ ಆಗಿ ಆತನ ಬಣ್ಣ-ಬಂಡವಾಳ ಬಯಲಾಗಿಸಿಬಿಟ್ಟಿತು. ಇಂಗುತಿಂದ ಮಂಗನಂತಾದ ಧನಂಜಯ ತಾನು ಲೋಕಾಯುಕ್ತರಲ್ಲಿ ಸಿಎಮ್ ಸೇವೆಗೇ ಫೇವರ್ ಕೇಳಲೇ ಇಲ್ಲವೆಂದು ಹಸಿಹಸೀ ಸುಳ್ಳು ಹೇಳಿ ಡ್ಯಾಮೇಜ್ ಕಂಟ್ರೋಲ್‌ಗೇ ತಿಣುಕಾಡಿದ. ಆಗ ಲೋಕಾಯುಕ್ತ ನ್ಯಾ.ಹೆಗ್ಡೆ ತನ್ನನ್ನು 'ಸುಳ್ಳುಗಾರ'ನೆಂದು ಪರೋಕ್ಷವಾಗಿ ಬಿಂಬಿಸಿದ ಧಗಾಕೋರ ಧನಂಜಯನ ಜನ್ಮ ಜಾಲಾಡಿಬಿಟ್ಟರು. "ಆ ಧನಂಜಯ ಒಂದಲ್ಲ ಎರಡೆರಡು ಬಾರಿ ನಿನ್ನ ಬಳಿ ಬಂದು ಸಿಎಂ ವಿರುದ್ಧ ದಾಖಲೆ ಸೃಷ್ಟಿಸಿ ಸಿಕ್ಕಿಹಾಕಬಾರದೆಂದು ದುಂಬಾಲು ಬಿದ್ದಿದ್ದ... ಬೇಕಿದ್ದರೆ ಆತನ ಸಂಗಡ ಬಂದಿದ್ದ ಮಂತ್ರಿ ಆಚಾರ್ಯ, ಮೂರನೇ ಹಣಕಾಸು ಆಯೋಗದ ಅಧ್ಯಕ್ಷ ಎ.ಜಿ.ಕೊಡ್ಗಿಯನ್ನೇ ಕೇಳಿ...." ಎಂದು ಕಪಾಳಮೋಕ್ಷ ಮಾಡಿಬಿಟ್ಟರು!!



ಮಂತ್ರಿ ಡಾ. ಆಚಾರ್ಯ

ಅಷ್ಟೇ ಅಲ್ಲ "ನಾನೊಮ್ಮೆ ದಿಲ್ಲಿಯ ಕರ್ನಾಟಕ ಭವನದಲ್ಲಿದ್ದಾಗ ಸಾಕ್ಷಾತ್ ಸಿಎಂ ಸಾಹೇಬರನ್ನೇ ನನ್ನ ಕೋಣೆಗೆ ಈ ಧನಂಜಯ ಕರಕೊಂಡು ಬಂದಿದ್ದ... ಎನ್‌ಡಿಟಿವಿ ಪ್ರಶಸ್ತಿ ನನಗೆ ಸಿಕ್ಕಿದ್ದಕ್ಕೆ ಅಭಿನಂದಿಸುವ ನೆಪದಿಂದ ಅವರಿಬ್ಬರೂ ಬಂದಿದ್ದರು... ಈ ಆಗಮನವೂ ನನ್ನನ್ನು ವಶೀಕರಿಸುವ ಟ್ರಿಕ್ಕಾಗಿತ್ತು..." ಎಂದು ನ್ಯಾ.ಹೆಗ್ಡೆ ಸಿಎಂ ಯಡ್ಡಿ ಮತ್ತವನ ಬಂಟ ಧನಂಜಯನ ಕಾನೂನುಬಾಹಿರ ಭಂಡಾಟವನ್ನು ಖುಲ್ಲಾಂಖುಲ್ಲಾ ಬಹಿರಂಗ ಮಾಡಿಬಿಟ್ಟರು.




ಪಾಲೇಮಾರ್

ಧನಂಜಯನ ಬಾಯಿ ಯಾವಾಗಲೂ ಬೊಂಬಾಯಿ; ಆತ ಸಾರ್ವಜನಿಕ ಬದುಕಿನಲ್ಲೊಂದು ಘನಘೋರ ಲಯಬಿಲಿಟಿ; ಪ್ರಜ್ಞಾವಂತ ಮಂಗಳೂರಿಗರಿಗೆ ಕೊಳಕು ಜಾಹೀರಾತು- ಹಾಗೆಂಬುದು ಸಾಮಾನ್ಯರ ಅಭಿಪ್ರಾಯ. ಮಂಗಳೂರಲ್ಲಿ ಫೂಟ್ ಲಾಯರಿ ಆಗಿದ್ದ ಈತ 1980ರ ದಶಕದಲ್ಲಿ ಬಿಜೆಪಿಯ ಬೂಟಾಟಿಕೆ ರಾಜಕಾರಣದಲ್ಲಿ ಕೊಡದೆ ಸದಾನಂದ ಗೌಡರಿಗೆ ಚಾನ್ಸ್ ಕೊಟ್ಟಿತ್ತು ಆರೆಸ್ಸೆಸ್ ಹೈಕಮಾಂಡ್. ಬಿಜೆಪಿಯಲ್ಲೀತನಿಗೆ ಕ್ಯಾರೇ ಅನ್ನುವವರೇ ಇರಲಿಲ್ಲ. ಆಗಾತ ಕಾಂಗ್ರೆಸ್‌ಗೆ ನುಸುಳಲಿಕ್ಕೂ ಹವಣಿಸಿದ್ದ. ಆದರೆ ಕಾಂಗ್ರೆಸ್ ಕದ ತೆರೆದುಕೊಳ್ಳಲಿಲ್ಲ. ಆಗ ಅನಿವಾರ್ಯವಾಗಿ ಎಂಟು ವರ್ಷ ಅಜ್ಞಾತವಾಸವನ್ನು ಧನಂಜಯ ಅನುಭವಿಸಬೇಕಾಗಿ ಬಂತು.

ಎಲ್ಲೂ ಸಲ್ಲದೆ ಮೂಲೆ ಹಿಡಿದಿದ್ದ ಧನಂಜಯ ಬಿಲದಿಂದ ಹೊರಬಂದಿದ್ದೇ ಯಡ್ಡಿ ಸಿಎಂ ಆದ ಒಂದು ವರ್ಷದ ನಂತರ. ಹಗರಣಗಳಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿದ್ದ ಯಡ್ಡಿಯನ್ನು ಸಮರ್ಥಿಸುವವರು-ಹೊಗಳುವವರು ಯಾರೂ ಇಲ್ಲದಿದ್ದಾಗ ಈ ದೊಡ್ಡ ಗಂಟಲಿನ ಬಾಯಿಬಡುಕನ 'ಪ್ರತಿಭೆ' ಪ್ರಯೋಜನಕ್ಕೆ ಬಂತು. ಎಡವಟ್ಟು ಯಡ್ಡಿಯ ಅಧಿಕೃತ ವಕ್ತಾರನಂತಾಗಿಹೋದ. ಟಿವಿ ಚಾಟ್ ಷೋಗಳಲ್ಲಿ ಸ್ವತಃ ಸಿಎಂ ಯಡ್ಡಿಯೇ ನಾಚುವಷ್ಟು ಜೋರಾಗಿ-ಅಸಹ್ಯವಾಗಿ ಬಿಜೆಪಿ ಸರ್ಕಾರದ 'ಬಾರಾಕೂನ್' ಸಮರ್ಥಿಸುತ್ತ ಯಡ್ಡಿಯ ನಂಬಿಗಸ್ಥ ಚೇಲನಾಗಿ ಹೋದ. ಇದಕ್ಕೆ ಇನಾಮಾಗಿ ದಿಲ್ಲಿ ಪಿಆರ್‌ಗಿರಿ ಮತ್ತು ಗೂಟದ ಕಾರೂ ಸಿಕ್ಕಿತು. ಈ ಸರ್ಕಾರಿ ಸೌಲಭ್ಯ ಸಿಕ್ಕಿದ್ದೇ ತಡ ಹುಂಬ ಧನಂಜಯ ಕೊಳಕು ನಾಲಿಗೆಗೆ ಸಾಣೆ ಹಾಕಿಕೊಂಡು ಕಳ್ಳ ಯಡ್ಡಿ ಸರ್ಕಾರದ ವಕಾಲತ್ತಿಗೆ ನಿಂತುಬಿಟ್ಟ. ಯಡ್ಡಿಯನ್ನು ಸಂಪ್ರೀತಗೊಳಿಸಲು ಅಪದ್ಧ ಬೊಗಳುವ ಚಾಳಿ ಅಂಟಿಸಿಕೊಂಡಿರುವ ಧನಂಜಯನ ಆಚಾರವಿಲ್ಲದ ನಾಲಿಗೆ ತಾನು ಆರೋಪಿ ಯಡ್ಡಿ ಮತ್ತು ನ್ಯಾಯಾಧೀಶ ಹೆಗ್ಡೆಗೆ 'ರಾಜಿ' ಮಾಡಿಸಿದ್ದೇನೆಂದು ನ್ಯಾಯಾಂಗನಿಂದನೆಯಂಥ ಅಪರಾಧ ಮಾಡುವತನಕ ಹೊರಳಾಡಿಬಿಟ್ಟಿದೆ!!

ಗಣಿ ಹಗರಣದ ಕಿಂಗ್ ಪಿನ್‌ನಂತಿರುವ ಚೋರ ಯಡ್ಡಿಯನ್ನು ಕಾಪಾಡುವಂತೆ ಲೋಕಾಯುಕ್ತ ಹೆಗ್ಡೆ ಬಳಿ ಇನ್‌ಫ್ಲ್ಯೂಯೆನ್ಸ್‌ಗೆ ಹೋಗಿದ್ದ ಧೋಖಾಬಾಜಿ ಧನಂಜಯನ ತಂಡದಲ್ಲಿ ಮಂತ್ರಿ ವಿ.ಎಸ್.ಆಚಾರ್ಯ ಮತ್ತು ಮೂರನೇ ಹಣಕಾಸು ಆಯೋಗವೆಂಬ ಪುನರ್ವಸತಿ ಕೇಂದ್ರದ ಮಾಡದಂತೆ ನಿರಾಳವಾಗಿ ಸರ್ಕಾರಿ ಸವಲತ್ತು ಭೋಗಿಸುತ್ತಿದ್ದಾರೆ.

ಅಧಿಕಾರ ಉಳಿಸಿಕೊಳ್ಳಲು ಯಡ್ಡಿ ಮತ್ತವರ ದುಷ್ಟಕೂಟ ಎಂಥ ಕರಾಮತ್ತಿಗೂ ಹೇಸುವುದಿಲ್ಲವೆಂಬುದು ಲೋಕಾಯುಕ್ತರನ್ನು ಪ್ರಭಾವಿತಗೊಳಿಸಲು ಧನಂಜಯ-ಆಚಾರ್ಯ-ಕೊಡ್ಗಿ ಎಂಬ ಅಧಿಕಪ್ರಸಂಗಿ ಅವಾಂತರಕಾರಿಗಳು ಆಡಿದ 'ಆಟ' ಸಾಬೀತುಪಡಿಸಿದೆ. ಮಾನ-ಮರ್ಯಾದೆ ಇದ್ದವರಾಗಿದ್ದರೆ ಇಂಥ ಅಪರಾಧ ಮಾಡಿ ಸಾಕ್ಷ್ಯಾಧಾರ ಸಮೇತ ಸಿಕ್ಕಿಬಿದ್ದು ಸ್ವತಃ ನ್ಯಾಯಾಧೀಶರಿಂದಲೇ ಥೀ..ಥೂ.. ಅನ್ನಿಸಿಕೊಂಡ ತಕ್ಷಣ ಅಧಿಕಾರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಇದ್ದಬದ್ದ ಮಾನವನ್ನಾದರೂ ಉಳಿಸಿಕೊಳ್ಳುತ್ತಿದ್ದರು. ಬಿಜೆಪಿಯ ದುರಾಚಾರದ ದರ್ಬಾರಿನಲ್ಲಿ ಆತ್ಮಸಾಕ್ಷಿಯೇ ಸತ್ತುಹೋಗಿರುವಾಗ ನಾಚಿಕೆ-ನೈತಿಕತೆ ಎಲ್ಲಿಂದ ಬಂದೀತು?



ಎ.ಜಿ.ಕೊಡ್ಗಿ

ವಿಚಿತ್ರವೆಂದರೆ ಇಷ್ಟೆಲ್ಲ ನಖರಾಗಳನ್ನು ಆಳುವ ಖಳರು ಮಾಡಿದರೂ ಲೋಕಾಯುಕ್ತ ಹೆಗ್ಡೆಯವರೇಕೆ ಸುಮ್ಮನಿದ್ದಾರೆ. ಯಡ್ಡಿ-ಧನಂಜಯ-ಆಚಾರ್ಯ-ಕೊಡ್ಗಿ ಕಾನೂನುಬಾಹಿರ ಭಂಡಾಟ ಮಾಡಿದ್ದಾರೆಂದು ಬರೀ ಮಾತಷ್ಟೇ ಯಾಕೆ ಆಡುತ್ತಿದ್ದಾರೆ. ಈ ದುಷ್ಟ ಚತುಷ್ಟಯರು ಮಾಡಿರುವ ಅಪರಾಧ ಅಂತಿಂಥದ್ದಲ್ಲ, ಅದು ನ್ಯಾಯಾಂಗ ನಿಂದನೆಗೆ ಸಮ. ಹೀಗಿರುವಾಗ ಲೋಕಾಯುಕ್ತರು ಕಾನೂನು ಕ್ರಮವೇಕೆ ಕೈಗೊಳ್ಳುತ್ತಿಲ್ಲ? ನ್ಯಾಯಾಧೀಶರೊಬ್ಬರಿಗೆ ವಶೀಲಿ ಮಾಡಿದ ಪ್ರಕರಣದಲ್ಲಿ ಅವರ ಹೇಳಿಕೆಯೇ ಅಂತಿಮ; ತನ್ನ ಕರ್ತವ್ಯನಿಷ್ಠೆ-ಬದ್ಧತೆ-ಪ್ರಾಮಾಣಿಕತೆ-ಕಾನೂನು ನಿಷ್ಠೆಯನ್ನೇ ಪ್ರಶ್ನಿಸಿದ ಮತ್ತು ಸಾರ್ವಜನಿಕರಲ್ಲಿ ತನ್ನ ಬಗ್ಗೆ ಸಂಶಯ ಮೂಡಿಸಿದ ಅಪರಾಧಿಗಳ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರ ನ್ಯಾ.ಹೆಗ್ಡೆಗೆ ಇದೆ.

ಅಪರಾಧಿಗಳಿಗೆ ಶಿಕ್ಷೆ ಕೊಡಲು ಅವರಿಗಿರುವ ಅಧಿಕಾರವೇ ಸಾಕು. ಯಾಕೆ ಲೋಕಾಯುಕ್ತ ಹೆಗ್ಡೆ ಸುಮ್ಮನಿದ್ದಾರೆ? ಅಧಿಕಾರಾವಧಿ ಮುಗಿಯುವುದರೊಳಗೆ ಧನಂಜಯನಂಥ ಲೇವಾದೇವಿದಾರನಿಗೆ, ಆಚಾರ್ಯ-ಕೊಡ್ಗಿಯಂಥ ಅನಾಹುತಕಾರಿ ನಾಜೂಕಯ್ಯಗಳಿಗೆ ಪಾಠ ಕಲಿಸಿಯಾರೇ?

ಹಾಗಂತ ರಾಜ್ಯದ ಪ್ರಜ್ಞಾವಂತ ಜನ ಹಪಹಪಿಸುತ್ತಿದ್ದಾರೆ!

• ನಹುಷ



ಹುಬ್ಬಳ್ಳಿ ಬಿಂದಾಸ್ ಬೆತ್ತಲಾದ ನರ್ಸಿಂಗ್ ಕಾಲೇಜ್ ಪ್ರಿನ್ಸಿ...

ರಿಚೇಲ್ ಬ್ಲೂಫಿಲ್ಮ್ ಬ್ಲಾಕ್‌ಮೇಲ್


ಒಂದು ಕಾಲದಲ್ಲಿ ಹುಬ್ಬಳ್ಳಿ ಕಾಂಗ್ರೆಸ್ ಯುವ ನಾಯಕನಾಗಿ ಮೆರೆದಿದ್ದ ಪ್ರಕಾಶ ಚಿಮ್ಮನಚೂಡ ಅಲಿಯಾಸ್ ಆರ್.ಜೆ.ಎಸ್. ಪ್ರಕಾಶನ ಖಾಸಾ ಹೆಂಡತಿ ರಿಚೇಲ್ ಈಗ ತನ್ನ ಹುಸಿ ಬಿಸಿ ಬ್ಲೂಫಿಲ್ಮ್‌ನಿಂದ ಸುದ್ದಿ ಮಾಡುತ್ತಿದ್ದಾಳೆ. ಪ್ರಕಾಶ ಕಟ್ಟಿ ಬೆಳೆಸಿದ್ದ ಶ್ರೀ ಬಾಬಾ ನರ್ಸಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಆಗಿರುವ ರಿಚೇಲ್ ಬಿಂದಾಸ್ ಆಗಿ ಬೆತ್ತಲಾಗಿರುವ ನೀಲಿ ಚಿತ್ರ ಇಂದು ಅವಳಿನಗರದ ಪಡ್ಡೆ ಹುಡುಗರ ಮೊಬೈಲ್‌ನಲ್ಲಿ ತೇಲಾಡುತ್ತಿದೆ. ಕುಡಿದ ಅಮಲಿನಲ್ಲಿ ಕತ್ತಲ ಕೋಣೆಯಲ್ಲಿ ಉದ್ದೇಶಪೂರ್ವಕವಾಗಿಯೇ ಚಿತ್ರೀಕರಿಸಲಾದ ಅಸಹ್ಯಕರ ಬ್ಲೂಫಿಲ್ಮ್‌ಗೆ ಈಗ ಭಾರಿ ಬೇಡಿಕೆ ಬಂದಿದೆ. ರಿಚೇಲ್ ಳೊಂದಿಗೆ ಕಾಮದಾಟದಲ್ಲಿ ಪಾಲ್ಗೊಂಡ ಪುರುಷನ ಸುಳಿವು ಸಿಗದ ಹಾಗೆ ಈ ನೀಲಿ ಚಿತ್ರವನ್ನು ತೆಗೆಯಲಾಗಿದೆ. ಆದರೆ ಇದು ಈಗ ಬಯಲಾಗಿರುವುದರ ಹಿಂದೆ ಸಂಶಯಗಳು ಹುಟ್ಟಿಕೊಂಡಿವೆ. ತಾನೇ ಮನಸಾರೆ ಒಪ್ಪಿಕೊಂಡು ಚಿತ್ರೀಕರಿಸಿದಂತಿರುವ ಬ್ಲೂ ಫಿಲ್ಮ್ ಬೀದಿಗೆ ಬಂದಾಗಿನಿಂದ ರಿಚೇಲ್ ದಿನಕ್ಕೊಂದು ಹೊಸ ಡ್ರಾಮ ಶುರು ಹಚ್ಚಿದ್ದಾಳೆ. ಯಾರೋ ತನ್ನ ಮೇಲೆ ಗೂಬೆ ಕೂರಿಸಲು ಈ ರೀತಿ ಮಾಡಿದ್ದಾರೆ, ಇದು ತನ್ನದಲ್ಲಾ ಎಂದೆಲ್ಲಾ ಹೊಸ ಸ್ಟೋರಿಗಳೊಂದಿಗೆ ಪೊಲೀಸರಿಗೆ ದೂರು ಕೊಟ್ಟಿದ್ದಾಳೆ.

ರಿಚೇಲ್ ಚಿಮ್ಮನಚೂಡಳ ಹಿಂದಿನ ಇತಿಹಾಸ ಕೆದಕುತ್ತಾ ಹೋದರೆ ಇಂತಹ ಚಾರಿತ್ರ್ಯಹೀನ ಕೆಲಸಗಳು ಇವಳಿಗೆ ಹೊಸತಲ್ಲ ಎಂಬ ವಿಚಾರ ಸ್ಪಷ್ಟವಾಗುತ್ತದೆ. ಕಾಲೇಜಿನ ದಿನಗಳಿಂದಲೂ ಈಕೆ ಅಷ್ಟು ಫೇಮಸ್ಸು. ಸದಾ ಒಂದಿಲ್ಲೊಂದು ವಿವಾದವನ್ನು ಬೆನ್ನಿಗಿಟ್ಟುಕೊಂಡೇ ಬದುಕಿದ್ದು ಇವಳ ವಿಶೇಷ. ಹುಬ್ಬಳ್ಳಿ ಯುವ ಕಾಂಗ್ರೆಸ್ಸಿನಲ್ಲಿ ಒಂದು ಲೆವೆಲ್ ಉಳಿಸಿಕೊಂಡಿದ್ದ ಇವಳ ಗಂಡ ಪ್ರಕಾಶ ಕುಡಿತಕ್ಕೆ ಬಿದ್ದು ಎರಡು ವರ್ಷಗಳ ಹಿಂದೆ ಪ್ರಾಣಬಿಟ್ಟ.

ರೈಲ್ವೆ ಇಲಾಖೆಯಲ್ಲಿ ನೌಕರಿಯಲ್ಲಿದ್ದ ಶಿವರಾಮಪ್ಪ ಚಿಮ್ಮನಚೂಡರ ನಾಲ್ಕು ಮಕ್ಕಳ ಪೈಕಿ ಮೂರನೆಯವನೆ ಈ ಪ್ರಕಾಶ. ಕೇಂದ್ರ ಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರ ಸಹಪಾಠಿಯಾಗಿರುವ ಶಿವರಾಮಪ್ಪ ಸರಳ ಮತ್ತು ಸೌಮ್ಯ ಜೀವಿ. ಯಾವೊಂದು ಗೋಜಿಗೂ ಸಿಲುಕದವರು. ಇಂಥವರ ಮಗನಾದ ಪ್ರಕಾಶ ಕಾಲೇಜು ಜೀವನದಿಂದಲೂ ಟಪೋರಿ ಎನಿಸಿಕೊಂಡವ. ಸ್ಟೂಡೆಂಟ್ ಯುನಿಯನ್ ಮುಖಂಡನಾಗಿದ್ದವ. ಮಂತ್ರಿ ಬಸು ಬೊಮ್ಮಾಯಿಯ ಬಲಗೈ ಭಂಟ, ಚನ್ನೂ ಪಾಟೀಲನ ಗೂಂಡಾ ತಮ್ಮ ಶಿವೂ ಪಾಟೀಲನ ಜೊತೆ ಸೇರಿ ಮಾಡಬಾರದ್ದನ್ನೆಲ್ಲಾ ಮಾಡಿ ಮುಗಿಸಿದ್ದ. ಹುಬ್ಬಳ್ಳಿಯ ರೌಡಿಗಳ ಅಡ್ಡೆ ಆರ್.ಜೆ.ಎಸ್. ಏರಿಯಾದಲ್ಲಿದ್ದರಿಂದ ಇವನನ್ನು ಆರ್.ಜೆ.ಎಸ್. ಪ್ರಕಾಶ ಎಂದೆ ಜನ ಗುರುತಿಸಿದ್ದರು.

ಪ್ರೀತಿ ಹೆಸರಲ್ಲಿ ಆಮರಿಕೊಂಡಳು ರಿಚೇಲ್

ಒಂದು ಹಂತದಲ್ಲಿ ಪೂರ್ಣ ಹಾದಿಬಿಟ್ಟಿದ್ದ ಪ್ರಕಾಶ ತನ್ನ ಬೆನ್ನಿಗೆ ಆರೆಂಟು ಪುಢಾರಿಗಳನ್ನಿಟ್ಟುಕೊಂಡು ಅಲೆದಾಡುತ್ತಿದ್ದಾಗ ಪ್ರೀತಿ, ಪ್ರೇಮದ ಹೆಸರಲ್ಲಿ ಪರಿಚಿತಳಾದ ರಿಚೇಲ್ ಅಬ್ಬಿಸ್ 1989ರಲ್ಲಿ ನೆಹರು ಕಾಲೇಜಿನ ವಿದ್ಯಾರ್ಥಿನಿ. ಇವಳ ಮಾಯದಾಟಕ್ಕೆ ಮರುಳಾದ ಪ್ರಕಾಶ ಮುಂದೆ ಇವಳಿಗೋಸ್ಕರ ಮನೆಯವರಿಂದಲೂ ದೂರವಾಗಿ ವಿರೋಧ ಕಟ್ಟಿಕೊಂಡ. ಪ್ರಾಟೆಸ್ಟೆಂಟ್ ಕ್ರೈಸ್ತನಾಗಿ ಮತಾಂತರಗೊಂಡು ನಂತರ ರಿಚೇಲ್‌ಳನ್ನು ಮದುವೆಯಾದ. ನೆಹರು ನಗರದಲ್ಲಿ ಬಾಡಿಗೆ ಮನೆಯೊಂದರಲ್ಲಿ ಸಂಸಾರ ಪ್ರಾರಂಭಿಸಿದ ಕಾಲದಲ್ಲಿ ಈ ದಂಪತಿಗಳಿಬ್ಬರ ಬಳಿ ಹಣವಿರಲಿಲ್ಲ, ಹೀಗಾಗಿ ತಮ್ಮ ಮುಂದಿನ ಜೀವನಕ್ಕಾಗಿ ಇವರು ಆರಿಸಿಕೊಂಡಿದ್ದು ಪಕ್ಕಾ ಅಕ್ರಮ ದಂಧೆಗಳನ್ನು. ಹಣ ಡಬ್ಲಿಂಗ್, ಬಡ್ಡಿ ವಸೂಲಿ, ನಾಗಮಣಿ, ಆಮೆ, ಎರಡು ತಲೆ ಹಾವು, ಗಜಮಣಿ ಎಂದೆಲ್ಲ ಜನರಿಗೆ ಟೋಪಿ ಹಾಕುವ ಚೀಟಿಂಗ್ ವ್ಯವಹಾರಗಳು ಸ್ವಲ್ಪಮಟ್ಟಿಗೆ ಹಣದ ವಿಚಾರದಲ್ಲಿ ಆರ್.ಜೆ.ಎಸ್. ಪ್ರಕಾಶನನ್ನು ಎತ್ತಿ ಹಿಡಿದವು. ತಮ್ಮ ಮನೆ ಎದುರಿದ್ದ ರೈಲ್ವೆ ಟಿ.ಸಿ. ರಮೇಶರಾಜು ಎಂಬಾತನನ್ನು ದಿನಂಪ್ರತಿ ಎಣ್ಣೆ ಪಾರ್ಟಿ ನೆಪದಲ್ಲಿ ಒಳಸೇರಿಸಿಕೊಂಡು ಅವನ ಮನೆಯನ್ನು ಬರೆಸಿಕೊಂಡ ನಟೋರಿಯಸ್ ದಂಪತಿಗಳಿವರೆಂಬುದು ಇಂದಿಗೂ ಸುದ್ದಿಯಲ್ಲಿದೆ.




ಅನಿಲ್‌ಕುಮಾರ್ ಪಾಟೀಲ್

ರೈಲ್ವೆವರ್ಕ್‌ಶಾಪ್‌ಗೆ ಕೆಲವೊಂದು ವಸ್ತುಗಳನ್ನು ಪೂರೈಸುವ ಗುತ್ತಿಗೆ ಪಡೆದಿದ್ದ ಪ್ರಕಾಶ ಅದರಿಂದ ಬಂದ ಹಣವನ್ನು ಬಡ್ಡಿ ದಂಧೆಗೆ ಹಾಕಿದ್ದ. ಆದರೆ ಇವರ ಶೋಕಿಗೆ ಎಷ್ಟು ಹಣ ಬಂದರೂ ಸಾಲದಂತ ಪರಿಸ್ಥಿತಿ ನಿರ್ಮಾಣವಾಗಿತ್ತು, ಆವಾಗಲೇ ಫುಲ್ ಟೈಮ್ ರೌಡಿಸಂಗಿಳಿದು ಹಫ್ತಾ ವಸೂಲಿ ನಡೆಸಲು ಪ್ರಾರಂಭಿಸಿದ. ಸಿಗರೇಟು ಸೇದುವ ಹವ್ಯಾಸವೊಂದನ್ನು ಬಿಟ್ಟರೆ ಬೇರಾವ ಚಟಗಳೂ ಇವನಲ್ಲಿ ಇರಲಿಲ್ಲ, ರಾಜಕಾರಣದ ಹುಚ್ಚೊಂದೆ ಈತನನ್ನು ಏನೆಲ್ಲಾ ಮಾಡಲು ಹಚ್ಚಿದ್ದು, ಮಾಜಿ ಮಂತ್ರಿ ಗೋಪಿನಾಥ ಸಾಂಡ್ರಾ, ಮಾಜಿ ಮೇಯರ್ ಅನಿಲ್ ಕುಮಾರ ಪಾಟೀಲ, ಸತೀಶ ಮೆಹರ್ವಾಡೆ, ಸಂಗೂ ಹುರಕಡ್ಲಿ, ಇತ್ತೀಚಿಗೆ ಬಿ.ಜೆ.ಪಿ ಸೇರಿರುವ ಮುನವಳ್ಳಿ ಶಂಕ್ರಣ್ಣರ ಜೊತೆ ಸ್ನೇಹ ಬೆಳೆಸಿಕೊಂಡಿದ್ದ ಪ್ರಕಾಶ್ ಕಾರ್ಪೊರೇಟರ್ ಆಗುವ ಕನಸು ಕಂಡಿದ್ದ. ಆದರೆ 2001 ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರು ಇವನಿಗೆ ಟಿಕೆಟ್ ಕೊಡಲಿಲ್ಲ, ಹೀಗಾಗಿ ಪಕ್ಷೇತರನಾಗಿ ಸ್ಪರ್ಧಿಸಿ ಸೋಲುಂಡಿದ್ದ. ಆದರೂ ಕಾರ್ಪೊರೇಟರ್ ಆಗುವ ಹಟ ಮಾತ್ರ ಇವನಿಂದ ದೂರವಾಗಿರಲಿಲ್ಲ.

ನರ್ಸಿಂಗ್ ಕಾಲೇಜು ಹುಟ್ಟು ಹಾಕಿದ


ಸದಾ ಏನಾದರೂ ಹೊಸದೊಂದು ಮಾಡಬೇಕೆಂದು ಹಂಬಲಿಸುತ್ತಿದ್ದ ಆರ್.ಜೆ.ಎಸ್ ಪ್ರಕಾಶನ ತಲೆಯಲ್ಲಿ ಹೊಳೆದಿದ್ದು ನರ್ಸಿಂಗ್ ಕಾಲೇಜ್ ಪ್ಲಾನ್. ಆಗಿನ ಮಂತ್ರಿಗಳಾಗಿದ್ದ ಬಿ. ಶಿವಪ್ಪ ಮತ್ತು ರಾಮಕೃಷ್ಣರ ಸಹಾಯದಿಂದ ದಲಿತ ಕೋಟಾದಲ್ಲಿ ಕಾಲೇಜು ಪರವಾನಗಿ ತಂದು ಶ್ರೀ ಬಾಬಾ ಇನ್ಸಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಕಾಲೇಜು ಆರಂಭಿಸಿದ. ಹಣ ನೀಡಿದರೆ ಸಲೀಸಾಗಿ ಪಾಸ್ ಮಾಡಿಸುವ ಯೋಜನೆಯನ್ನು ತನ್ನ ಕಾಲೇಜಿನಲ್ಲಿ ಜಾರಿಗೆ ತಂದಿದ್ದ. ಹೀಗಾಗಿ ಇವನ ಕಾಲೇಜಿಗೆ ಲಕ್ಷ-ಲಕ್ಷ ಕೊಟ್ಟು ಹೊರ ರಾಜ್ಯದ ವಿದ್ಯಾರ್ಥಿಗಳು ಬರಲಾರಂಭಿಸಿದ್ದರು. ಇದರಿಂದ ಪ್ರಕಾಶ ದಂಪತಿಗಳ ಚಿತ್ರಣವೇ ಬದಲಾಗಿ ಹೋಯಿತು.



ಡಿಸಿಪಿ ಪ್ರತಾಪನ್

ಪ್ರಿನ್ಸಿಪಾಲ್‌ಗಿರಿಗಾಗಿ ಗಂಡನ ಬಲಿ

ರಿಚೇಲಳ ನಡತೆಯಿಂದ ಕಂಗೆಟ್ಟು ಹೋಗಿದ್ದ ಪ್ರಕಾಶ ಹೇಗಾದರೂ ಮಾಡಿ ಇವಳನ್ನು ದಾರಿಗೆ ತರಬೇಕೆಂದು ಶತಪ್ರಯತ್ನಕ್ಕೆ ಕೈ ಹಾಕಿದ. ಮೊದಲಿಂದಲೂ ತಮ್ಮ ಕಾಲೇಜಿನ ಪ್ರಿನ್ಸಿಪಾಲ್ ಕುರ್ಚಿಯಲ್ಲಿ ತಾನೇ ಕೂಡಬೇಕು ಎಂಬ ಇರಾದೆ ರಿಚೇಲ್‌ಗಿತ್ತು, ಹೀಗಾಗೆ ಅವಳನ್ನು ಪ್ರಿನ್ಸಿಪಾಲ್ ಮಾಡಲಾಯಿತು. ಆಗಲಿಂದ ಭರ್ತಿ ವಸೂಲಿಗಿಳಿದ ರಿಚೇಲ್ ಡೊನೇಶನ್ ಹೆಸರಲ್ಲಿ ಬೇಜಾನ್ ದುಡ್ಡು ಮಾಡಲು ಶುರು ಹಚ್ಚಿದಳು. ಆ ಹಣದಲ್ಲೇ 80 ಲಕ್ಷದ ಮನೆ ಕೂಡ ಖರೀದಿಯಾಯಿತು. ಈ ಹಿಂದೆ ರಮೇಶರಾಜುಗೆ ಕುಡಿಸಿ ಬರೆಸಿಕೊಂಡಿದ್ದ ಮನೆಯಲ್ಲಿ ಹಾಸ್ಟೆಲ್ ಪ್ರಾರಂಭಿಸಿದಳು. ಹುಬ್ಬಳ್ಳಿಯ ಬಹುತೇಕ ಎಲ್ಲ ಇಲಾಖೆಯ ಅಧಿಕಾರಿಗಳು ವಿಶೇಷವಾಗಿ - ಪೊಲೀಸ್ ಅಧಿಕಾರಿಗಳು - ರಾತ್ರಿ ವೇಳೆ ಇವರ ಮನೆಯಲ್ಲಿ ಗಂಟೆಗಟ್ಟಲೆ ಸೇರುತ್ತಿದ್ದರು ಎಂಬುದರ ಜೊತೆಗೆ ಹೊರ ರಾಜ್ಯದ ನರ್ಸಿಂಗ್ ವಿದ್ಯಾರ್ಥಿನಿಯರನ್ನು ದಂಧೆಗಾಗಿ ಬಳಸುತ್ತಿದ್ದರು ಎಂಬ ಆರೋಪ ಕೂಡ ಪ್ರಕಾಶ ದಂಪತಿಗಳ ಮೇಲಿತ್ತು.




ಪ್ರಕಾಶ

ಇದೇ ವೇಳೆಗೆ ಎರಡನೇ ಬಾರಿ ಕಾರ್ಪೊರೇಶನ್ ಚುನಾವಣೆಗೆ ನಿಂತು ಸೋತ ಪ್ರಕಾಶ ಆಗಿನ ಕಾಂಗ್ರೆಸ್ ಸರ್ಕಾರದಿಂದ ಕೆಲವೊಂದಿಷ್ಟು ಕೆಲಸ ಮಾಡಿಸಿಕೊಂಡಿದ್ದ. ಅದರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದಿದ್ದ ಹತ್ತು ಗುಂಟೆ ಜಾಗ ಕೂಡ ಒಂದಾಗಿತ್ತು, ಆದರೆ ಅದೇನೇ ಮಾಡಿ ಹಣ ಗಳಿಸಿದ್ದರೂ ರಿಚೇಲಳ ನಡವಳಿಕೆಯಿಂದ ಪ್ರಕಾಶನಿಗೆ ನೆಮ್ಮದಿಯೇ ಇಲ್ಲದಂತಾಗಿತ್ತು, ದಿನಾ ಒಂದಲ್ಲ ಒಂದು ಪಲ್ಲಂಗ ಪುರಾಣಗಳು ಇವನ ಕಿವಿಗೆ ಬೀಳುತ್ತಿದ್ದವು. 2009ರ ಜೂನ್ 23ರಂದು ತನ್ನ ಕಷ್ಟವನ್ನೆಲ್ಲಾ ಸ್ನೇಹಿತರ ಮುಂದೆ ಹೇಳುತ್ತಾ ಬಾರ್‌ವೊಂದರಲ್ಲಿ ಕಂಠ ಪೂರ್ತಿ ಕುಡಿದು ಮನೆಯ ಮೆಟ್ಟಿಲ ಮೇಲೆ ಕುಸಿದು ಬಿದ್ದ ಪ್ರಕಾಶ ಅಲ್ಲೇ ಜೀವ ಬಿಟ್ಟ. ಇದರ ಹಿಂದೆ ಸಂಶಯ ಹೊಗೆಯಾಡಿದ್ದರಿಂದಾಗಿ, ಪ್ರಕಾಶನ ತಂದೆ ಶಿವರಾಮಪ್ಪ ಪೊಲೀಸರಿಗೆ ದೂರು ಕೊಟ್ಟಿದ್ದರು. ಹೆಂಡತಿ ರಿಚೇಲ್‌ಳೇ ಅವನನ್ನು ಕೊಂದಿದ್ದು ಎಂದು ಅವರು ದೂರಿದ್ದರು. ಆದರೆ ಪೋಸ್ಟ್‌ಮಾರ್ಟಮ್ ರಿಪೋರ್ಟ್ ಈ ಆರೋಪವನ್ನು ತಳ್ಳಿಹಾಕಿತ್ತು, ಇದಕ್ಕಾಗಿ ರಿಚೇಲ್ ಸಾಕಷ್ಟು ಶ್ರಮ ಹಾಕಿದ್ದಳು ಎಂಬುದು ಕೂಡ ಸುಳ್ಳಲ್ಲ.

ತನ್ನ ಅನೈತಿಕ, ಅಕ್ರಮ ದಂಧೆಗಳಿಗೆ ಅಡ್ಡಿಯಾಗಬಾರದು ಅಂತ ಪ್ರಕಾಶನ ಮನೆಯವರನ್ನ ದೂರವಿಟ್ಟಳು. ಆತ ಸಂಪಾದಿಸಿದ್ದ ಕೋಟ್ಯಾಂತರ ರೂಪಾಯಿ ಮೌಲ್ಯದ ನೆಹರು ನಗರದ ಬಂಗಲೆ, ಕಮರ್ಶಿಯಲ್ ಪ್ರಾಪರ್ಟಿ, ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದಿದ್ದ 10 ಗುಂಟೆ ಜಾಗವನ್ನೆಲ್ಲಾ ತನ್ನ ಹೆಸರಿಗೆ ಬದಲಾಯಿಸಿಕೊಂಡಿದ್ದೇ ತಡ, ತಾನೂ ಪ್ರಕಾಶನಂತೆ ಕಾರ್ಪೊರೇಟರ್ ಆಗುವ ಗೀಳು ಅಂಟಿಸಿಕೊಂಡು ಬಿಟ್ಟಳು. ಸಮಾಜ ಸೇವಕಿಯ ಪೋಸಿನಲ್ಲಿ ಕಂಡ ಕಂಡಲ್ಲಿ ಹಲ್ಲು ಗಿರಿಯುತ್ತಾ, ಡ್ರಾಮಾ ಶುರು ಹಚ್ಚಿದ ರಿಚೇಲ್ ಕಾರ್ಪೊರೇಟರ್ ದೊರೈರಾಜ್ ಮಣಿಕಂಟ್ಲ ಎಂಬುವನ ಜೊತೆ ಸುತ್ತಾಡುತ್ತಾ ಜಾಲಿ ಟ್ರಿಪ್ ನಡೆಸಿದ್ದಳು. ಇವರಿಬ್ಬರೂ ಮದುವೆ ಆಗಿದ್ದಾರೆ ಎಂಬ ರೂಮರ್ ಕೂಡ ಬಲು ಜೋರಾಗಿತ್ತು, ಹೀಗಾಗೇ ದೊರೈರಾಜನ ಹೆಂಡತಿ ಸುಧಾಮಣಿ ತಮ್ಮ ಸಮಾಜದ ಹಿರಿಯರ ಮಧ್ಯೆ ಪಂಚಾಯ್ತಿ ಕೂಡ ಮಾಡಿಸಿದ್ದಳು. ಈಗಲೂ ನನ್ನ ಗಂಡನಿಗೆ ಬುದ್ಧಿ ಹೇಳಿರಿ ಅಂತ ಕಂಡಕಂಡವರ ಮುಂದೆ ಹೇಳುತ್ತಾ ಅಲೆದಾಡುತ್ತಿದ್ದಾಳೆ.


ರಿಚೇಲ್ ಬ್ಲೂಫಿಲ್ಮ್ ಬಯಲಿಗೆ ಬಂತು

ಬಯಲಲ್ಲಿ ಮಾನವಂತಳ ಹಾಗೆ ಪೋಜು ಕೊಡುವ ರಿಚೇಲ್ ಚಿಮ್ಮನಚೂಡ ಪಕ್ಕಾ ಐನಾತಿ ಎಂಬುದನ್ನು ತಾನು ಬೆತ್ತಲಾಗುವ ಮೂಲಕ ಸಾಬೀತುಗೊಳಿಸಿದ್ದಾಳೆ. ಸ್ವಇಚ್ಛೆಯೊಂದಿಗೆ ತೆಗೆಸಿಕೊಂಡಿರಬಹುದಾದ ಹದಿನಾಲ್ಕು ನಿಮಿಷದ ತೀರಾ ಅಸಹ್ಯಕರ ರೀತಿಯ ಬ್ಲೂ ಫಿಲ್ಮ್‌ನ ತುಣುಕೊಂದು ಹುಬ್ಬಳ್ಳಿಯ ಮೊಬೈಲ್‌ಗಳಲ್ಲಿ ಎಗ್ಗಿಲ್ಲದೆ ಹರಿದಾಡುತ್ತಿದೆ. ಇದರಲ್ಲಿ ಇವಳೊಂದಿಗೆ ಕಾಮದಾಟದಲ್ಲಿ ಪಾಲ್ಗೊಂಡ ಪುರುಷನಾರು ಎಂಬುದು ಗೊತ್ತಾಗುವುದಿಲ್ಲ. ಆದರೆ 14 ನಿಮಿಷದ ಚಿತ್ರೀಕರಣದಲ್ಲಿ ಎಲ್ಲವನ್ನು ಇವರಿಬ್ಬರೂ ಇಂಗ್ಲಿಷಿನಲ್ಲೇ ಮಾತನಾಡಿಕೊಂಡಿದ್ದಾರೆ. ಕ್ಲಿಪಿಂಗ್‌ನ ಕೊನೆಭಾಗದಲ್ಲಿ ತಾನು ಬೆತ್ತಲಾಗಿ ಕಾಮದಾಟ ನಡೆಸಿದ ಚಿತ್ರವನ್ನು ತೋರಿಸಲು ಜೊತೆಗಾರನಿಗೆ ಇವಳು ಕೇಳುತ್ತಾಳೆ. ಹೀಗಾಗಿ ಇದು ಸ್ವಇಚ್ಛೆಯಿಂದ ಕುಡಿದ ಅಮಲಿನಲ್ಲಿ ಮೈಮರೆತು ಚಿತ್ರೀಕರಿಸಿದ ಬ್ಲೂಫಿಲ್ಮ್ ಆಗಿದೆ.



ಈ ಮಧ್ಯೆ ರಿಚೇಲ್‌ಗೆ ಬ್ಲಾಕ್ ಮೇಲ್ ಕರೆಗಳು ಬರಲಾರಂಭಿಸಿವೆ. ಇಬ್ಬರು ಹಳೆಯ ವಸೂಲಿ ಪತ್ರಕರ್ತರು 30 ಲಕ್ಷ ಡಿಮ್ಯಾಂಡ್ ಮಾಡಿ 3 ಲಕ್ಷ ತಿಂದಿದ್ದಾರೆ. ಅದು ಇಬ್ಬರಲ್ಲಿ ಒಬ್ಬ ಪತ್ರಕರ್ತನಿಗೆ ಮಾತ್ರ ಸಿಕ್ಕಿದೆ. ಇನ್ನೊಬ್ಬ ಮುನಿಸಿಕೊಂಡು ಹೊಸ ಡಿಮ್ಯಾಂಡಿಗೆ ನಿಂತಿದ್ದಾನೆ. ರಿಚೇಲ್ ಇವರ ಬೇಡಿಕೆಗೆ ಸದ್ಯ ಸೊಪ್ಪು ಹಾಕಿಲ್ಲ, ಬದಲಾಗಿ ಬ್ಲಾಕ್ ಮೇಲ್‌ಕೋರರಿಂದ ರಕ್ಷಿಸುವಂತೆ ಕೇಶ್ವಾಪುರ ಇನ್ಸ್‌ಪೆಕ್ಟರ್ ರೆಹಮಾನ್ ಖಾನ್‌ಗೆ ಮೌಖಿಕ ದೂರು ಕೊಟ್ಟಿದ್ದಾಳೆ. ಹಿಂದೆ ಇವಳ ಗಂಡ ಪ್ರಕಾಶನ ಸ್ನೇಹಿತರಾಗಿ ನಂತರ ಸ್ವಲ್ಪ ಕಾಲ ಇವಳಿಗೂ ಹತ್ತಿರಾಗಿದ್ದ ಅನಿಲ್ ಪಾಟೀಲ, ಹುರಕಡ್ಲಿ ಸಂಗೂ ಸೇರಿದಂತೆ ಇನ್ನೂ ಅನೇಕರಿದ್ದರೂ, ಸದ್ಯಕ್ಕೆ ಇವಳ ಬೆನ್ನಿಗೆ ಯಾರೂ ನಿಲ್ಲುತ್ತಿಲ್ಲ, ತನ್ನದೇ ಬ್ಲೂಫಿಲ್ಮ್ ಎಂದು ಗೊತ್ತಿದ್ದರೂ, ಬಿಂದಾಸಾಗಿ ಗಿರಕಿ ಹೊಡೆಯುತ್ತಿರುವ ನರ್ಸಿಂಗ್ ಪ್ರಿನ್ಸಿ ರಿಚೇಲ್‌ಗೆ ಆಸರೆಯಾಗಿರುವುದು ಸೆಟ್ಲ್‌ಮೆಂಟ್ ಕಾಲೋನಿಯ ಇವಳ ಆಂಟಿ ಲಗಳಿಬಾಯಿ.

ಹುಬ್ಬಳ್ಳಿಯ ನೂತನ ಡಿ.ಸಿ.ಪಿ. ಪ್ರತಾಪನ್ ಮೂಲಕ ಲಗಳಿಬಾಯಿ ಪೊಲೀಸ್ ಇಲಾಖೆಯಿಂದ ಇವಳಿಗೆ ರಕ್ಷಣೆ ಕೊಡಿಸುವ ಕೆಲಸದಲ್ಲಿ ಫುಲ್ ಬ್ಯುಸಿಯಾಗಿದ್ದಾಳೆ. ಪ್ರತಾಪನ್ ಸಾಹೇಬ್ರು ಕೂಡ ಅಷ್ಟೇ ಪ್ರಾಮಾಣಿಕತೆಯಿಂದ ರಿಚೇಲಳನ್ನು ಕಮೀಷನರ್ ರಾಮಚಂದ್ರರಾವ್ ಮುಂದೆ ನಿಲ್ಲಿಸಿದ್ದಾರೆ. ಇವಳದ್ದೇನೂ ತಪ್ಪೇ ಇಲ್ಲ ಎಂದು ಭಾವಿಸಿದ ಕಮೀಷನರ್ ಸಿ.ಸಿ.ಆರ್.ಬಿಯ ಎ.ಸಿ.ಪಿ. ಸವಿಶಂಕರ ನಾಯಕ್‌ನನ್ನ ತನಿಖೆಗೆ ನಿಯುಕ್ತಿ ಮಾಡಿ ಕ್ಲಿಪಿಂಗ್ ತರಿಸಿ ನೋಡಿ ಸ್ವತಃ ದಂಗಾಗಿಬಿಟ್ಟಿದ್ದಾರೆ. ಆದರೆ, ಪ್ರತಾಪನ್ ಸಾಹೇಬ್ರು ಕ್ಲಿಪಿಂಗ್ ಹುಡುಕುವ ಕಾರ್ಯದಲ್ಲಿ ಕಮಾಯಿ ಮಾಡಿದ್ದೇ ಹೆಚ್ಚು, ಮೊಬೈಲ್ ಡೌನ್‌ಲೋಡ್ ಶಾಪ್, ಸೈಬರ್ ಸೆಂಟರ್, ಮೊಬೈಲ್ ಕರೆನ್ಸಿ ಅಂಗಡಿಗಳ ಮೇಲೆ ದಾಳಿ ಮಾಡಿ ವಸೂಲಿಗಿಳಿದಿದ್ದಾರೆ. ಅಲ್ಲದೆ, ಈ ಕ್ಲಿಪಿಂಗ್ ಹಾಕಿಸಿಕೊಂಡವರ ಮಾಹಿತಿ ಪಡೆದು ಅವರನ್ನು ಹಿಡಿದು ಅವರಿಂದಲೂ ಹಣ ಕೀಳುತ್ತಿದ್ದಾರೆ. ರಿಚೇಲ್ ಇದನ್ನು ತನ್ನ ತೀಟೆಗಾಗಿ ತೆಗೆಸಿಕೊಂಡಳೋ ಅಥವಾ ಅಮಲಿನಲ್ಲಿ ಚಿತ್ರೀಕರಿಸಿದಳೋ? ಆದರೆ ಇವಳ ಹೆಸರಲ್ಲಿ ಹಣ ಮಾಡಿದವರು ಮಾತ್ರ ಕಾರ್ಯನಿರತ ಪತ್ರಕರ್ತರು ಮತ್ತು ಪೊಲೀಸ್ ಪಿಂಡಗಳು.




ಶಿವಶಂಕರ್ ನಾಯಕ್


ಬ್ಲೂ ಫಿಲ್ಮ್ ಬಯಲಿಗೆ ಬಿದ್ದಾಗಿನಿಂದ ಇದರ ಸುತ್ತ ಹತ್ತಾರು ಸಂಶಯಗಳು ಗಿರಕಿ ಹೊಡೆಯುತ್ತಿವೆ. ಕಾರ್ಪೊರೇಟರಾಗುವ ಕನಸನ್ನು ಬೆನ್ನಿಗಿಟ್ಟುಕೊಂಡು ಸಮಾಜ ಸೇವಕಿಯ ರೂಪದಲ್ಲಿ ಪ್ರಚಾರಕ್ಕಿಳಿದಿದ್ದ ರಿಚೇಲಳ ಫೋರ್ಸ್‌ಗೆ ಆರ್.ಜೆ.ಎಸ್. ಪ್ರಕಾಶನ ಸ್ನೇಹಿತರೇ ಈ ಫಿಲ್ಮ್‌ನ್ನ ಬಯಲಿಗೆ ತಂದರಾ? ಅಥವಾ ಇವಳ ಸದ್ಯದ ಪ್ರಿಯ ಗೆಳೆಯ ದೊರೈರಾಜು ಮಣಿಕಂಟ್ಲ ಇವಳ ಹೆಸರಲ್ಲಿರುವ ಕೋಟ್ಯಾಂತರ ರೂಪಾಯಿ ಆಸ್ತಿ ಹೊಡೆಯಲು ನಡೆಸಿದ ಸಂಚು ಇದಾಗಿರಬಹುದಾ? ಮತ್ತು ದುಬೈನಲ್ಲಿರುವ ಪ್ರಕಾಶನ ತಮ್ಮ ಮತ್ತವನ ಸ್ನೇಹಿತರು ಅಣ್ಣನ ಸಾವಿನ ಸೇಡಿಗೆ ನಡೆಸಿದ ಪ್ರಯತ್ನ ಇದಾಗಿರಬಹುದಾ? ಇಂತಹ ಹತ್ತಾರು ಗುಮಾನಿಗಳು ನಗರದಲ್ಲಿ ಸುತ್ತಾಡುತ್ತಿದ್ದರೂ, ಚಿತ್ರದ ನಾಯಕಿ ರಿಚೇಲ್ ಮಾತ್ರ ಬಿಂದಾಸಾಗೇ ಓಡಾಡುತ್ತಿದ್ದಾಳೆ. ಏನೇ ಆಗಲಿ, ಕಷ್ಟದಲ್ಲಿ ಬೆಳೆದು ಸ್ವಲ್ಪ ಮಾನವಂತನಾಗಿ ಬದುಕಿಹೋದ ಆರ್.ಜೆ.ಎಸ್. ಪ್ರಕಾಶನ ಹೆಂಡತಿ ಎನಿಸಿಕೊಂಡವಳು ಈ ರೀತಿ ಮಾಡಬಾರದಾಗಿತ್ತು.

• ಹುರಳಿಕುಪ್ಪಿ ವಿನಯ


ಬಲೆಗೆ ಬಿದ್ದ ಲೋಕೋಪಯೋಗಿ ತಿಮಿಂಗಿಲ ಮೃತ್ಯುಂಜಯ ಸ್ವಾಮಿ


ಮೃತ್ಯುಂಜಯ ಸ್ವಾಮಿ

ಹೆಸರಿಗಷ್ಟೇ ಉದಾಸಿ ಲೋಕೋಪಯೋಗಿ ಮಂತ್ರಿ. ಬೆಳಗಾವಿಯ ಸುವರ್ಣ ಸೌಧದ ಕಾಮಗಾರಿಯಲ್ಲಿ ನಡೆದ ಭ್ರಷ್ಟಾಚಾರದಿಂದ ಹಿಡಿದು, ಕರ್ನಾಟಕದ ಪ್ರಮುಖ ರಸ್ತೆಗಳು, ಬಿಬಿಎಂಪಿಯ ಕೋಟಿ ಮೊತ್ತದ ಕಾಂಟ್ರಾಕ್ಟುಗಳು, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಅನೇಕಾನೇಕ ಟೆಂಡರುಗಳನ್ನೆಲ್ಲ ನಿಭಾಯಿಸುತ್ತಿದ್ದದ್ದು ಇದೇ ಮೃತ್ಯುಂಜಯಸ್ವಾಮಿ!


ಸಂತೋಷ್ ಹೆಗಡೆ

ಸಿ. ಮೃತ್ಯುಂಜಯಸ್ವಾಮಿ ಎಂಬ ಲೋಕೋಪಯೋಗಿ ಇಲಾಖೆ ತಿಮಿಂಗಿಲನ ಮೇಲೆ ಲೋಕಾಯುಕ್ತರು ಬಿದ್ದ ರೇಡು ಮುಖ್ಯಮಂತ್ರಿ ಯಡ್ಡಿಗೆ ಗಣಿ ರಿಪೋರ್ಟಿಗೂ ಮುನ್ನ ಕೊಟ್ಟ ಶಾಕ್ ಟ್ರೀಟ್‌ಮೆಂಟೆ?


ಮಂತ್ರಿ ಉದಾಸಿ

ಯಡ್ಡಿಗಷ್ಟೇ ಅಲ್ಲ; ಮುಖ್ಯಮಂತ್ರಿಯ ಆಸ್ಥಾನಗುರು ಸುತ್ತೂರು ಸ್ವಾಮಿಗೂ ಅದು ಲೋಕಾಯುಕ್ತರು ಹಾಕಿದ ಏಟಾಗಿತ್ತೆ?

ಸಂತೋಷ್ ಹೆಗ್ಡೆಯವರ ಲೋಕಾಯುಕ್ತ ಕಾರ್ಯಾಚರಣೆಯ ಕೊನೇಗಳಿಗೆಯ ಶಿಕಾರಿಗೆ ಬಲಿಬಿದ್ದ ಹತ್ತು ಮಂದಿ ಕಡುಭ್ರಷ್ಟರ ಪೈಕಿ ದೊಡ್ಡ ಹೆಸರೇ ಸಿ. ಮೃತ್ಯುಂಜಯಸ್ವಾಮಿ. ಯಡ್ಡಿಯ ಲಿಂಗಾಯತ ದರ್ಬಾರಿನಲ್ಲಿ ಎ.ಪಿ. ಬಳಿಗಾರ್, ಜ್ಯೋತಿಪ್ರಕಾಶ್ ಮಿರ್ಜಿ, ತುಮಕೂರು ಡಿಸಿ ಸೋಮಶೇಖರ್, ಅಬಕಾರಿ ಜಂಟಿ ಕಮೀಷನರ್ ಈರಪ್ಪ ಚೀಫ್ ಇಂಜಿನಿಯರ್ ಸದಾಶಿವ ರೆಡ್ಡಿ ಪಾಟೀಲ್ ಅಬಕಾರಿ ಡೆಪ್ಯೂಟಿ ಕಮೀಷನರ್ ಕರ್ಜಗಿ ಇತ್ಯಾದಿ ಆಯಾ ಇಲಾಖೆಗಳ ಆಯಕಟ್ಟಿಗೆ ಬಂದುಕೂತ ಲಿಂಗಾಯತ ಅಧಿಕಾರಿಗಳ ಪೈಕಿ ಸುತ್ತೂರು ಸ್ವಾಮೀಜಿಗೆ ಅಗದಿ ಆತ್ಮೀಯನಂತಿದ್ದ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಮೃತ್ಯುಂಜಯಸ್ವಾಮಿಯ ಕತೆ ಮುಗಿಸಿಯೇ ಲೋಕಾಯುಕ್ತರು ವಿರಮಿಸಿದ್ದಕ್ಕೂ ಕಾರಣವಿದೆ.

ಹುದ್ದೆಗೆ ಬಂದ ಕೇವಲ ಎರಡೇ ತಿಂಗಳಲ್ಲಿ ಮೃತ್ಯುಂಜಯ ಸ್ವಾಮಿ ಮಾಡಿದ ಅನಾಹುತ, ಖಮಾಯಿ ಮತ್ತು ಟ್ರಾನ್ಸ್‌ಫರ್ ಎತ್ತುವಳಿಯ ಆಗಾಧತೆಯೇ ಅಂಥಾದ್ದಾಗಿತ್ತು. ಜೂನ್ 19 ರಂದು ಸುತ್ತೂರು ಮಠದಲ್ಲಿ ನಡೆದ ವೀರಶೈವ ಮಹಾಧಿವೇಶನದ ಖರ್ಚು ವೆಚ್ಚಕ್ಕೆಂದು ಮೃತ್ಯುಂಜಯ ಸ್ವಾಮಿ ಒಬ್ಬನೇ ಐದು ಕೋಟಿಯಷ್ಟು ಸಂಗ್ರಹಿಸಿ ಕೊಟ್ಟ ಸುದ್ದಿ ಲೋಕಾಯುಕ್ತರ ಕಿವಿ ಮುಟ್ಟಿತ್ತು. ಬಿಡುಗಡೆಯಾದ ಅನುದಾನದ ಹೆಚ್ಚು ಭಾಗ ಲಿಂಗಾಯತ ಮಠಮಾನ್ಯಗಳ ಸುತ್ತಲೇ ಕಾಮಗಾರಿ ರೂಪದಲ್ಲಿ ಓಡಾಡುತ್ತಿದ್ದದ್ದು, ಲೋಕೋಪಯೋಗಿ ಇಲಾಖೆಯ ಫಲವತ್ತು ಹುದ್ದೆಗಳಿಗೆಲ್ಲ ವೀರಶೈವ ಇಂಜಿನಿಯರ್‌ಗಳೇ ಬಂದು ಕೂತಿದ್ದು, ಕೋಟಿ ಮೊತ್ತದ ಬೋಗಸ್ ಬಿಲ್ಲುಗಳಿಗೆಲ್ಲ ಮೃತ್ಯುಂಜಯ ಸ್ವಾಮಿಯೇ ನಿಂತು ಗತಿ ಕಾಣಿಸಿದ್ದು, ತನ್ನ ಬೇನಾಮಿ ಕಾಂಟ್ರಾಕ್ಟರುಗಳ ಮೂಲಕ ಭಾರೀ ಕಾಮಗಾರಿಗಳಿಗೆ ಕೈಹಾಕಿದ್ದು; ಈತನ ಲೂಟಿಯ ಸಾಮರ್ಥ್ಯವನ್ನು ಸಾರಿ ಹೇಳುತ್ತಿದ್ದವು.

ಹೆಸರಿಗಷ್ಟೇ ಉದಾಸಿ ಲೋಕೋಪಯೋಗಿ ಮಂತ್ರಿ. ಬೆಳಗಾವಿಯ ಸುವರ್ಣ ಸೌಧದ ಕಾಮಗಾರಿಯಲ್ಲಿ ನಡೆದ ಭ್ರಷ್ಟಾಚಾರದಿಂದ ಹಿಡಿದು, ಕರ್ನಾಟಕದ ಪ್ರಮುಖ ರಸ್ತೆಗಳು, ಬಿಬಿಎಂಪಿಯ ಕೋಟಿ ಮೊತ್ತದ ಕಾಂಟ್ರಾಕ್ಟುಗಳು, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಅನೇಕಾನೇಕ ಟೆಂಡರುಗಳನ್ನೆಲ್ಲ ನಿಭಾಯಿಸುತ್ತಿದ್ದದ್ದು ಇದೇ ಮೃತ್ಯುಂಜಯಸ್ವಾಮಿ!


ಇಲ್ಲಿಗೆ ಎರಡು ತಿಂಗಳ ಹಿಂದಷ್ಟೇ ಲೋಕೋಪಯೋಗಿ ಕಾರ್ಯದರ್ಶಿ ಹುದ್ದೆಗೇರಿದ ಮೃತ್ಯುಂಜಯ ಸ್ವಾಮಿಗೆ ತಾಂತ್ರಿಕ ಯೋಗ್ಯತೆಯಾಗಲಿ, ಸೀನಿಯಾರಿಟಿಯಾಗಲಿ ಇರಲೇ ಇಲ್ಲ, ಜ್ಯೇಷ್ಠತೆಯಲ್ಲಿ ಈತನಿಗಿಂತಲೂ ಮಿಗಿಲಾದ ಮೂವತ್ತು ಮಂದಿ ಇಂಜಿನಿಯರ್‌ಗಳ ಹಿಂದೇ ಇತ್ತು. ಆ ಪೈಕಿ ಜಯಪ್ರಕಾಶ್, ಸಿ.ವಿ. ಪಾಟೀಲ್, ಗುರುಪ್ರಸಾದ್ ಇತ್ಯಾದಿ ಅನುಭವಿ ಇಂಜಿನಿಯರ್‌ಗಳ ಪೈಕಿ ಯಾರನ್ನಾದರೂ ಲೋಕೋಪಯೋಗಿ ಕಾರ್ಯದರ್ಶಿ ಹುದ್ದೆಗೆ ತರಬಹುದಿತ್ತು.

ಆದರೆ ಸುತ್ತೂರು ಸ್ವಾಮಿಯ ಕೃಪೆಯಿದ್ದದ್ದು ಮೃತ್ಯುಂಜಯ ಸ್ವಾಮಿಗೆ ಮಾತ್ರ. ಮೂವತ್ತು ಮಂದಿ ಪರಿಣಿತ ಇಂಜಿನಿಯರ್‌ಗಳನ್ನೆಲ್ಲ ಬದಿಗೊತ್ತಿ ಏಕಾಏಕಿ ಮೃತ್ಯುಂಜಯ ಸ್ವಾಮಿಯನ್ನು ಆ ಹುದ್ದೆಗೆ ತರಲಾಯಿತು. ಅದಕ್ಕೆಂದು ಅಧಿಕೃತ ಇಂಜಿನಿಯರ್ ಆಗಿದ್ದ ಈತನಿಗೆ ಕಾಯ್ದೆ ಕಾನೂನುಗಳನ್ನೆಲ್ಲ ಧಿಕ್ಕರಿಸಿ ಮುಖ್ಯ ಇಂಜಿನಿಯರ್ ಹುದ್ದೆಗೆ ತಂದರು. ಲೋಕೋಪಯೋಗಿ ಇಲಾಖೆಯ ನಿಯಮಾನುಸಾರ ಮೊದಲು ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಿಂದ ಅಧೀಕ್ಷಕ ಇಂಜಿನಿಯರ್ ಸ್ಥಾನಕ್ಕೆ ಬಡ್ತಿ ಕೊಡಬೇಕು. ನಂತರವೇ ಅಧೀಕ್ಷಕ ಇಂಜಿನಿಯರ್‌ಗೆ ಮುಖ್ಯ ಇಂಜಿನಿಯರ್ ಬಡ್ತಿ ಕೊಟ್ಟು ಆನಂತರ ಸೇವಾ ಜ್ಯೇಷ್ಠತೆಯ ಆಧಾರದ ಮೇಲೆ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ತರಬೇಕು.

ಈಗಾಗಲೇ ಅನೇಕ ಅಧೀಕ್ಷಕ ಇಂಜಿನಿಯರ್‌ಗಳನ್ನು ಮುಖ್ಯ ಇಂಜಿನಿಯರ್ ಹುದ್ದೆಗೇರಿಸಿದ ಬಗ್ಗೆ ನೊಂದ ಬಹುತೇಕ ಇಂಜಿನಿಯರ್‌ಗಳು ಕೋರ್ಟ್ ಕಟಕಟೆ ಹತ್ತಿದ್ದಾರೆ. ಈ ಹಿಂದೆ ಎಚ್.ಡಿ. ರೇವಣ್ಣ ಲೋಕೋಪಯೋಗಿ ಸಚಿವರಾಗಿದ್ದಾಗಲೇ ನಿಯಮ ಮೀರಿ ಒಕ್ಕಲಿಗ ಇಂಜಿನಿಯರುಗಳಿಗೆ ಬಡ್ತಿ ಕೊಟ್ಟ ವಿವಾದವೇ ಇನ್ನೂ ಇತ್ಯರ್ಥವಾಗಿಲ್ಲ. ಕೋರ್ಟು ಇಂಥ 49 ಮಂದಿ ಮುಖ್ಯ ಇಂಜಿನಿಯರ್‌ಗಳ ಬಡ್ತಿ ನೀಡಿದ್ದರಿಂದಾಗಿ ಮೃತ್ಯುಂಜಯ ಸ್ವಾಮಿ ಸೇರಿದಂತೆ ಈ ರೀತಿ ಅಕ್ರಮ ಬಡ್ತಿ ಪಡೆದ ಯಾವೊಬ್ಬ ಇಂಜಿನಿಯರ್‌ಗೂ ಇಲಾಖೆಯ ಕಾರ್ಯದರ್ಶಿಯಾಗುವ ಅರ್ಹತೆಯಿಲ್ಲ.

ಆದರೆ ಜಾತಿಬೆಂಬಲ ಮತ್ತು ಹಣಬಲವಿತ್ತಲ್ಲ, ಜೊತೆಗೆ ಉದಾಸಿ ಕೂಡ ಲಿಂಗವಂತರೇ. ಸುತ್ತೂರು ಸ್ವಾಮಿಯ ಋಣಕ್ಕೆ ಬಿದ್ದ ಸಿಎಂ ಯಡ್ಡಿ ಸುತ್ತೂರಿನಲ್ಲಿ ನಡೆದ ವೀರಶೈವ ಮಹಾಧಿವೇಶನದ ಹರಕತ್ತಿಗೆ ಬಿದ್ದು ಮೃತ್ಯುಂಜಯ ಸ್ವಾಮಿಯನ್ನೇ ಕಾರ್ಯದರ್ಶಿ ಗಾದಿಗೆ ತಂದರು.


ಲೋಕೋಪಯೋಗಿ ಕಾರ್ಯದರ್ಶಿ ಹುದ್ದೆಯೆಂದರೆ ಅದು ಸಣ್ಣ ಮಾತಾ? ವರ್ಗಾವರ್ಗಿ ಮತ್ತು ಕೋಟಿ ಲೆಕ್ಕದ ಕಾಮಗಾರಿಗಳನ್ನು ನಿರ್ಧರಿಸುವವನೇ ಪಿಡಬ್ಲ್ಯೂಡಿ ಸೆಕ್ರೆಟರಿ. ಕೋಟಿ ಕೋಟಿ ರೊಕ್ಕ ಉದುರುವ ಆಯಕಟ್ಟಿನ ಜಾಗಗಳನ್ನೆಲ್ಲ ಪಟ್ಟಿ ಮಾಡಿದ ಮೃತ್ಯುಂಜಯಸ್ವಾಮಿ ಬಂದ ಶುರುವಿನಲ್ಲೇ 500 ಮಂದಿ ಇಂಜಿನಿಯರ್‌ಗಳ ಬೃಹತ್ ವರ್ಗಾವರ್ಗಿಯ ಪಟ್ಟಿ ರಚಿಸಿದ. ಪ್ರತಿ ಆಯಕಟ್ಟಿನ ಹುದ್ದೆಗೂ ಯಾರೇ ಇಂಜಿನಿಯರ್ ಕನಿಷ್ಠ ಹತ್ತು ಲಕ್ಷ ಕೊಟ್ಟೇ ಕೊಡುತ್ತಾನೆ.


ಸುತ್ತೂರು ಸ್ವಾಮಿ

ತಾನು ತಯಾರಿಸಿ ಇಟ್ಟುಕೊಂಡಿದ್ದ 500 ಮಂದಿ ಕಾರ್ಯಪಾಲಕ ಇಂಜಿನಿಯರ್‌ಗಳ ಪೈಕಿ ಮೊದಲ ಕಂತಾಗಿ 100 ಮಂದಿಯ ಟ್ರಾನ್ಸ್‌ಫರ್ ಪಟ್ಟಿಯನ್ನು ಬಿಡುಗಡೆ ಮಾಡಿದ್ದು ಜೂನ್ ಮೊದಲ ವಾರಕ್ಕೆ ತಲಾ ಇಂಜಿನಿಯರ್ 10 ಲಕ್ಷದಂತೆ ಮೃತ್ಯುಂಜಯ ಸ್ವಾಮಿಯ ಪಾದಕ್ಕರ್ಪಿಸಿದರೂ ಅದೊಂದೇ ಬಾಬ್ತಿನಿಂದ 10 ಕೋಟಿಯಷ್ಟು ಪಾಪದ ಕಾಸನ್ನು ಸ್ವಾಮಿ ಖಮಾಯಿಸಿಬಿಟ್ಟ. ಉಳಿಕೆ ನಾನೂರು ಮಂದಿ ಇಂಜಿನಿಯರ್‌ಗಳ ಪೈಕಿ ತಲಾ ಐದು ಲಕ್ಷದಂತೆ ಎತ್ತುವಳಿಯಾದರೂ ಅದೇ 20 ಕೋಟಿಯಾಗುತ್ತದೆ. ತಮ್ಮ ಲೂಟಿಗೆ ತಕ್ಕಂತೆ ತನ್ನದೇ ಜಾತಿಯ ಅಧೀನ ಇಂಜಿನಿಯರ್‌ಗಳಿರಬೇಕಲ್ಲವೆ? ಅದಕ್ಕೆಂದು ಸ್ವಾಮಿ ಬರಮಾಡಿಕೊಂಡಿದ್ದು ತನ್ನದೇ ಜಾತಿವಂತ ಎಸ್.ಎನ್. ಪ್ರಕಾಶ್ ಎಂಬ ಎಕ್ಸಿಕ್ಯೂಟಿವ್ ಇಂಜಿನಿಯರ್‌ನನ್ನು. ಈತನನ್ನು ತುಮಕೂರು ಅಥವಾ ಬೆಂಗಳೂರು ವಿಭಾಗಕ್ಕೆ ತಂದರೆ ಖಮಾಯಿಗೆ ಇನ್ನೂ ಅನುಕೂಲ. ಈ ಎಸ್.ಎನ್. ಪ್ರಕಾಶ್ ಬೇರಾರೂ ಅಲ್ಲ, ಮುಖ್ಯಮಂತ್ರಿ ಯಡ್ಡಿಯ ಮನೆದೈವ ಯಡಿಯೂರ ಸಿದ್ಧಲಿಂಗೇಶ್ವರ ದೇವಸ್ಥಾನದ ಸುತ್ತ ಮೃತ್ಯುಂಜಯಸ್ವಾಮಿ ಶುರು ಹಚ್ಚಿಕೊಂಡ ವಿವಿಧ ಕಾಮಗಾರಿಗಳ ಗುತ್ತಿಗೆ ಪಡೆದಿರುವ ಎಸ್.ಎನ್. ಪ್ರಸಾದ್ ಎಂಬಾತನ ಅಣ್ಣ!

ಯಡಿಯೂರು ಸಿದ್ಧಲಿಂಗೇಶ್ವರ ದೇವಸ್ಥಾನದ ಖ್ಯಾತಿ ಮೆರೆಸಲೆಂದೇ 85 ಕೋಟಿ ರೂಪಾಯಿಗಳ ಮೊತ್ತದ ಬೃಹತ್ ಕಾಮಗಾರಿಗಳದ್ದೇ ಪಟ್ಟಿ ಮಾಡಿದ ಮೃತ್ಯುಂಜಯಸ್ವಾಮಿ ಇ-ಟೆಂಡರ್ ಓಪನ್ ಟೆಂಡರ್ ಯಾವುದನ್ನೂ ಮಾಡದೆ ಈ ಪಾಟಿ ಮೊತ್ತದ ಕಾಮಗಾರಿಗಳನ್ನೆಲ್ಲ ತನ್ನ ಬೇನಾಮಿ ಕಾಂಟ್ರಾಕ್ಟರ್ ಪ್ರಸಾದ್‌ಗೇ ಕೊಡಿಸಿಕೊಟ್ಟ. ಹೆಸರಿಗೆ ಪ್ರಸಾದ್ ಗುತ್ತಿಗೆದಾರನಾದರೂ ಅದರ ಫಲಾನುಭವಿ ಮಾತ್ರ ಮೃತ್ಯುಂಜಯನೇ ಎಂಬುದು ಇಲಾಖೆಯ ಪ್ರತಿಯೊಬ್ಬರಿಗೂ ಗೊತ್ತಿತ್ತು.

ಯಡಿಯೂರು ಸಿದ್ಧಲಿಂಗೇಶ್ವರ ದೇವಸ್ಥಾನದ ಸುಸಜ್ಜಿತ ಗೆಸ್ಟ್‌ಹೌಸ್, ಅಕ್ಕಪಕ್ಕದ ರಸ್ತೆಗಳು, ಮೋರಿ; ಇತ್ಯಾದಿ ಏನೇ ಕಾಮಗಾರಿಯೆಂದರೂ ಐದೋ ಹತ್ತೋ ಕೋಟಿಯಾಗಬೇಕು. ಆದರೆ ಸ್ವಾಮಿ ಬಿಡುಗಡೆ ಮಾಡಿದ್ದು 85 ಕೋಟಿ!



ಮೃತ್ಯುಂಜಯಸ್ವಾಮಿಯ ಬಂಗಲೆ

ಪಾರದರ್ಶಕತೆಯಿಲ್ಲ, ನೆಟ್ಟಗೆ ಟೆಂಡರನ್ನೇ ನಡೆಸಿಲ್ಲ, ಕಾಮಗಾರಿ ಮುಗಿಯದೇ ಹೋದರೂ ಹಣ ಮಾತ್ರ ಬಿಡುಗಡೆಯಾಗಿತ್ತು. ಮಂತ್ರಿ ಉದಾಸಿ, ಯಡ್ಡಿ ಮಗ ವಿಜಯೇಂದ್ರ ಎಲ್ಲರಿಗೂ ಸ್ವಾಮಿ ಸಲ್ಲಬೇಕಾದ ಪಾಲು ಸಲ್ಲಿಸಿದ್ದ. ಇದೆಲ್ಲ ಒತ್ತಟ್ಟಿಗಾದರೆ ಮತ್ತೊಂದೆಡೆ ರಾಜ್ಯವ್ಯಾಪಿ ಅನಾಚಾರವೊಂದಕ್ಕೆ ಸ್ವಾಮಿ ಕೈಯಿಟ್ಟ. ಅದು ಮುಂಬರುವ ಚುನಾವಣೆಗೆ ಯಡ್ಡಿ ಪರ ಪಾರ್ಟಿ ಫಂಡ್ ಕಲೆಕ್ಷನ್!

ಚುನಾವಣೆಗಿನ್ನು ಎರಡು ವರ್ಷ ಬಾಕಿಯಿದ್ದರೂ ಭ್ರಷ್ಟಾಚಾರದ ಕೇಸುಗಳು ಮತ್ತು ಲೋಕಾಯುಕ್ತರ ವರದಿ ಹಿನ್ನೆಲೆಯಲ್ಲಿ ಅವಧಿಗೆ ಮೊದಲೇ ಚುನಾವಣೆ ಬಂತೆಂದರೆ ಫಂಡು ಬೇಕೇಬೇಕು. ಈಗಾಗಲೇ ಲೋಕೋಪಯೋಗಿ ಇಲಾಖೆ ವತಿಯಿಂದ ರಾಜ್ಯಾದ್ಯಂತ ಸಾವಿರಾರು ಕೋಟಿ ಮೊತ್ತದ ಕಾಮಗಾರಿಗಳು ನಡೆಯುತ್ತಿವೆ. ಇಂಥ ಪ್ರತಿಯೊಂದು ಬೃಹತ್ ಕಾಮಗಾರಿ ಮತ್ತು ಸಂಬಂಧಪಟ್ಟ ಇಂಜಿನಿಯರ್‌ಗಳ ಪಟ್ಟಿ ಮಾಡಿದ ಮೃತ್ಯುಂಜಯಸ್ವಾಮಿ; ಪ್ರತಿ ಇಂಜಿನಿಯರ್ ಇಂತಿಷ್ಟೆಂದು ಎಲೆಕ್ಷನ್ ಫಂಡ್ ಸಂಗ್ರಹಿಸಲೇಬೇಕೆಂದು ಫರ್ಮಾನು ಹೊರಡಿಸಿಬಿಟ್ಟ.

ಇದು ಗೊತ್ತಾಗಿದ್ದೇ ಲೋಕಾಯುಕ್ತರ ಕಣ್ಣು ಕೆಂಪಾಗಿದೆ. ಮೊದಲೇ ರೇಡಿಗೆ ಈಡಾಗಬೇಕಾದ ಭ್ರಷ್ಟರ ಪಟ್ಟಿಯೊಂದು ರೆಡಿಯಾಗಿತ್ತು, ಈ ಸಾಲಿಗೆ ಲೇಟೆಸ್ಟಾಗಿ ಸೇರ್ಪಡೆಯಾಗಿದ್ದೇ ಮೃತ್ಯುಂಜಯಸ್ವಾಮಿ. ಕಾರ್ಯದರ್ಶಿ ಹುದ್ದೆಗೇರಿ ಕೇವಲ ಎರಡು ತಿಂಗಳು ತುಂಬುವ ಮೊದಲೇ ಲೋಕಾಯುಕ್ತರ ರೇಡು ಬಿದ್ದಿದೆಯೆಂದರೆ ಸ್ವಾಮಿಯ ಕುಖ್ಯಾತಿ, ಲೂಟಿ, ಭ್ರಷ್ಟತೆ ಮತ್ತು ತಾಕತ್ತು ಇನ್ನೆಂಥದ್ದಿರಬೇಕು?

• ವರದಿಗಾರ

ಯಡಿಯೂರು ಸ್ವಾಮಿ ಕೈಬಿಟ್ಟ: ನಂಬಿದ ನೆಂಟನೇ ಕೈಕೊಟ್ಟ

ಯಾಕೋ ಯಡ್ಡಿಯ ಟೈಮೇ ಸರಿಯಿಲ್ಲ, ಇನ್ನು ಅವರನ್ನು ನಂಬಿದ ಅಧಿಕಾರಿಗಳ ಗ್ರಹಚಾರ ಹೇಗೆ ತಾನೆ ನೆಟ್ಟಗಿದ್ದೀತು?


ಬನಶಂಕರಿಯ ಮನೆ, ಜಯನಗರದ ಕಾಂಪ್ಲೆಕ್ಸ್, ಚಾಮರಾಜಪೇಟೆಯ ಮತ್ತೊಂದು ಕಾಂಪ್ಲೆಕ್ಸ್, ಯಶವಂತಪುರದ ಅಪಾರ್ಟ್‌ಮೆಂಟ್, ಕದಿರೇನಹಳ್ಳಿಯ ಮನೆ ಮತ್ತು ಸಿಕ್ಕ ನಗದು ಸೇರಿದರೆ ಮೃತ್ಯುಂಜಯ ಸ್ವಾಮಿಯ ಒಟ್ಟು ಆಸ್ತಿ 6 ಕೋಟಿಯಷ್ಟಾಗುತ್ತದೆ. ಇದು ಲೋಕಾಯುಕ್ತ ಪತ್ತೆಹಚ್ಚಿದ್ದಾದರೆ ಬಚ್ಚಿಟ್ಟಿದ್ದು ಇನ್ನೆಷ್ಟಿದೆಯೋ?



ವಿಚಿತ್ರವೆಂದರೆ 90 ಕೇಜಿಯಷ್ಟು ಶ್ರೀಗಂಧವನ್ನು ಸ್ವಾಮಿ ತನ್ನ ಮನೆಯಲ್ಲಿ ಶೇಖರಿಸಿಟ್ಟಿದ್ದು. ಮೊದಲು ಕಟ್ಟಡ ಕೆಲಸಕ್ಕೆ ಬಂದಿದ್ದ ಹುಡುಗರು ಬಚ್ಚಿಟ್ಟಿದ್ದಾರೆಂದರೆ. ಕೊನೆಗೆ ವಿಧಿಯಿಲ್ಲದೆ ಅದು ಯಡಿಯೂರು ರಂಭಾಪುರಿ ಶಾಖಾ ಮಠದ ರೇಣುಕಾ ಶಿವಾಚಾರ್ಯ ಸ್ವಾಮೀಜಿಗೆ ಸೇರಿದ್ದೆಂದು ಕತೆ ಕಟ್ಟಿದ. ಅದು ಸ್ವಾಮೀಜಿಯದ್ದೇ ಆಗಿದ್ದರೆ ಕನಿಷ್ಠ ಆ ಸ್ವಾಮಿಯಾದರೂ ಮೃತ್ಯುಂಜಯನ ನೆರವಿಗೆ ಬರಬೇಕಿತ್ತು, ಅದು ಮಠಕ್ಕೆ ಸೇರಿದ್ದೆಂದು, ಯಾವ ಕಾರಣಕ್ಕೆ ಮೃತ್ಯುಂಜಯನ ಮನೆಯಲ್ಲಿಟ್ಟಿದ್ದೆಂದೂ ಹೇಳಿಕೆ ಕೊಡಬಹುದಿತ್ತು.

ದೌರ್ಭಾಗ್ಯವೆಂದರೆ ನಂಬಿದ ಸ್ವಾಮಿ ಹಾಳಾಗಲಿ. ಅವರ ರಕ್ತ ಸಂಬಂಧಿಗಳೇ ಅವರನ್ನು ಲೋಕಾಯುಕ್ತಕ್ಕೆ ಹಾಕಿಕೊಟ್ಟಿದ್ದರು. ಆಸ್ತಿ ಹಂಚಿಕೆ ಮತ್ತು ಖಮಾಯಿಯ ದುರಾಶೆಗೆ ಬಿದ್ದ ಅವರ ನೆಂಟರಿಷ್ಟರೇ ಅಸೂಯೆಗೆ ಬಿದ್ದು ಲೋಕಾಯುಕ್ತಕ್ಕೆ ಮಾಹಿತಿ ಕೊಟ್ಟಿದ್ದರು!

ಬಾಗಲುಗುಂಟೆ ಶೂಟೌಟ್
ಹೆಬ್ಬೆಟ್ಟು ಮಂಜನ ಹಂತಕ ಪಡೆಗೆ ಗುಂಡು



ಹೆಬ್ಬೆಟ್ಟು ಮಂಜ

ಕುರ್ಪ್ ವಿನಿ ಮತ್ತು ಡಾಬಾ ಮೂರ್ತಿ ಗುಂಡೇಟು ತಿಂದು ಸದ್ಯ ಎಂ.ಎಸ್.ರಾಮಯ್ಯ ಆಸ್ಪತ್ರೆ ಸೇರಿದ್ದಾರೆ. ಮತ್ತೆ ರೆಡಿಯಾಗುವುದು ಕಷ್ಟ. ಜುಲೈ 24ರ ಬೆಳಗಿನ ಜಾವ ಮೂರೂವರೆಯ ಹೊತ್ತಿಗೆ ಪೀಣ್ಯದ ಬಾಗಲಗುಂಟೆ ಬಳಿ ಡಕಾಯಿತಿಗೆಂದು ಬೈಕೇರಿ ಹೋಗುತ್ತಿದ್ದ ವಿನಿ ಮತ್ತು ಡಾಬಾ ಮೂರ್ತಿಯನ್ನು ಸಿಸಿಬಿ ಎಸಿಪಿ ಹಾದಿಮನಿಯವರ ತಂಡ ಬೆನ್ನಟ್ಟಿ ಗುಂಡಿಟ್ಟಿದೆಯೆಂಬುದು ಪೊಲೀಸರ ವಾದ.

ಗಿರಿನಗರದ ಪಾತಕಿ ಕುರ್ಪ್ ವಿನಿ ಮತ್ತು ನಾಗರಬಾವಿಯ ಕಿರಾತಕ ಡಾಬಾ ಮೂರ್ತಿಗೆ ಪೊಲೀಸರು ಗುಂಡಿನ ರುಚಿ ತೋರಿಸಿದ್ದಾರೆ!

ಒಬ್ಬ ಸೈಕಲ್ ರವಿಯ ಬಂಟನಾದರೆ ಮತ್ತೊಬ್ಬ ಹೆಬ್ಬೆಟ್ಟು ಮಂಜನ ಫೈನಾನ್ಸ್ ಕಲೆಕ್ಟರ್. ಇಬ್ಬರೂ ಒಟ್ಟಿಗೆ ಸೇರಿದ್ದು ಮುಲಾಮನ ಕಾರಣಕ್ಕಾ? ಅಥವಾ ಸೈಕಲ್ ರವಿಯ ಸುಪಾರಿಯನ್ನು ಪೂರೈಸಲಿಕ್ಕಾ? ಇವರಿಬ್ಬರನ್ನು ಆಪರೇಟ್ ಮಾಡುತ್ತಿದ್ದದ್ದು ಹೆಬ್ಬೆಟ್ಟು ಮಂಜನಾ? ಎಸ್ಕೇಪಾಗಿ ದುಬೈನಲ್ಲಿ ಕೂತು ಹೆಬ್ಬೆಟ್ಟು ಮಂಜ ಯಾರ ತಲೆತೆಗೆಯಲು ಕತ್ತಿ ಮಸೆಯುತ್ತಿದ್ದಾನೆ? ಇದು ಹೆಬ್ಬೆಟ್ಟು ಮಂಜನ ಹಾವಳಿಗೆ ಪೊಲೀಸರು ಕೊಟ್ಟ ಪೆಟ್ಟಾ ಅಥವಾ ಬೆಂಗಳೂರಿನ ಅಂಡರ್‌ವರ್ಲ್ಡ್‌ಗೆ ಈ ಮೂಲಕ ಪೊಲೀಸರು ಬಿಸಿ ಮುಟ್ಟಿಸಿದ್ದಾರಾ?

ಈ ಎಲ್ಲ ಪ್ರಶ್ನೆಗಳಿಗೂ ಒಂದೇ ಉತ್ತರದಂತಿದೆ ಜುಲೈ 24ರ ಶೂಟೌಟ್. ಕುರ್ಪ್ ವಿನಿ ಮತ್ತು ಡಾಬಾ ಮೂರ್ತಿ ಗುಂಡೇಟು ತಿಂದು ಸದ್ಯ ಎಂ.ಎಸ್.ರಾಮಯ್ಯ ಆಸ್ಪತ್ರೆ ಸೇರಿದ್ದಾರೆ. ಇಬ್ಬರ ಕಾಲಿಗೂ ಗುಂಡು ಬಿದ್ದಿದೆ. ಮತ್ತೆ ರೆಡಿಯಾಗುವುದು ಕಷ್ಟ. ಜುಲೈ 24ರ ಬೆಳಗಿನ ಜಾವ ಮೂರೂವರೆಯ ಹೊತ್ತಿಗೆ ಪೀಣ್ಯದ ಬಾಗಲಗುಂಟೆ ಬಳಿ ಡಕಾಯಿತಿಗೆಂದು ಬೈಕೇರಿ ಹೋಗುತ್ತಿದ್ದ ವಿನಿ ಮತ್ತು ಡಾಬಾ ಮೂರ್ತಿಯನ್ನು ಸಿಸಿಬಿ ಎಸಿಪಿ ಹಾದಿಮನಿಯವರ ತಂಡ ಬೆನ್ನಟ್ಟಿ ಗುಂಡಿಟ್ಟಿದೆಯೆಂಬುದು ಪೊಲೀಸರ ವಾದ.

ಆದರೆ ಅಂಡರ್‌ವರ್ಲ್ಡ್ ಹವಾಮಾನ ಬಲ್ಲವರಿಗೆ ಅಸಲೀ ಸಂಗತಿಯೇ ಬೇರೆಯಾಗಿ ಕಾಣಿಸುತ್ತದೆ. ಈ ಹಿಂದೆ ಕತ್ರಿಗುಪ್ಪೆ, ಬನಶಂಕರಿ, ಇಟ್ಟಮಡು, ಹೊಸಕೆರೆಹಳ್ಳಿ ಸುತ್ತಮುತ್ತ ಆಕ್ಟೀವ್ ಆಗಿದ್ದ ಸೈಕಲ್ ರವಿ ಗ್ಯಾಂಗ್



ಮಂಜುನಾಥ, ನಾಗರಾಜ, ರವಿನಾಯಕ್, ಹೆಬ್ಬೆಟ್ಟು ಮಂಜ, ರಘು, ರಾಜ

ಇತ್ತೀಚೆಗೆ ವಿಪರೀತ ಅಡ್ಡೆ ಹಾಕುತ್ತಿರುವುದು ನಾಗರಬಾವಿ ಸುತ್ತಮುತ್ತ ಕೆಂಗುಂಟೆ, ಮಲ್ಲತ್ತಹಳ್ಳಿ, ಅಂಬೇಡ್ಕರ್ ಕಾಲೇಜ್, ಜ್ಞಾನಭಾರತಿ ಏರಿಯಾಗಳಲ್ಲಿ ಏಕಾಏಕಿ ಸೈಕಲ್ ರವಿ ಗ್ಯಾಂಗ್ ಜಮೆಯಾಗುವುದಕ್ಕೂ, ಹೆಬ್ಬೆಟ್ಟು ಮಂಜ ಇದ್ದಕ್ಕಿದ್ದಂತೆ ಎಸ್ಕೇಪಾಗಿ ದುಬೈ ಸೇರಿಕೊಂಡು ಪೊಲೀಸರನ್ನು ಕೆಣಕುವುದಕ್ಕೂ ಸಂಬಂಧವಿದೆ.

ಜೈಲಲ್ಲಿ ಶತಗತಾಯ ಕೊರಂಗುವನ್ನು ಕೊಂದೇ ತೀರುತ್ತೇನೆಂದು ಮಂಜ ಶಪಥಗೈದಿದ್ದಾನೆ. ಕೊರಂಗು ಪಡೆಯ ಹಂಟರ್ ಟಿ.ಸಿ.ರಾಜನ್ ವಿಕೆಟ್ ತೆಗೆದೇ ತೆಗಿತೀನಿ ಎಂದು ರೌಂಡಿಂಗ್ ಶುರುಹಚ್ಚಿಕೊಂಡವನು ಆತನ ಬಂಟ ಡಾಬಾ ಮೂರ್ತಿ. ಕೊರಂಗು ಮತ್ತಾತನ ನಂಬಿಕಸ್ತ ಟಿ.ಸಿ.ರಾಜನ್ ವಿರುದ್ಧ ಕತ್ತಿ ಮಸೆಯುತ್ತಿರುವುದು ಕೇವಲ ಹೆಬ್ಬೆಟ್ಟು ಮಂಜ ಮತ್ತು ಡಾಬಾ ಮೂರ್ತಿ ಮೇಲೆ ಮಾತ್ರ ಅಲ್ಲ, ನಿಗೂಢ ಪಾತಕಿ ಮುಲಾಮ, ಆತನ ದೋಸ್ತ್ ಸೈಕಲ್‌ರವಿ ಇದಕ್ಕೆ ಹಿಮ್ಮೇಳ ಒದಗಿಸುತ್ತಿದ್ದಾರೆ.

ಇಂಥದೊಂದು ಉದ್ದೇಶ ಹೊತ್ತು ದುಬೈ ಹೊಕ್ಕಿ ಕೂತ ಹೆಬ್ಬೆಟ್ಟು ಮಂಜನಿಗೆ ಇಲ್ಲಿಂದಲೇ ದುಡ್ಡಿನ



ಶೂಟೌಟ್ ನಡೆದಲ್ಲಿ ಅಲೋಕ್‌ಕುಮಾರ್

ವ್ಯವಸ್ಥೆಯಾಗಬೇಕು ಮತ್ತು ದುಬೈನಲ್ಲಿ ಆತನ ಖರ್ಚು ವೆಚ್ಚಗಳನ್ನೆಲ್ಲ ನಿಭಾಯಿಸಲು ಸಿಕ್ಕಾಪಟ್ಟೆ ದುಡ್ಡು ಬೇಕು. ಆ ಪಾಟಿ ದುಡ್ಡು ಹೊಂದಿಸಬೇಕಲ್ಲ; ಅದಕ್ಕೊಂದು ಬೆಂಗಳೂರಿನ ಬೇರೆ ಬೇರೆ ಭಾಗಗಳಲ್ಲಿ ರಾಬರಿ, ಡಕಾಯಿತಿಗಿಳಿದವರೇ ಡಾಬಾ ಮೂರ್ತಿ ಮತ್ತು ಕುರ್ಪ್ ವಿನಿ!

ವಿನಯ್ ಅಲಿಯಾಸ್ ಕುರ್ಪ್ ವಿನಿ ಮೂಲತಃ ಗಿರಿನಗರದ ಆವಲಹಳ್ಳಿಯವನು. 2005ರಲ್ಲಿ ಎಸ್‌ಟಿಡಿ ಕುಮಾರನ ಅಣ್ಣ ಚಂದ್ರನನ್ನು ಮರ್ಡರ್ ಮಾಡಿ ಜೈಲಿಗೆ ಹೋದವನಿಗೆ ಅಲ್ಲಿ ಪರಿಚಯವಾದವನು ಖತರ್‌ನಾಕ್ ಸೈಕಲ್‌ರವಿ. ವಿನಿ ಸೈಕಲ್‌ರವಿ ಜೊತೆ ಕೈಗೂಡಿಸಿದ್ದು ಗೊತ್ತಾಗಿ ಎಸ್‌ಟಿಡಿ ಕುಮಾರ ಕತ್ರಿಗುಪ್ಪೆ ಲಿಂಗನ ಗ್ಯಾಂಗ್ ಸೇರಿಕೊಂಡ. ವಿನಿಗೆ ಸಪೋರ್ಟು ಕೊಡುತ್ತಿದ್ದಾನೆ ಎಂದೇ ಲಿಂಗನ ಹುಡುಗರು ಹೊಸಕೆರೆಹಳ್ಳಿಯ ವೆಂಕಿಯನ್ನು ಮುಗಿಸಿದರು. ಇನ್ನೆಲ್ಲಿ ತನ್ನನ್ನೇ ಲಿಂಗನ ಹುಡುಗರು ಮುಗಿಸುತ್ತಾರೋ ಎಂದು 2009ರಲ್ಲಿ ಚಂದ್ರನ ತಮ್ಮ ಕುಮಾರನನ್ನೂ ವಿನಿ ಕೊಂದು ಹಾಕಿದ್ದ.

2010ರ ಏಪ್ರಿಲ್ 29ರಂದು ಸೈಕಲ್‌ರವಿ ಗ್ಯಾಂಗ್ ಮನೆಗೆ ನುಗ್ಗಿ ಲಿಂಗನನ್ನು ಮುಗಿಸಿತ್ತಲ್ಲ; ರಿವೇಂಜಿಗೆ ಬಿದ್ದ ಲಿಂಗನ ಶಿಷ್ಯರಾದ ದೀಪು, ಪವನ, ಮುನಿಯರ ಪಡೆ ಸೈಕಲ್ ರವಿ ಸಿಗಲಿಲ್ಲ ಎಂದು ಹುಡುಕಿದ್ದೇ ವಿನಿಯನ್ನು. ಅದು ಗೊತ್ತಾಗಿಯೇ ದೂರದ ನಾಗವಾರಕ್ಕೆ ಮನೆಯನ್ನು ಬದಲಾಯಿಸಿದ ವಿನಿ ಲಿಂಗನ ಶಿಷ್ಯರ ಪೈಕಿ ದೀಪು, ಪವನ ಅಥವಾ ಮುನಿಯ ಯಾರೇ ಸಿಕ್ಕರೂ ಕತ್ತರಿಸಿಹಾಕುತ್ತೇನೆಂದು ರೌಂಡಿಂಗ್ ಆರಂಭಿಸಿಬಿಟ್ಟ. ಮತ್ತೊಂದೆಡೆ ವಿನಿಯನ್ನು ಹುಡುಕಿಕೊಂಡು ದೀಪು-ಪವನರ ಪಡೆ ಕಾರ್ಯಾಚರಣೆಗಿಳಿದಿತ್ತು. ಸಿಸಿಬಿ ಪೊಲೀಸರು ಕತ್ರಿಗುಪ್ಪೆ, ಇಟ್ಟಮಡು ಸುತ್ತಮುತ್ತ ಸಿಕ್ಕಸಿಕ್ಕ ರೌಡಿಗಳನ್ನೆಲ್ಲ ಜಾಲಾಡಲು ಶುರುಹಚ್ಚಿಕೊಂಡರು. ಹುಷಾರಾದ ವಿನಿ ನಾಗರಬಾವಿ ಮಲ್ಲತ್ತಹಳ್ಳಿಯ ಡಾಬಾ ಮೂರ್ತಿಯ ಜೊತೆ ಕೈಮಿಲಾಯಿಸಿ ತನ್ನೆಲ್ಲ ಕಾರ್ಯಾಚರಣೆಯನ್ನು ಜ್ಞಾನಭಾರತಿ ಲಿಮಿಟ್ಟಿಗೆ ಸ್ಥಳಾಂತರಿಸಿದ.


ವಿನಿಯ ಪಾತಕ ಹಿನ್ನೆಲೆ ಡಾಬಾ ಮೂರ್ತಿಗೆ ಇಲ್ಲವಾದರೂ ವಸೂಲಿ, ಮೀಟರ್‌ಬಡ್ಡಿ, ಫೈನಾನ್ಸಿಂಗ್ ವಿಷಯದಲ್ಲಿ ಮೂರ್ತಿ ನಿಸ್ಸೀಮ. ಆತ ಹೆಬ್ಬೆಟ್ಟು ಮಂಜನ ರೈಟ್‌ಹ್ಯಾಂಡ್. ಜೈಲಿಂದ ಹೊರಬಿದ್ದ ಮಂಜ ಕೆಲಕಾಲ ಯಲಹಂಕದ ಬುಲೆಟ್ ರವಿಯ ಅಡ್ಡೆಯಲ್ಲಿದ್ದ. ಕ್ರಮೇಣ ಜ್ಞಾನಭಾರತಿ, ಸುಂಕದಕಟ್ಟೆ ಆಸುಪಾಸಿನಲ್ಲಿ ಮೀಟರ್‌ಬಡ್ಡಿ ದಂಧೆಗೆ ಕೈಯಿಟ್ಟ.


ಈ ಸುತ್ತಮುತ್ತ ನಾಯಿಕೊಡೆಗಳಂತೆ ತಲೆಯೆತ್ತಿದ ಇಸ್ಪೀಟು ಕ್ಲಬ್ಬುಗಳಲ್ಲಿ ಪ್ರತಿನಿತ್ಯ ಲಕ್ಷಾಂತರ ರೂಪಾಯಿಗಳ ವಹಿವಾಟಾಗುತ್ತದೆ. ಇಂಥ ಕ್ಲಬ್ಬುಗಳ ಜೂಜುಕೋರರಿಗೆ ದಿನದ ಲೆಕ್ಕದಲ್ಲಿ ಹತ್ತು ಪರ್ಸೆಂಟಿಗೆ ಬಡ್ಡಿಗೆ ಬಿಡುತ್ತಿದ್ದವನು ಹೆಬ್ಬೆಟ್ಟು ಮಂಜ.

ಮಂಜ ದುಬೈಗೆ ಎಸ್ಕೇಪಾದ ಮೇಲೆ ಆತನ ಇಸ್ಪೀಟು ಬಡ್ಡಿ, ಮೀಟರ್ ಬಡ್ಡಿ, ಫೈನಾನ್ಸಿಂಗ್ ವ್ಯವಸ್ಥೆಯನ್ನು ಸಂಭಾಳಿಸಲು ನಿಂತವನು ಡಾಬಾ ಮೂರ್ತಿ. ಮಂಜನ ಎಟಿಎಂ ಕಾರ್ಡು ಸದ್ಯ ಈತನ ಬಳಿಯಿದೆ. ಆತನ ಐಸಿಐಸಿಐ ಮತ್ತು ಆಕ್ಸಿಸ್ ಬ್ಯಾಂಕ್ ಖಾತೆಗಳ ನಂಬರ್ ಈತನಿಗೆ ಚೆನ್ನಾಗಿ ಗೊತ್ತು. ಬಂದ ದುಡ್ಡನ್ನೆಲ್ಲ ಹೆಬ್ಬೆಟ್ಟು ಮಂಜನ ಅಕೌಂಟಿಗೆ ನಿಯತ್ತಾಗಿ ಹಾಕುತ್ತಾನೆ. ಇಲ್ಲಿ ಮೂರ್ತಿ ಹಾಕಿದ ದುಡ್ಡನ್ನು ದುಬೈನಲ್ಲಿ ಹೆಬ್ಬೆಟ್ಟು ಡ್ರಾ ಮಾಡಿಕೊಳ್ಳುತ್ತಾನೆ.


ಇದು ಹೆಬ್ಬೆಟ್ಟು ಮಂಜನ ಆದಾಯ ಮೂಲವಾದರೆ ಗ್ಯಾಂಗ್‌ವಾರ್‌ನಲ್ಲಿ ಚುಕ್ತಾ ಮಾಡಬೇಕಾದ ಬಾಕಿಯ ಲೆಕ್ಕವೇ ಬೇರೆಯಿದೆ. ಸದ್ಯ ಬೆಂಗಳೂರು ಜೈಲಿನಲ್ಲಿರುವ ಕೊರಂಗುವನ್ನು ಮುಗಿಸದೇ ವಾಪಸ್ಸಾಗಲ್ಲ ಎಂದು ಮಂಜ ಶಪಥಗೈದಿದ್ದಾನಂತೆ. ಒಂದು ಮೂಲದ ಪ್ರಕಾರ ತಾನು ದುಬೈನಲ್ಲಿದ್ದೇನೆಂದು ಪೊಲೀಸರನ್ನು ಯಾಮಾರಿಸುತ್ತಲೇ ಹೆಬ್ಬೆಟ್ಟು ಮಂಜ ಮುಂಬಯಿಯಲ್ಲಿ ಓಡಾಡಿಕೊಂಡಿದ್ದಾನೆ. ಮಹಾರಾಷ್ಟ್ರದ ಬೇರೆ ಬೇರೆ ಭಾಗಗಳ ಲಿಂಕೂ ಆತನಿಗಿದೆ. ಸದ್ಯ ಕೊರಂಗು ಪರವಾಗಿ ಹೊರಗೆ ಫೀಲ್ಡ್ ನಡೆಸುತ್ತಿರುವವನು ಟಿ.ಸಿ.ರಾಜನ್.

ಸದ್ಯ ಸುನೀಲನನ್ನು ಬಿಟ್ಟರೆ ಕಸುಬುದಾರಿಕೆಯಲ್ಲಿ ಟಿ.ಸಿ.ರಾಜನ್ ಮಹಾನ್ ಚಾಣಾಕ್ಷ.





ಸೈಕಲ್ ರವಿ



ಮುಲಾಮ



ಕೊರಂಗು

ಈ ಹಿಂದೆ ಮಾರೇನಹಳ್ಳಿ ಜಗ್ಗನ ಜೊತೆಗಿದ್ದ. ಜಗ್ಗ ದೂರ ಮಾಡಿದ ಮೇಲೆ ಗೆಡ್ಡಾನಾಗನ ಜೊತೆ ಬಿದ್ದ. ಜೈಲಲ್ಲಿ ಕೊರಂಗುಗೆ ರಾಜ ಸಾಥಿಯಾದ. ಆತನ ಕಾಂಟ್ಯಾಕ್ಟ್, ಓಡಾಟ ಮತ್ತು ಉದ್ದೇಶವನ್ನು ಚೆನ್ನಾಗಿ ಅರ್ಥಮಾಡಿಕೊಂಡ ಮುಲಾಮ ಇವತ್ತಲ್ಲ ನಾಳೆ ತನಗೆ ಅಪಾಯ ಅಂತಿದ್ದರೆ ಅದು ರಾಜ ಮಾತ್ರ ಎಂದು ನಿರ್ಧರಿಸಿಬಿಟ್ಟ. ಕೊರಂಗು ಪಡೆಯ ತಾಕತ್ತಿರುವುದೇ ರಾಜನ ಕೈಯಲ್ಲಿ ಎಂದು ಸೈಕಲ್‌ರವಿಯೂ ಲೆಕ್ಕಹಾಕಿದ. ಜೈಲಲ್ಲಿ ಕೊರಂಗು ಮುಗಿಸುವುದು ಸಾಧ್ಯವಾಗದೇ ಹೋದರೆ ಹೊರಗೆ ಓಡಾಡಿಕೊಂಡಿರುವ ರಾಜನ್‌ಗೆ ಒಂದು ಗತಿ ಕಾಣಿಸಿದರಾಯ್ತು ಎಂದು ಹೆಬ್ಬೆಟ್ಟು ಮಂಜ ತೀರ್ಮಾನಿಸಿದ.

ಅಷ್ಟಕ್ಕೂ ಕೆಂಗೇರಿಯಿಂದ ಸುಂಕದಕಟ್ಟೆಯತನಕದ ವ್ಯಾಪ್ತಿಯ ಮೆಚ್ಚನ ಗ್ಯಾಂಗಿನಲ್ಲಿ ಉಳಿದಿರುವವನೆಂದರೆ ಅದು ರಾಜ ಮಾತ್ರ. ಆತನನ್ನು ನಿಕಾಲಿ ಮಾಡಿಬಿಟ್ಟರೆ ಕೆಂಗುಂಟೆ, ಜ್ಞಾನಭಾರತಿ, ಉಲ್ಲಾಳು, ನಾಗರಬಾವಿ, ಮಲ್ಲತ್ತಹಳ್ಳಿ, ಸುಂಕದಕಟ್ಟೆ ಸುತ್ತಮುತ್ತಲ ರಾಮ-ಲಕ್ಷ್ಮಣರ ಸಾಮ್ರಾಜ್ಯಕ್ಕೂ ಅಪಾಯ ತಪ್ಪಿದಂತಾಯ್ತು. ಇದೆಲ್ಲವನ್ನೂ ಲೆಕ್ಕ ಹಾಕಿಯೇ ನಿಗೂಢವಾಗಿ ಭೂಗತನಾದ ಹೆಬ್ಬೆಟ್ಟು ಮಂಜ ತನ್ನ ಉದ್ದೇಶಕ್ಕೆಂದು ಓಡಾಡಲು ಬಿಟ್ಟಿದ್ದು ಡಾಬಾ ಮೂರ್ತಿಯನ್ನು.


ಮೂರ್ತಿಗೆ ಜೊತೆಯಾದವನು ಸೈಕಲ್ ಶಿಷ್ಯ ಕುರ್ಪ್ ವಿನಿ. ಮತ್ತೊಂದೆಡೆ ಕಣ್ಮರೆಯಾದ ಹೆಬ್ಬೆಟ್ಟು ಮಂಜನ ಕಾರ್ಯಾಚರಣೆಯ ಮೇಲೆ ಸಿಸಿಬಿಯ ಎಸಿಪಿ ಹಾದಿಮನಿಯವರ ಕಣ್ಣು ಬಿದ್ದಿದೆ. ಕೆಲಸಕ್ಕೆ ನಿಂತರೆ ಹಾದಿಮನಿ ಮಹಾನ್ ನಿಷ್ಠುರಿ. ಹೇಗೋ ಹೆಬ್ಬೆಟ್ಟು ಮಂಜನ ಮೊಬೈಲ್ ನಂಬರ್ ಪತ್ತೆಹಚ್ಚಿ ಅದಕ್ಕೆ ಕಿವಿ ಹಚ್ಚಿ ಕೂತ ಹಾದಿಮನಿಗೆ ಆತನ ಪರ ಡಾಬಾ ಮೂರ್ತಿ ಫೀಲ್ಡಿಗಿಳಿದಿರುವುದು ಗೊತ್ತಾಗಿದೆ. ಅದೇ ಹೊತ್ತಿಗೆ ಹೆಚ್.ಎಸ್.ಆರ್. ಬಡಾವಣೆಯಲ್ಲಿ ಇಲ್ಲಿಗೆ ತಿಂಗಳ ಹಿಂದೊಂದು ರಾಬರಿ ನಡೆದಿದೆ. ವ್ಯಾಪಾರಿಯೊಬ್ಬನನ್ನು ಅಡ್ಡಗಟ್ಟಿ 32 ಲಕ್ಷ ರೂ.ಗಳನ್ನು ಕಿತ್ತೊಯ್ದ ಘಟನೆಯಿಂದಾಗಿ ಇಡೀ ಬೆಂಗಳೂರು ಪೊಲೀಸರೇ ಥಂಡ ಹೊಡೆದಿದ್ದಾರೆ.

ಆದರ ಬೆನ್ನತ್ತಿದ ಪೊಲೀಸರಿಗೆ ವಾಸನೆ ಹತ್ತಿದ್ದು ಡಾಬಾ ಮೂರ್ತಿ ಮತ್ತು ಕುರ್ಪ್ ವಿನಿ ಗ್ಯಾಂಗ್ ಮೇಲೆ. ಹೆಬ್ಬೆಟ್ಟು ಮಂಜನ ಖರ್ಚುವೆಚ್ಚಕ್ಕಾಗಿ ಆತನ ಬಂಟರು ರಾಬರಿ ಶುರುಹಚ್ಚಿಕೊಂಡಿದ್ದಾರೆಂದೇ ನಿರ್ಧರಿಸಿದ ಸಿಸಿಬಿ ಪೊಲೀಸರು ಮತ್ತೊಂದೆಡೆ ಡಾಬಾಮೂರ್ತಿಯ ಮೊಬೈಲಿಗೆ ಕಿವಿ ಕೊಟ್ಟಿದ್ದಾರೆ. ಹೆಬ್ಬೆಟ್ಟು ಮಂಜನ ಫೈನಾನ್ಸಿಂಗ್, ಮೀಟರ್ ಬಡ್ಡಿದಂಧೆಯ ಆಧಾರಸ್ತಂಭವೇ ಡಾಬಾ ಮೂರ್ತಿ ಎಂಬುದು ಗೊತ್ತಾದದ್ದೇ ಆಗ. ಎಸಿಪಿ ಹಾದಿಮನಿ ತಂಡ ಸದ್ದಿಲ್ಲದೇ ಡಾಬಾ ಮೂರ್ತಿಯ ಬೆನ್ನಿಗೆ ಬಿದ್ದಿದೆ.

ಇದೆಲ್ಲ ಕಾರ್ಯಾಚರಣೆಯ ಕ್ಲೈಮ್ಯಾಕ್ಸ್ ನಡೆದದ್ದು ಜುಲೈ 24ರ ಭಾನುವಾರ ರಾತ್ರಿ. ಕುರ್ಪ್ ವಿನಿ ಜೊತೆ ಡಾಬಾ ಮೂರ್ತಿಯನ್ನು ಬೆನ್ನಟ್ಟಿ ಬಂದ ಸಿಸಿಬಿ ಎಸಿಪಿ ಹಾದಿಮನಿ ತಂಡದ ಮೇಲೆ ಪಾತಕಿಗಳಿಬ್ಬರೂ ಗುಂಡು ಹಾರಿಸಿದರಂತೆ. ಆದರೆ ಹಾದಿಮನಿ ತಂಡ ಹಾರಿಸಿದ ಗುಂಡು ಕರಾರುವಾಕ್ಕಾಗಿ ಕೆಲಸ ಮಾಡಿದೆ. ಇಬ್ಬರ ಕಾಲೂ ಲ್ಯಾಪ್ಸ್ ಆಗಿದೆ. ಇನ್ನು ಮುಂದೆ ರಾಬರಿಯಾಗಲಿ, ರೌಡಿಜಮ್ಮಾಗಲಿ ಅವರಿಂದ ಸಾಧ್ಯವಿಲ್ಲ. ಜೊತೆಗೆ ಹೆಬ್ಬೆಟ್ಟು ಮಂಜನ ಕಾರ್ಯಾಚರಣೆಯ ಅಷ್ಟೂ ವಿವರಗಳು ಪೊಲೀಸರಿಗೆ ಸಿಕ್ಕಾಗಿದೆ. ಮೂಗು ಹಿಡಿದರೆ ಬಾಯಿ ಬಿಡಲೇಬೇಕಲ್ಲ, ಇಲ್ಲಿ ದುಡ್ಡೂ ಕಾಸಿಗೆ ಟೈಟ್ ಆಯಿತೆಂದರೆ ಮಂಜ ಮುಂಬಯಿಯಲ್ಲಿದ್ದರೇನು, ದುಬೈನಲ್ಲಿದ್ದರೇನು? ಬೆಂಗಳೂರಿಗೆ ಬರಲೇಬೇಕು.

ಆ ಮಟ್ಟಿಗೆ ಪೊಲೀಸರ ತಂತ್ರವಂತೂ ಫಲಿಸಿದೆ. ಅದ್ಯಾವತ್ತು ಹೆಬ್ಬೆಟ್ಟು ಮಂಜ ಬೋನಿಗೆ ಬೀಳುತ್ತಾನೆಂಬುದಷ್ಟೇ ಉಳಿದಿರುವ ಪ್ರಶ್ನೆ.

• ರಾ.ಸೋಮನಾಥ್



"ನನ್ನ ಟೆಲಿಫೋನ್ ಕದ್ದಾಲಿಕೆ ನಡೆಯುತ್ತಿದೆ" ಎಂದು ಲೋಕಾಯುಕ್ತ ನ್ಯಾಯಾಧೀಶ ಸಂತೋಷ್ ಹೆಗ್ಡೆ ಹೇಳಿ ಒಂದು ವಾರದ ಮೇಲಾಯಿತು. ಆದರೆ ಈ ಕದ್ದು ಕೇಳುತ್ತಿದ್ದವರನ್ನು ಪತ್ತೆಹಚ್ಚಲು ಬಿಜೆಪಿ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಯಾಕೆ?

ಸಂತೋಷ್ ಹೆಗ್ಡೆ ಕದ್ದಾಲಿಕೆ ಬಗ್ಗೆ ಯಾವುದೇ ದೂರು ಕೊಟ್ಟಿಲ್ಲ ಎಂಬುದು ಬೇರೆ ಮಾತು. ಆದರೆ ಸರ್ಕಾರ ಅಥವಾ ಪೊಲೀಸರು ಸ್ವಯಂಪ್ರೇರಣೆಯಿಂದ ಒಂದು ತನಿಖೆ ಅಂತ ಮಾಡಬಹುದಿತ್ತಲ್ಲವೆ?

ಆದರೆ ಯಾಕೆ ತನಿಖೆ ಮಾಡಿಸಲಿಲ್ಲ?

ಯಾಕೆಂದರೆ ಅಂತಾದೊಂದು ತನಿಖೆ ನಡೆದೇ ಬಿಟ್ಟಿದ್ದಿದ್ದರೆ ಸಿಕ್ಕಿ ಬೀಳುತ್ತಿದ್ದವರು ಯಾರು ಗೊತ್ತೆ?

ಯಡಿಯೂರಪ್ಪ ಹಾಗೂ ಸಿಸಿಬಿಯ ಜಾಯಿಂಟ್ ಕಮಿಷನರ್ ಅಲೋಕ್‌ಕುಮಾರ್.....! ಜೊತೆಗೆ ಅಗತ್ಯ ನೆರವಿತ್ತು ಕದ್ದಾಲಿಕೆಗೆ ದಾರಿ ಮಾಡಿಕೊಟ್ಟಿದ್ದರು ಎನ್ನಲಾಗಿರುವ ರಾಜ್ಯ ಗೃಹ ಕಾರ್ಯದರ್ಶಿ ಎಸ್.ಎಂ.ಜಾಮ್‌ದಾರ್!!

ಇಂತಹದ್ದೊಂದು ಅನಧಿಕೃತ ಆದರೆ ಖಚಿತ ಸುದ್ದಿ ಲೋಕಾಯುಕ್ತ ಕಚೇರಿಯಲ್ಲಿ ಹರಿದಾಡುತ್ತಿದೆ.

ಚಾಮರಾಜಪೇಟೆ-ಡಾಲರ್ಸ್ ಕಾಲನಿಯಲ್ಲಿ....

ತಮ್ಮ ಫೋನ್ ಕದ್ದಾಲಿಕೆಯ ಬಗ್ಗೆ ಬಹಿರಂಗವಾಗಿ ಹೇಳಿಕೊಂಡ ಸಂತೋಷ್ ಹೆಗ್ಡೆ ಬೆಂಗಳೂರಿನ ಎರಡು ಜಾಗದಲ್ಲಿ ಈ ಕದ್ದಾಲಿಕೆ ನಡೆಯುತ್ತಿತ್ತೆಂದರು. ಒಂದು ಡಾಲರ್ಸ್ ಕಾಲನಿ ಇನ್ನೊಂದು ಚಾಮರಾಜಪೇಟೆ ಏರಿಯಾ ಅಂತಲೂ ಹೇಳಿದರು. ಆದರೆ ಅಲ್ಲಿಂದಾಚೆಗೆ ಈ ಏರಿಯಾಗಳ ಯಾವ ಮನೆ ಅಥವಾ ಕಟ್ಟಡ ಇತ್ಯಾದಿ ವಿವರಗಳನ್ನು ನೀಡಲು ಅವರು ಇಷ್ಟಪಡಲಿಲ್ಲ. ಹಾಗೆಂದು ಲೋಕಾಯುಕ್ತರಿಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲವೆಂದೇನೂ ಅಲ್ಲ. ಫೋನ್ ಕದ್ದಾಲಿಕೆಯ ಸಾಧ್ಯತೆಯ ಬಗ್ಗೆ ಚೆಕ್ ಮಾಡಲು ಖಾಸಗಿ ಟೆಕ್ನಿಷಿಯನ್ನರನ್ನು ಕರೆಸಿದ್ದ ಅವರಿಗೆ ಯಾವ ಸ್ಥಳದಿಂದ ಟ್ಯಾಪಿಂಗ್ ನಡೆದಿತ್ತೆಂಬುದು ಖಚಿತವಾಗಿ ತಿಳಿದುಬಂದಿತ್ತು.


ಆದರೆ ಬಹಿರಂಗವಾಗಿ ಹೇಳಲಿಲ್ಲ ಅಷ್ಟೆ.

ಈ ನಡುವೆ ಅನೇಕರಿಗೆ ಚಾಮರಾಜಪೇಟೆ ಅಂದಾಕ್ಷಣ ಮೊದಲು ಅನುಮಾನ ಬಂದಿದ್ದು ಅಲ್ಲಿನ ಉಮಾ ಟಾಕೀಸ್ ಹಿಂಭಾಗದಲ್ಲಿರುವ ಆರ್‌ಎಸ್‌ಎಸ್ ಹೆಡ್‌ಆಫೀಸಿನ ಮೇಲೆ. ಆದರೆ ಅಲ್ಲಿದ್ದವರಿಗೆ ಯಡಿಯೂರಪ್ಪನ ಸರ್ಕಾರದಿಂದ ಏನೆಲ್ಲಾ ದೋಚಬಹುದೋ ಅಂತಾದ್ದನೆಲ್ಲಾ ದೋಚಿ ಜೋಳಿಗೆ ತುಂಬಿಸಿಕೊಳ್ಳುವುದರ ಬಗ್ಗೆ ಗಮನವಿತ್ತೇ ವಿನಾಃ ಈ ಫೋನ್ ಟ್ಯಾಪಿಂಗ್ ಉಸಾಬರಿ ಬೇಕಿರಲಿಲ್ಲ.


ಹಾಗಾದರೆ ಚಾಮರಾಜಪೇಟೆಯಲ್ಲಿ ಎಲ್ಲಿಂದ ಟ್ಯಾಪಿಂಗ್ ನಡೆಯುತ್ತಿತ್ತೆಂಬ ಪ್ರಶ್ನೆಗೆ ಈಗ ಉತ್ತರ ಸಿಕ್ಕಿದೆ.


ಅದು ಸಿಸಿಬಿ ಕಚೇರಿ ಎನ್ನಲಾಗಿದೆ!

ಚಾಮರಾಜಪೇಟೆಯ ರಾಯನ್ ಸರ್ಕಲ್ ಹತ್ತಿರದಲ್ಲಿ ಬೆಂಗಳೂರು ಸಿಟಿ ಕ್ರೈಂ ಬ್ರಾಂಚ್‌ನ ಕೇಂದ್ರ ಕಚೇರಿ ಇದೆ. ಲೋಕಾಯುಕ್ತರ ಫೋನ್ ಸಂಭಾಷಣೆಗಳನ್ನು ಇಲ್ಲಿಂದಲೇ ಕದ್ದು ಕೇಳಲಾಗುತ್ತಿದೆಂದು ಈಗ ಲೋಕಾಯುಕ್ತರ ಆಪ್ತರು ಖಚಿತಪಡಿಸಿದ್ದಾರೆ. ಸಿಟಿಯ ಜಾಯಿಂಟ್ ಪೊಲೀಸ್ ಕಮಿಷನರ್ (ಕ್ರೈಂ) ಆಗಿರುವ ಅಲೋಕ್ ಕುಮಾರ್ ಗಮನಕ್ಕೆ ಬಾರದಂತೆ ಈ ಟ್ಯಾಪಿಂಗ್ ನಡೆದಿರಲು ಸಾಧ್ಯವಿಲ್ಲ. ಟ್ಯಾಪಿಂಗ್‌ಗೆ ಸಿಸಿಬಿ ಕಚೇರಿ ಹೇಳಿ ಮಾಡಿಸಿದಂತೆಯೂ ಇದೆ. ಏಕೆಂದರೆ ಬೆಂಗಳೂರಿನ ಮಾಫಿಯಾಗಳೇನಕರ ಮೊಬೈಲ್ ಫೋನ್‌ಗಳನ್ನು ಇಲ್ಲಿಂದಲೇ ಟ್ಯಾಪ್ ಮಾಡಿ ಕೇಳುವ ವ್ಯವಸ್ಥೆಯೊಂದು ಸಿಸಿಬಿ ಹೆಡ್ಡಾಫೀಸಿನಲ್ಲಿದೆ. ಟ್ಯಾಪಿಂಗ್‌ಗೆ ಬೇಕಾದ ಅತ್ಯಾಧುನಿಕ ಉಪಕರಣಗಳೆಲ್ಲಾ ಅಲ್ಲಿವೆ. ಯಡ್ಡಿ ಹಾಗೂ ಗೃಹ ಕಾರ್ಯದರ್ಶಿ ಜಾಮ್‌ದಾರ್ ಜೊತೆ ಸೇರಿ ಮಾಫಿಯಾಗಳ ಫೋನ್ ನಂಬರ್‌ಗಳ ಜೊತೆಯಲ್ಲಿ ಲೋಕಾಯುಕ್ತರ ಫೋನ್ ನಂಬರ್‌ಗಳನ್ನು ಸೇರಿಸಿ ಟ್ಯಾಪಿಂಗ್ ಮಾಡಿಸಿ ಅದರ ವಿವರಗಳು ಕೆಲವು ನಿರ್ದಿಷ್ಟ ವ್ಯಕ್ತಿಗಳ ಕೈಗೆ ಮಾತ್ರ ಸಿಗುವಂತೆ ನೋಡಿಕೊಂಡಿದ್ದಾರೆ.



ಟೆಲಿಫೋನ್ ಕದ್ದಾಲಿಕೆ ಯಡ್ಡಿ ಮನೆ ಹಾಗೂ ಸಿಸಿಬಿಯಲ್ಲಿ ನಡೆಯಿತಾ?





ಡಾಲರ್ಸ್ ಕಾಲನಿಯ ಮನೆಯಲ್ಲಿ

ಲೋಕಾಯುಕ್ತರ ಕಚೇರಿಯಲ್ಲೇ ಕೇಳಿಬರುತ್ತಿರುವ ಇನ್ನೊಂದು ಟ್ಯಾಪಿಂಗ್ ಸೆಂಟರ್‌ನ ಸ್ಥಳ ಡಾಲರ್ಸ್ ಕಾಲನಿಯದ್ದು. ನೇರವಾಗಿ ಹೇಳಬೇಕೆಂದರೆ ಅಲ್ಲಿನ ಎಂಬತ್ತು ಅಡಿ ರಸ್ತೆಯಲ್ಲಿರುವ ಯಡಿಯೂರಪ್ಪನ ಮನೆ 'ದವಳಗಿರಿ'ಯ ನೆಲಮಾಳಿಗೆಯಲ್ಲಿ ಟ್ಯಾಪಿಂಗ್‌ನ ಉಪಕರಣಗಳನ್ನು ಅಳವಡಿಸಲಾಗಿತ್ತು ಎನ್ನಲಾಗುತ್ತಿದೆ. ಇನ್ನೊಂದು ಮೂಲಗಳ ಪ್ರಕಾರ ಡಾಲರ್ಸ್ ಕಾಲನಿಯಲ್ಲಿರುವ ಹೋಟೆಲ್ ನೀಲಂ ಅಥವಾ ಟವೇರಾ ರೆಸ್ಟೋರೆಂಟ್‌ನ ಸೆಲ್ಲಾರ್‌ನಲ್ಲಿ ರಹಸ್ಯವಾಗಿ ಈ ಟ್ಯಾಪಿಂಗ್ ನಡೆದಿತ್ತೆನ್ನಲಾಗಿದೆ!

ಲೋಕಾಯುಕ್ತ ಸಂತೋಷ್ ಹೆಗ್ಡೆಯವರಿಗೆ ಕಚೇರಿಯಲ್ಲಿ 2257638 ಎಂಬ ಒಂದು ಟೆಲಿಫೋನ್ ಹಾಗೂ ಮನೆಯಲ್ಲಿ 23614501 ಹಾಗೂ 23614507 ನಂಬರಿನ ಎರಡು ಲ್ಯಾಂಡ್ ಲೈನುಗಳಿವೆ. ಜೊತೆಗೊಂದು ಮೊಬೈಲೂ ಇದೆ. ಟ್ಯಾಪ್ ಮಾಡಿದವರು ಈ ನಾಲ್ಕೂ ಫೋನ್‌ಗಳ ಸಂಭಾಷಣೆಗಳನ್ನು ಕದ್ದು ಕೇಳುತ್ತಿದ್ದರು.

ಜಾಮ್‌ದಾರ್ ಪಾತ್ರ ಎಷ್ಟು?

ಹಾಲಿ ಗೃಹ ಕಾರ್ಯದರ್ಶಿಯಾಗಿರುವ ಜಾಮ್‌ದಾರ್ ಗಮನಕ್ಕೆ ಬಾರದಂತೆ ಹಾಗೂ ಅವರ ಅನುಮತಿ ಇರದೆ ಈ ಟ್ಯಾಪಿಂಗ್ ನಡೆದಿರಲಾರದು. ಕರ್ನಾಟಕದ ಹಿರಿಯ ಪೊಲೀಸ್ ಅಧಿಕಾರಿಗಳ ಪೈಕಿ Techno Savvy ಯಾಗಿರುವವರಲ್ಲಿ ಜಾಮ್‌ದಾರ್ ಕೂಡ ಒಬ್ಬರು. ದಕ್ಷ ಅಧಿಕಾರಿ ಎನಿಸಿಕೊಂಡಿರುವ ಜಾಮ್‌ದಾರ್ ಈ ವಿಚಾರದಲ್ಲಿ ದಕ್ಷತೆ ತೋರಿಸಲಿಲ್ಲವೆಂಬುದು ಆಶ್ಚರ್ಯ ತರಿಸುವಂತಿದೆ. ಇಷ್ಟರ ಮೇಲೆ ಜಾಮ್‌ದಾರ್‌ಗೆ ಈ ವಿಚಾರ ಗಮನಕ್ಕೆ ಬಂದಿರಲಿಲ್ಲವೆಂದಾದರೂ ಈ ಟ್ಯಾಪಿಂಗ್ ಹಗರಣದ ನೈತಿಕ ಹೊಣೆ ಅವರ ಮೇಲೂ ಇರುತ್ತದೆ.

ಯಡಿಯೂರಪ್ಪ ಕೇವಲ ಭ್ರಷ್ಟ ಮಾತ್ರವಲ್ಲ, ಅಧಿಕಾರ ದುರುಪಯೋಗ ಪಡಿಸಿಕೊಂಡು ಲೋಕಾಯುಕ್ತರ ಫೋನ್ ಅನ್ನೇ ಟ್ಯಾಪ್ ಮಾಡಿಸಿದ್ದು ಕ್ರಿಮಿನಲ್. ಈತನಿಗೆ ಶಿಕ್ಷೆ ನೀಡುವವರು ಯಾರು?

• ಪಾರ್ವತೀಶ

ಟೆಲಿಫೋನ್ ಟ್ಯಾಪಿಂಗ್ ಕಾಯ್ದೆ

19ನೇ ಶತಮಾನದಲ್ಲಿ ರೂಪಿಸಲಾಗಿರುವ ಕಾಯ್ದೆಗಳೇ ಇವತ್ತಿಗೂ ಇಂಡಿಯನ್ ಟೆಲಿಗ್ರಾಫ್ ಕಾಯ್ದೆ 1885 ರ ಮೂಲ ತಿರುಳಾಗಿದೆ. ಈ ಕಾಯ್ದೆಯ ಸೆಕ್ಷನ್ 5 ರ ರೂಲ್ 419 ಹಾಗೂ 419 A ನಲ್ಲಿ ಕದ್ದಾಲಿಕೆಗೆ ಕೆಲವು ಅವಕಾಶ ಮಾಡಿಕೊಡಲಾಗಿದೆ. ಅದಾದ ನಂತರ 1933 ರ ಇಂಡಿಯನ್ ವೈರ್‌ಲೆಸ್ ಅಂಡ್ ಟೆಲಿಗ್ರಾಫ್ ಕಾಯ್ದೆಗೆ ಕೆಲವು ತಿದ್ದುಪಡಿ ತರಲಾಗಿದೆ. ಟ್ಯಾಪಿಂಗ್ ಮಾಡುವ ಉದ್ದೇಶ ಕೇವಲ ಕ್ರಿಮಿನಲ್‌ಗಳು ವಿದೇಶಿ ಗೂಢಾಚಾರರ ಹಾಗೂ ದೇಶದ್ರೋಹಿ ಚಟುವಟಿಕೆಗಳಲ್ಲಿ ನಿರತರಾಗಿರುವವರನ್ನೇ ಗುರಿ ಮಾಡಿಕೊಳ್ಳಬೇಕೆಂದು ನಿರ್ದಿಷ್ಟವಾಗಿ ಹೇಳಲಾಗಿದೆ. ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಗೂಢಚರ್ಯೆ ಇಲಾಖೆಗಳು ರಂಗೋಲಿ ಕೆಳಗೆ ನುಸುಳಿ ಟ್ಯಾಪಿಂಗ್ ನಡೆಸುತ್ತಿವೆ. ಉದಾಹರಣೆಗೆ ಈ ಕಾಯ್ದೆಯಲ್ಲಿ ಮೊಬೈಲ್ ಟ್ಯಾಪಿಂಗ್ ಬಗ್ಗೆ ಏನನ್ನೂ ಹೇಳಲಾಗಿಲ್ಲ. ಜೊತೆಗೆ ಮೊಬೈಲ್ ಸೇವೆಯು ಮಾಹಿತಿ ತಂತ್ರಜ್ಞಾನ ಇಲಾಖೆಯಡಿ ಬರುತ್ತಿದೆ. ಹಾಗಾಗಿ ಟೆಲಿಗ್ರಾಫಿಕ್ ಕಾಯ್ದೆಯು ಮೊಬೈಲ್ ಸೇವೆಗೆ ಅನ್ವಯಿಸಲಾರದೆಂಬ ನೆಪ ಈ ಏಜನ್ಸಿಗಳಿಗೆ ಇದ್ದೇ ಇದೆ.

ಫೋನ್ ಟ್ಯಾಪಿಂಗ್‌ಗಾಗಿ ಉಪಕರಣಗಳನ್ನು ತರಿಸಿ ಅಳವಡಿಸುವವರು ಟೆಲಿಕಾಂ ಇಲಾಖೆಯ ಟೆಲಿಕಾಂ ಎನ್‌ಫೋರ್ಸ್‌ಮೆಂಟ್ ರಿಪೋರ್ಟ್ ಅಂಡ್ ಮಾನಿಟರಿಂಗ್ (TERM) ಸೆಲ್‌ಗೆ 60 ದಿನದೊಳಗಾಗಿ ಮಾಹಿತಿ ನೀಡಬೇಕೆಂಬ ನಿಯಮವಿದೆ. ಆದರೆ ಅದನ್ನು ಪಾಲಿಸುವವರ್‍ಯಾರು?

ರಿಲಯನ್ಸ್ ಮೊಬೈಲ್ ಕಂಪನಿಯು ಇತ್ತೀಚೆಗೆ ಕೋರ್ಟ್‌ಗೆ ನೀಡಿರುವ ಮಾಹಿತಿಯ ಪ್ರಕಾರ 2006 ರಿಂದ 2010 ರವರೆಗೆ 1.51 ಲಕ್ಷ ಫೋನ್‌ಗಳನ್ನು ಟ್ಯಾಪ್ ಮಾಡಿದ್ದೇವೆ ಎಂದಿದೆ.

ಇವೆಲ್ಲವೂ ಕೇಂದ್ರ-ರಾಜ್ಯ ಸರ್ಕಾರಗಳ ವಿವಿಧ ಗೂಢಚರ್ಯೆ ವಿಭಾಗಗಳು, ರೆವಿನ್ಯೂ ಇಂಟಲಿಜೆನ್ಸ್ ಪೊಲೀಸ್‌ನವರ ಕೋರಿಕೆಯ ಮೇರೆಗೆ ಟ್ಯಾಪ್ ಮಾಡಿಸಿರುವುದಾಗಿ ರಿಲಯನ್ಸ್ ಕಂಪನಿ ಹೇಳಿದೆ.


ಈ ರಿಲಯನ್ಸ್ ಕಂಪನಿಯೊಂದೇ ಕರ್ನಾಟಕದ ಅದೆಷ್ಟು ಮಂದಿ ರಾಜಕಾರಣಿಗಳ, ವಿರೋಧ ಪಕ್ಷದವರ ಇನ್ನಿತರರ ಫೋನ್‌ಗಳನ್ನು ಟ್ಯಾಪ್ ಮಾಡಿಸಿ ಯಡ್ಡಿ ಸರ್ಕಾರಕ್ಕೆ ತಲುಪಿಸಿದೆಯೋ ಬಲ್ಲವರ್‍ಯಾರು?




ನ್ಯಾಯ-ಅನ್ಯಾಯಗಳ ನಡುವಿನ ಸುದೀರ್ಘ ಯುದ್ಧ ಮುಗಿದಿದೆ. ಸಂತಸದ ಸಂಗತಿಯೆಂದರೆ ನ್ಯಾಯ ಗೆದ್ದಿದೆ. ಕಳ್ಳತನವನ್ನೇ ಹೊದ್ದುಕೊಂಡು ಗದ್ದುಗೆಗೆ ಅಂಟಿಕೊಂಡಿದ್ದ ಭಂಡ ಯಡಿಯೂರಪ್ಪ ಮನೆಯ ಹಾದಿ ಹಿಡಿದಿದ್ದಾನೆ. ಅಷ್ಟರಮಟ್ಟಿಗೆ ಅಕ್ರಮ ಗಣಿಗಾರಿಕೆ ಕುರಿತಾದ ಲೋಕಾಯುಕ್ತರ ವಿಸ್ತೃತ ವರದಿ ಫಲಕೊಟ್ಟಿದೆ. ಇದರಲ್ಲಿ ಸಂತೋಷ್ ಹೆಗ್ಡೆಯವರ ಶ್ರಮ, ಯಾವುದೇ ಕ್ಲಿಷ್ಟಕರ ಸಂದರ್ಭದಲ್ಲೂ


ಹೆಗ್ಡೆಯವರ ಜೊತೆಗಿದ್ದ ನಿಷ್ಠಾವಂತ ಅಧಿಕಾರಿಗಳ ಬಗ್ಗೆ...

ನಿಲುವು ಸಡಿಲಿಸದ ನಿಷ್ಠುರತೆ ನಿಜಕ್ಕೂ ಅಭಿನಂದನೀಯ. ಸದರಿ ವರದಿ ತಯಾರಿಕೆಯಲ್ಲಿ ಹೆಗ್ಡೆಯವರಿಗೆ ಹೆಗಲಾಗಿ ದುಡಿದ ಐದು ಮಂದಿ ಅರಣ್ಯ ಸೇವೆ ಅಧಿಕಾರಿಗಳೂ ಕೂಡಾ ಒಟ್ಟಾರೆ ಗೆಲುವಿನ ಪಾಲುದಾರರೆಂಬುದರಲ್ಲಿ ಸಂದೇಹವಿಲ್ಲ.


ಯು.ವಿ.ಸಿಂಗ್


ಬಿಸ್ವಜಿತ್ ಮಿಶ್ರಾ



ವಿಪಿನ್ ಸಿಂಗ್


ತಾಕತ್ ಸಿಂಗ್

ಹಾಗೆ ಸಂತೋಷ್ ಹೆಗ್ಡೆಯವರಿಗೆ ಹೆಗಲಾಗಿ ಕಾರ್ಯನಿರ್ವಹಿಸಿದವರಲ್ಲಿ ಪರಿಸರ ಸಂರಕ್ಷಣೆ ಜಾಗೃತ ದಳದ ಮುಖ್ಯಸ್ಥ ಯು.ವಿ.ಸಿಂಗ್, ಇತ್ತೀಚೆಗೆ ಮಾಹಿತಿ ತಂತ್ರಜ್ಞಾನ ಇಲಾಖೆಗೆ ವರ್ಗಾವಣೆಗೊಂಡಿರುವ ಬಿಸ್ವಜಿತ್ ಮಿಶ್ರಾ, ವಿಪಿನ್ ಸಿಂಗ್, ಕಾರವಾರದ ಹಿರಿಯ ಸಹಾಯಕ ಸಂರಕ್ಷಣಾಧಿಕಾರಿ ತಾಕತ್‌ಸಿಂಗ್ ರಾಣಾವತ್ ಹಾಗೂ ಉದಯಕುಮಾರ್ ಪ್ರಮುಖರು.

ರಾಜಸ್ತಾನ ಮೂಲದ ಯು.ವಿ.ಸಿಂಗ್ ಕರ್ತವ್ಯವನ್ನೇ ಉಸಿರಾಗಿಸಿಕೊಂಡಿರುವ ನಿಷ್ಠುರ ಅಧಿಕಾರಿ. 1985ರಲ್ಲಿ ಐಎಫ್‌ಎಸ್ ತೇರ್ಗಡೆ ಹೊಂದಿ ಕೆಲಸ ಆರಂಭಿಸಿದ ಸಿಂಗ್‌ರ ಬದುಕಿನ ಹಾದಿಯ ತುಂಬೆಲ್ಲಾ ತರಹೇವಾರಿ ದಂಧೆಗಳ ವಿರುದ್ಧದ ಹೋರಾಟ, ದಂಧೆಕೋರರ ನಾನಾ ಕಿರುಕುಳಗಳನ್ನು ಮೆಟ್ಟಿ ನಿಂತ ಕುರುಹುಗಳು ಢಾಳಾಗಿವೆ. ಇತ್ತೀಚೆಗೆ ಸಹ ಸಿಂಗ್ ಅಕ್ರಮ ಮಟ್ಟ ಹಾಕಲು ಹೋಗಿ ಹಲ್ಲೆಗೀಡಾಗಿದ್ದರು. ಬೆಂಗಳೂರಿನ ರಾಮಮೂರ್ತಿನಗರದ ಕೆರೆ ಕಲುಷಿತಗೊಳ್ಳುತ್ತಿರುವುದರ ಬಗ್ಗೆ ತನಿಖೆಗೆ ತೆರಳಿದ್ದ ಸಿಂಗ್ ಮೇಲೆ ಕಾರ್ಪೋರೇಟರ್ ಎನ್.ಚಂದ್ರ ಪುಂಡರೊಂದಿಗೆ ಸೇರಿ ಹಲ್ಲೆ ನಡೆಸಿದ್ದ. ಇಂಥ ಕಂಟಕಗಳನ್ನೆಲ್ಲ ನೀಗಿಕೊಂಡು ಅತ್ಯಂತ ಸರಳವಾಗಿ, ವೃತ್ತಿಗೆ ನಿಷ್ಠರಾಗಿ ಬದುಕುತ್ತಿರುವವರು ಯು.ವಿ.ಸಿಂಗ್.

ಇನ್ನುಳಿದಂತೆ 1998ರಲ್ಲಿ ಐಎಫ್‌ಎಸ್ ತೇರ್ಗಡೆ ಹೊಂದಿ ಮಾಹಿತಿ ತಂತ್ರಜ್ಞಾನ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬಿಸ್ವಜಿತ್ ಮಿಶ್ರ ಕೂಡಾ ನ್ಯಾಯವಂತಿಕೆಗೆ ಹೆಸರಾದವರು. ಈತ ಮಧ್ಯಪ್ರದೇಶ ಮೂಲದ ಅಧಿಕಾರಿ. 1998ರಲ್ಲಿ ಐಎಫ್‌ಎಸ್ ಮುಗಿಸಿ ಕಾರ್ಯಾರಂಭ ಮಾಡಿದ ಉತ್ತರ ಪ್ರದೇಶದ ವಿಪಿನ್ ಸಿಂಗ್, 2007ರಲ್ಲಿ ಐಎಫ್‌ಎಸ್ ಮುಗಿಸಿದ ಯುವ ಅಧಿಕಾರಿ ತಾಕತ್‌ಸಿಂಗ್ ಕೂಡಾ ದಂಧೆಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಾರೆ. ಇದೀಗ ಕಾರವಾರ ಹಿರಿಯ ಸಂರಕ್ಷಣಾಧಿಕಾರಿಯಾಗಿರುವ ವಿಪಿನ್ ಸಿಂಗ್‌ಗೆ ದಿನನಿತ್ಯ ಒಂದಿಲ್ಲೊಂದು ಅಕ್ರಮಗಳ ಸವಾಲೆದುರಾಗುತ್ತವೆ. ಅವೆಲ್ಲವನ್ನು ಮೆಟ್ಟಿ ನಿಂತು ಜನಪರವಾಗಿ ಮುನ್ನಡೆಯುವುದು ಇವರ ಸ್ಪೆಷಾಲಿಟಿ.



ವಿಶೇಷವೆಂದರೆ, ನಾಡಿನ ನೆಲ ಬಗೆಯುವ ಅಕ್ರಮ ಗಣಿ ಮಾಫಿಯಾದ ವಿರುದ್ಧ ನಿರ್ಣಾಯಕ ಹೋರಾಟ ನಡೆಸಿದವರಲ್ಲಿ ನಾಲ್ಕು ಮಂದಿ ಅಧಿಕಾರಿಗಳು ಅನ್ಯರಾಜ್ಯದವರು. ಒಬ್ಬರು ಮಾತ್ರ ಕನ್ನಡಿಗ. ಆತ ಮೈಸೂರು ಮೂಲದವರಾದ, ಈಗ ಮೈಸೂರು ಮಿನರಲ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿರುವ ಉದಯಕುಮಾರ್.

ಯಾವುದ್ಯಾವುದೋ ದಂಧೆಗಳ ಮರ್ಜಿಗೆ ಬೀಳುವ ಅಧಿಕಾರಿವರ್ಗ ಅತಿಯಾಗಿರುವ ಕಾಲಘಟ್ಟವಿದು. ಇಂಥವರ ನಡುವೆ ಸಮಾಜದ ಸಾಕ್ಷಿಪ್ರಜ್ಞೆಯಂತೆ ನ್ಯಾಯದ ಪರ ಹೋರಾಡಿದ ಈ ಅಧಿಕಾರಿಗಳಿಗೆ ಈ ನಾಡು ಋಣಿಯಾಗಿರಬೇಕು. 'ಇಲ್ಲಿ ಯಾವನೂ ಸಾಚಾ ಅಲ್ಲ' ಎಂಬ ಸಿನಿಕ ಅಸಹನೆ ಜನಮನವನ್ನಾವರಿಸಿದೆ. ಎಲ್ಲರೂ ಹಾಗಿಲ್ಲ ಎಂಬುದಕ್ಕೆ ಈ ಅಧಿಕಾರಿಗಳ ತಂಡ ಸಾಕ್ಷ್ಯಯಂತಿದೆ. ಇವರಿಗೆಲ್ಲ ಪತ್ರಿಕೆ ಶುಭ ಹಾರೈಸುತ್ತದೆ.



ಸದ್ಯ ಹೋದ

ಬಿಜೆಪಿ ಹೈಕಮಾಂಡ್ ನಿಷ್ಠರು V/s ಭ್ರಷ್ಟರು ಹಾಗೂ ಯಡ್ಡಿಯ ಫೆವಿಕಾಲ್ ಗುಣ

ಬಿಜೆಪಿಯ ಹೈಕಮಾಂಡ್ ಕಾಂಗ್ರೆಸ್ ಹೈಕಮಾಂಡ್ ತರ ಶಕ್ತಿಶಾಲಿಯಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಹಾಗೂ ಬಿಜೆಪಿ ಪಾರ್ಟಿಯನ್ನು ರಕ್ಷಿಸಿಕೊಂಡು ಯಡ್ಡಿಯನ್ನು ಮಾತ್ರ ಆಚೆ ಓಡಿಸುವಷ್ಟರಲ್ಲಿ ದೆಹಲಿ ನಾಯಕರಿಗೆ ಸಾಕುಬೇಕಾಗಿ ಹೋಗುತ್ತಿದೆ. ಇದಕ್ಕೆ ಬಿಜೆಪಿ ಕೇಂದ್ರ ನಾಯಕರ ದೌರ್ಬಲ್ಯಗಳು ಕಾರಣವಾಗಿವೆ. ನಿತಿನ್ ಗಡ್ಕರಿ, ವೆಂಕಯ್ಯ ನಾಯ್ಡು, ಸುಷ್ಮಾ ಸ್ವರಾಜ್, ರಾಜನಾಥ್ ಸಿಂಗ್ ಮುಂತಾದವರೆಲ್ಲಾ ಕರ್ನಾಟಕದ ಗಣಿ ಎಂಜಲನ್ನು ತಿಂದವರೆ. ಇವರಿಗೆಲ್ಲಾ ಇಲ್ಲಿ ಒಂದಲ್ಲ ಒಂದು ವ್ಯಾವಹಾರಿಕ ಹಿತಾಸಕ್ತಿಗಳಿವೆ. ಕೋಟ್ಯಂತರ ರೂಪಾಯಿಗಳ ಉದ್ಯಮಗಳಿವೆ. ಹಾಗಾಗಿ ಯಡ್ಡಿ-ರೆಡ್ಡಿಗಳು ಅಧಿಕಾರದಲ್ಲಿದ್ದರೆ ಮಾತ್ರ ಇವರೆಲ್ಲರ ಲಾಭ-ಲೋಭಗಳು ಉಳಿಯುತ್ತವೆಂಬ ಸ್ಥಿತಿ ಇತ್ತು.

ಮತ್ತೊಂದೆಡೆ ಅಡ್ವಾಣಿ, ಜೈಟ್ಲಿ, ಶಾಂತಕುಮಾರ್ ಮುಂತಾದವರಿಗೆ ರಾಜಕೀಯ ಲೆಕ್ಕಾಚಾರಗಳೇ ಜಾಸ್ತಿ ಇದ್ದವು. ಬಿಜೆಪಿಯ ಮರ್ಯಾದೆ ಉಳಿಸಿ ಮುಂದಿನ ಎಲೆಕ್ಷನ್‌ನಲ್ಲಿ ಕೇಂದ್ರದಲ್ಲಿ ಅಧಿಕಾರ ಹಿಡಿಯುವ ಯೋಚನೆ ಅವರಿಗೆ. ಹೀಗೆ ಬಿಜೆಪಿ ಹೈಕಮಾಂಡ್ ನೊಳಗೆ ಪಕ್ಷಕ್ಕಾಗಿ V/s ಸ್ವಂತಕ್ಕಾಗಿ ಎನ್ನುವವರ ಎರಡು ಗುಂಪಾಗಿದ್ದವು. ಈ ಒಡಕನ್ನು ಚೆನ್ನಾಗಿ ಬಳಸಿಕೊಂಡಿದ್ದು ಯಡ್ಡಿಯೆ!

ಮಹಾರಾಷ್ಟ್ರದಲ್ಲಿ ಆದರ್ಶ ಗೃಹ ನಿರ್ಮಾಣ ಹಗರಣ ಸ್ಫೋಟಗೊಂಡಾಗ ಮುಖ್ಯಮಂತ್ರಿ ಅಶೋಕ್ ಚೌಹಾಣ್ ರಾಜೀನಾಮೆ ಕೊಡಿಸಲು ಕಾಂಗ್ರೆಸ್ ಹೈಕಮಾಂಡ್‌ಗೆ ಕಷ್ಟವಾಗಲಿಲ್ಲ. ಅದೇ ರೀತಿ ಆಂಧ್ರದಲ್ಲಿ ಸಂಸದ ಜಗನ್ ತಿರುಗಿ ಬಿದ್ದಾಗ ಅವನನ್ನೇ ಪಾರ್ಟಿಯಿಂದ ಓಡಿಸಲೂ ಕಾಂಗ್ರೆಸ್ ಹಿಂಜರಿಯಲಿಲ್ಲ.

ಆದರೆ ಬಿಜೆಪಿ ಹೈಕಮಾಂಡ್‌ಗೆ ಮಾತ್ರ ಯಡ್ಡಿ 'ಕಳ್ಳ' ಎಂಬುದು ಸಾಬೀತಾದ ಮೇಲೂ 'ನಡೀಯಯ್ಯಾ ಆಚೆ' ಅನ್ನಲು ಬಹಳ ಕಾಲ ಬೇಕಾಯಿತು.

ಪತನ-12 ನೇ ಯತ್ನ

ಸರಿಯಾಗಿ ಲೆಕ್ಕ ಹಾಕಿದರೆ ಈಗಿನದ್ದು 12 ನೇ ಪ್ರಯತ್ನ.

ಮುಖ್ಯಮಂತ್ರಿ ಕುರ್ಚಿಗೆ ಅಂಟಿಕೊಂಡು ಕೂತಿದ್ದ ಯಡ್ಡಿಯ ರುಂಡ ಹಾರಿಸಲು ಇದುವರೆಗೂ ಹನ್ನೊಂದು ವಿಫಲ ಪ್ರಯತ್ನಗಳಾಗಿದ್ದವು. ಆದರೆ ಪ್ರತಿಸಾರಿಯೂ ಏನೇನೋ ತಂತ್ರ ಮಾಡಿ, ಲಾಗಾ ಹಾಕಿ ಯಡ್ಡಿ ಅದೆಲ್ಲದರಿಂದ ಬಚಾವಾಗುತ್ತಾ ಬಂದಿದ್ದರು.

ಆದರೆ ಈಗ ಕೊನೆಯ ಸುತ್ತಿಗೆಯೇಟು ಬಿತ್ತು. ಹಾಗೆ ಹೇಳಬೇಕೆಂದರೆ ಈಗ ಯಡ್ಡಿ ಕಳೆದುಕೊಂಡಿರುವುದು ಬರೀ ರಾಜಕೀಯ ಅಧಿಕಾರವನ್ನು ಮಾತ್ರ. ಈತ ಬಿಜೆಪಿ ಪಾರ್ಟಿ ಮೇಲಿನ ಕಂಟ್ರೋಲ್ ಅನ್ನು ಅಷ್ಟು ಸುಲಭವಾಗಿ ಬಿಡುವಂತೆ ಕಾಣುತ್ತಿಲ್ಲ.

2011ರ ಮೇ ಮೂರನೇ ವಾರದಲ್ಲಿ ಯಡ್ಡಿ ಉಚ್ಚಾಟನೆಗೆ ನಡೆದಿದ್ದ ಪ್ರಯತ್ನವೇ ಲೇಟೆಸ್ಟ್ ಘಟನೆಯಾಗಿತ್ತು. ಅವತ್ತು ರಾಜ್ಯಪಾಲ ಭಾರದ್ವಾಜ್ ಸರ್ಕಾರ ವಜಾಗೊಳಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಿ ಪತ್ರ ಬರೆದಿದ್ದರು. ಆದರೆ ಕೇಂದ್ರ ಸರ್ಕಾರ ಒಪ್ಪದ ಕಾರಣ ಯಡ್ಡಿಯ ತಲೆ ಉಳಿದಿತ್ತು. ಜೊತೆಗೆ ಯಡ್ಡಿ ಕಳ್ಳ ಎಂಬುದು ಗೊತ್ತಿದ್ದರೂ ಕೂಡ ಬಿಜೆಪಿ ಹೈಕಮಾಂಡ್ ಯಡ್ಡಿ ಬೆಂಬಲಕ್ಕೆ ನಿಂತಿತ್ತು. ದಕ್ಷಿಣ ಭಾರತದಲ್ಲಿ ಬಿಜೆಪಿ ಸರ್ಕಾರ ಅಂತ ಇದ್ದದ್ದು ಕರ್ನಾಟಕದಲ್ಲೇ ತಾನೆ? ಬಿಜೆಪಿಗಿದು ದಯನೀಯ ಸ್ಥಿತಿ. 2009 ರಿಂದ 2011 ರ ನಡುವೆ ದಕ್ಷಿಣ ಭಾರತದ ಕೇರಳ, ಆಂಧ್ರ, ತಮಿಳುನಾಡು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳ ಒಟ್ಟು 668 ಸ್ಥಾನಗಳಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವಾಗಿದ್ದು ಕೇವಲ 2 ರಲ್ಲಿ ಮಾತ್ರ. 2009ರ ಲೋಕಸಭಾ ಚುನಾವಣೆಯಲ್ಲಂತೂ 100 ಕ್ಷೇತ್ರಗಳಲ್ಲಿ ಬಿಜೆಪಿಗೆ ಒಂದನ್ನು ಗೆಲ್ಲಲು ಆಗಲಿಲ್ಲ.

ಹಾಗಾಗಿ ಕರ್ನಾಟಕದಲ್ಲಿ ಪಾರ್ಟಿಯ ಪರಿಸ್ಥಿತಿ ಉತ್ತಮವಾಗಿದೆಯೆಂದು ಹೈಕಮಾಂಡ್ ಅನೇಕ ಬಿಕ್ಕಟ್ಟುಗಳ ನಡುವೆಯೂ ಯಡ್ಡಿ ಪರವಾಗಿ ನಿಲ್ಲುತ್ತಿತ್ತು. ಕರ್ನಾಟಕದಲ್ಲೂ ಬಿಜೆಪಿಗೆ ಅಷ್ಟು ಸಲೀಸಾಗಿ ಅಧಿಕಾರ ದಕ್ಕಲಿಲ್ಲ. 1983 ರಲ್ಲಿ 16 ಶಾಸಕರಿದ್ದರೆ 1985 ರಲ್ಲಿ ಜುಜುಬಿ 2 ಶಾಸಕರಿದ್ದರು. 1989 ರಲ್ಲಿ ಈ ಸಂಖ್ಯೆ 4 ಕ್ಕೇರಿತ್ತು. ಆದರೆ 1994 ರ ಚುನಾವಣೆಯಲ್ಲಿ ಬಿಜೆಪಿಯ 40 ಶಾಸಕರು ಗೆದ್ದು ಬಂದರು. ಪುನಃ 1999 ರಲ್ಲಿ ಈ ಸಂಖ್ಯೆ 44 ಕ್ಕೇರಿತು. ಆದರೆ 2004 ರ ಚುನಾವಣೆ ಬಿಜೆಪಿಗೆ 79 ಶಾಸಕರ ಬಲ ತಂದು ಕೊಟ್ಟಿತು. ಇದು ಕಾಂಗ್ರೆಸ್-ಜೆಡಿಎಸ್ ನಡುವಿನ ಮೈತ್ರಿ ಸರ್ಕಾರಕ್ಕೆ ದಾರಿ ಮಾಡಿ ನಂತರ ಬಿಜೆಪಿ-ಜೆಡಿಎಸ್‌ನ ಕೋ-ಜಾ ಸರ್ಕಾರವಾಗಿ ಬದಲಾಯಿತ್ತು. ಕೊನೆಗೆ ಜೆಡಿಎಸ್ ತನಗೆ ಅಧಿಕಾರ ಹಸ್ತಾಂತರಿಸದ ಕಾರಣ ಬೀದಿಗಿಳಿದ ಬಿಜೆಪಿ 2008 ರ ಚುನಾ ವಣೆಯಲ್ಲಿ 110 ಸೀಟ್ ಗೆದ್ದು, ಆಪರೇಷನ್ ಕಮಲ ನಡೆಸಿ ಒಂದು ಅತಂತ್ರದ ನೇತಾಡುವ ಸರ್ಕಾರ ತಂದರು.

ಮುಖ್ಯಮಂತ್ರಿಯಾಗಿ ಬಂದಕ್ಷಣದಿಂದಲೇ ಹಣ ಕದಿಯುವ ಕೆಲಸ ಶುರು ಮಾಡಿದ ಯಡ್ಡಿ ಹೆಜ್ಜೆಹೆಜ್ಜೆಗೂ ಸಿಕ್ಕಿಬೀಳುತ್ತಲೇ ಹೋದರು. ಆದರೂ ಭಂಡತನ ತೋರುತ್ತಾ ಹೈಕಮಾಂಡ್ ಅನ್ನು ಕೇರ್ ಮಾಡದೆ, ಕೆಲವೊಮ್ಮೆ ಬ್ಲಾಕ್‌ಮೇಲ್ ಮಾಡುತ್ತಾ ಬಂದರು. ದೆಹಲಿಯ ಬಿಜೆಪಿ ನಾಯಕರಿಗೆ ಪ್ರಾದೇಶಿಕ ಲೀಡರ್ ಒಬ್ಬ ಹೀಗೆ ಸವಾಲಾಗಿ ಬೆಳೆಯುತ್ತಾರೆಂಬ ಕಲ್ಪನೆಯೇ ಬರಲಿಲ್ಲ. ಬಿಜೆಪಿ ಶಾಸಕರ ಪೈಕಿ ಉತ್ತರ ಕರ್ನಾಟಕದ 60 ಮಂದಿ ಲಿಂಗಾಯಿತ ಶಾಸಕರೇ ಇದ್ದದ್ದು ಯಡ್ಡಿಗೆ ವರದಾನವಾಯಿತು. ಕಳೆದ ನಾಲ್ಕೈದು ವರ್ಷಗಳಲ್ಲಿ ಬಿಜೆಪಿ ಅಂದರೆ ಲಿಂಗಾಯಿತರ ಪಕ್ಷವೆಂಬ ಭಾವನೆ ಮೂಡಿಸುವಲ್ಲಿ ಯಡ್ಡಿ ಯಶಸ್ವಿಯೂ ಆಗಿದ್ದರು. ಜೊತೆಗೆ ವೀರಶೈವ ಮಠಗಳಿಗೆ ಹಣ, ಮಠಾಧೀಶರಿಗೂ ಲಾಭವಾಗುವಂತಹ ಅನೇಕ ನಿರ್ಣಯಗಳನ್ನು ಕೈಗೊಂಡ ಯಡ್ಡಿ ಇನ್ನಷ್ಟು ಬೇರುಬಿಟ್ಟರು. ಹಾಗಾಗಿಯೇ ಗಣಿ ರೆಡ್ಡಿಗಳ ಬೆಂಬಿಡದ ಭಿನ್ನಮತೀಯ ಪಿತೂರಿಗಳು, ಪಕ್ಷದೊಳಗಿನ ಅನಂತ್, ಯತ್ನಾಳ್, ಲಿಂಬಾವಳಿ ಮುಂತಾದವರ ಅಸಮಾಧಾನಗಳನ್ನು ಕುಮಾರಸ್ವಾಮಿಯ ಪ್ರತಿರೋಧಗಳನ್ನೆಲ್ಲಾ ಮೀರಿ ಕುರ್ಚಿ ಉಳಿಸಿಕೊಳ್ಳಲು ಯಡ್ಡಿಗೆ ಸಾಧ್ಯವಾಗಿತ್ತು.

ಆದರೆ ಯಡ್ಡಿಯೇ ಸ್ವತಃ ಅನೇಕ ಸಮಸ್ಯೆಗಳ ಕೇಂದ್ರವಾಗಿದ್ದರು. ದುಡ್ಡು ಕದ್ದು ತಿನ್ನುವುದು ಈತನ ದಿನಚರಿಯೇ ಆಗಿಹೋಗಿತ್ತು. ಆಡಳಿತದ ಅನುಭವ ಇರದಿದ್ದದ್ದು ದೊಡ್ಡ ತೊಡಕಾಯಿತು. ಜೊತೆಗೆ ಮುಂಗೋಪ, ಅಹಂಕಾರ ಸೇರಿದರೆ ಇನ್ನೇನಾಗುತ್ತದೆ. ಈ ಯಡ್ಡಿ ನಿತೀಶ್ ಕುಮಾರ್, ಜಯಲಲಿತಾ, ಎನ್.ಟಿ.ಆರ್, ನವೀನ್ ಪಟ್ನಾಯಕ್ ಥರ ಪ್ರಾದೇಶಿಕ ಪಕ್ಷಗಳ ಲೀಡರ್ ಆಗಿದ್ದವರಲ್ಲ. ರಾಷ್ಟ್ರೀಯ ಪಕ್ಷವೊಂದರ ಪ್ರಾದೇಶಿಕ ನಾಯಕನಾಗಿದ್ದಾತ. ಹಾಗಾಗಿ ಕರ್ನಾಟಕದಲ್ಲಿ ಯಡ್ಡಿ ಒಳ್ಳೆಯ ಕೆಲಸ ಮಾಡಿದಿ ದ್ದರೆ ಅದು ಯಡ್ಡಿಗೆ ಹಾಗೂ ಪಕ್ಷಕ್ಕೂ ಪ್ಲಸ್ ಪಾಯಿಂಟ್ ಆಗುತ್ತಿತ್ತು. ಬದಲಾಗಿ ಹಗಲು ದರೋಡೆ ನಡೆಸಿ ಸಿಕ್ಕಿಬಿದ್ದರೆ ಬಿಜೆಪಿಗೆ ರಾಷ್ಟ್ರ ಮಟ್ಟದಲ್ಲೇ ಅವಮಾನ ವಾಗುತ್ತದಲ್ಲ.



ಆದರೆ ಯಡ್ಡಿ-ರೆಡ್ಡಿಗಳ ರಾಜ್ಯದಲ್ಲಿ ಕೆಲವು ಕೇಂದ್ರ ಬಿಜೆಪಿ ನಾಯಕರು ದುಡ್ಡು ಕಿತ್ತು ತಿಂದಿರುವುದು ನಿಜ. ಅವರ್‍ಯಾರು ಈಗ ಯಡ್ಡಿ ನೆರವಿಗೆ ಬರಲಾಗಲಿಲ್ಲ. ಯಾಕೆಂದರೆ ಯಡ್ಡಿಯ ಕಳ್ಳತನ ಅಷ್ಟು ಘೋರವಾಗಿದೆ. ಬಿಜೆಪಿ ಸರ್ಕಾರ ಕರ್ನಾಟಕದ ಜನರಿಗೆ ಸೇರಬೇಕಿದ್ದ ಅಗಾಧ ಸಂಪತ್ತನ್ನು ಲೂಟಿ ಮಾಡಿದೆ. ಆ ಮೊತ್ತ 16,085 ಕೋಟಿ ರೂಪಾಯಿಗಳೆಂಬುದನ್ನು ಜನ ಮರೆಯುವುದಿಲ್ಲ.

ಸಿಎಂ ಯಾರು?

ಸದ್ಯಕ್ಕೆ ಈಶ್ವರಪ್ಪ, ಜಗದೀಶ್ ಶೆಟ್ಟರ್ ಬಿಟ್ಟರೆ ರಾಜ್ಯ ಬಿಜೆಪಿಗೆ ಬೇರೆ ಆಯ್ಕೆಗಳಿದ್ದಂತಿಲ್ಲ. ಅನಂತ್ ಕುಮಾರ್ ಹೆಸರು ಎಲ್ಲರಿಗೂ ಸಮ್ಮತವಾಗಲಾರದೇನೊ!

ಈ ನಡುವೆ ಸದಾನಂದ ಗೌಡರಿಗೆ ಕ್ಯಾರೆಟ್ ತಿನ್ನಿಸಿದ ಯಡ್ಡಿ ತಾನೆಂಥ ರಾಜಕೀಯ ತಂತ್ರಗಾರನೆಂಬುದನ್ನು ಪುನಃ ಸಾಬೀತುಮಾಡಿದ್ದಾರೆ. ಪರದೇಶಿಯಂತೆ ಎತ್ತಲೋ ತಿರುಗಾಡಿಕೊಂಡಿದ್ದ ಸದಾನಂದ ಗೌಡರಿಗೆ 'ನನ್ನ ಸಕ್ಸಸರ್ ನೀವೆ' ಎಂದು ಉಬ್ಬಿಸಿ ದೆಹಲಿಗೆ ಓಡಿಸಿದ ಯಡ್ಡಿ ಬೆಂಗಳೂರಲ್ಲಿ ತನ್ನ ಸ್ಥಾನ ಭದ್ರಪಡಿಸಿಕೊಳ್ಳುವ ತಂತ್ರಗಾರಿಕೆ ಶುರು ಮಾಡಿದ್ದರು. 'ಶೆಟ್ಟರ್ ಸಿಎಂ ಆಗಲೇಕೂಡದು' ಎಂದು ಒಮ್ಮೆ ಅಸ್ತ್ರ ಬಿಟ್ಟರೆ, 'ನಾನ್ಯಾಕೆ ರಾಜೀನಾಮೆ ಕೊಡಲಿ' ಅನ್ನುತ್ತಿದ್ದರು ಇನ್ನೊಮ್ಮೆ.

ಈ ನಡುವೆ ಚುರುಕಾದವರು ಈಶ್ವರಪ್ಪ ಮಾತ್ರ. ಯಡ್ಡಿಗೆ ಶೆಟ್ಟರ್ ಮತ್ತು ಅನಂತ್ ಬೇಡವೆಂದಾದರೆ ಛಾನ್ಸ್ ಇರುವುದೇ ನನಗೆಂದು ಯೋಚಿಸಿದ ಈಶ್ವರಪ್ಪ ಅಖಾಡಕ್ಕಿಳಿದರು. ಗುರುವಾರ ಬೆಳಗ್ಗೆ ಯಡ್ಡಿ ಮನೆಯಲ್ಲಿ ಕರೆದಿದ್ದ ಸಭೆಗೆ ಯಾರೂ ಹೋಗಕೂಡದೆಂದು ತಡೆಯಲು ಈಶ್ವರಪ್ಪ ಯತ್ನಿಸಿದರು. ಅವರಿಗೆ ಹೈಕಮಾಂಡ್ ಬೆಂಬಲ ಬೇರೆ ಇತ್ತಲ್ಲವೆ? ಹಾಗಿದ್ದರೂ ಯಡ್ಡಿ ಮನೆಯಲ್ಲಿ ಜಮೆಯಾದ ಎರಡೂವರೆ ಡಜನ್ ಶಾಸಕ, ಸಚಿವರ ಪೈಕಿ ಲಿಂಗಾಯತರೇ ಜಾಸ್ತಿ ಇದ್ದರು. ಒಂದು ಹಂತದಲ್ಲಿ ಯಡ್ಡಿ ಬಂಡಾಯವೆದ್ದು ಪ್ರಾದೇಶಿಕ ಪಕ್ಷ ರಚಿಸುತ್ತಾರೆಂಬ ಸುದ್ದಿಯೂ ಹರಡಿತು. ಮೊದಲಿನಿಂದಲೂ ಹಠಮಾರಿಯಂತೆ ವರ್ತಿಸುತ್ತಾ ಬಂದಿರುವ ಯಡ್ಡಿ ಕೈಲಿರುವ ಅಧಿಕಾರವನ್ನು ಅಷ್ಟು ಸುಲಭವಾಗಿ ಬಿಡುವ ಪೈಕಿಯಲ್ಲ ಎಂಬುದು ನಿಜ. ಹಾಗೇನಾದರೂ ರಾಜೀನಾಮೆ ಕೊಡಲೇಬೇಕಾಗಿ ಬಂದರೆ ಯಡ್ಡಿ ಅಷ್ಟು ಸಲೀಸಾಗಿ ನೇಪಥ್ಯಕ್ಕೆ ಸರಿಯಲಾರರೇನೋ. ಹಾಗಾಗಿಯೇ ರಾಜ್ಯ ಬಿಜೆಪಿ ಅಧ್ಯಕ್ಷನನ್ನಾಗಿ ನನ್ನ ನೇಮಿಸಿ ಎಂದು ಬೇಡಿಕೆ ಇಟ್ಟಿದ್ದಾರೆ. ಈಗಿನ ಸರ್ಕಾರದ ಅವಧಿ ಇನ್ನೊಂದೂವರೆ ವರ್ಷದಲ್ಲಿ ಮುಗಿದ ಮೇಲೆ ಹೇಗೂ ಮತ್ತೆ ಎಲೆಕ್ಷನ್ ಬಂದೇ ಬರುತ್ತದೆ. ಆಗ ಪಾರ್ಟಿ ಪ್ರೆಸಿಡೆಂಟ್ ಆಗಿ ತನಗೆ ಬೇಕಾದವರಿಗೆ ಟಿಕೆಟ್ ಕೊಡಿಸಿ, ಬಿಜೆಪಿಗೆ ಹೆಚ್ಚು ಸ್ಥಾನ ಸಿಕ್ಕರೆ ಆಗಲೂ ಪುನಃ ಸಿಎಂ ಆಗುವ ಛಾನ್ಸ್ ಇದೆಯಲ್ಲ ಎಂಬುದೇ ಯಡ್ಡಿ ಲೆಕ್ಕಾಚಾರ!

ಅಷ್ಟರೊಳಗಾಗಿ ಯಡ್ಡಿ ಜೈಲಿಗೆ ಹೋದರೆ ಸರಿ, ಇಲ್ಲದಿದ್ದರೆ ಬಿಜೆಪಿಗಳಿಗೆ ಯಡ್ಡಿ ಶಾಶ್ವತ ತಲೆನೋವಾಗುವುದು ಗ್ಯಾರಂಟಿ.

• ಪಾರ್ವತೀಶ

ಲೋಕಾಯುಕ್ತ ವರದಿಯಲ್ಲಿ ಏನೇನಿದೆ?

ಲೋಕಾಯುಕ್ತರು ನೀಡಿರುವ 500 ಪುಟಗಳ ಸಂಕ್ಷಿಪ್ತ ವರದಿಯಲ್ಲಿ ಹಲವಾರು ಮಹತ್ವದ ಮತ್ತು ಕುತೂಹಲಕಾರಿ ಮಾಹಿತಿಗಳಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಆಯ್ಕೆ ಮಾಡಿ ಇಲ್ಲಿ ನೀಡುತ್ತಿದ್ದೇವೆ.

ರೆಡ್ಡಿಯ ಬೇನಾಮಿ ದಂಧೆ



To another question, Sri K. Kashi Vishwanath has admitted that he has the knowledge of accounts being operated at three places in Hospet and Bellary, but he does not remember any of their account numbers..... His firm does not possess any iron ore stockyard and he further submits that he does not have any idea of transactions of crores of rupees from his accounts in various banks.... He denied that he has transported any iron ore to any port or place... the amount drawn as cash from both the accounts (2669 of M/s SBMM and 16667 of M/s SLVM) referred in Chapter-6, shows that it has reached to "Sri G.J. Reddy Sir". The risk amount withdrawn from the bank accounts and also cash paid finally reaches the same person as amount payable to the overall protection provided for illegal iron ore trade and transportation. This matter requires further in-depth investigation by a Competent authority.

- ಇದರ ಅರ್ಥ ಈ ಕಾಶಿ ವಿಶ್ವನಾಥನ ಹೆಸರಿನಲ್ಲಿ ಸ್ವತಃ ಜನಾರ್ದನ ರೆಡ್ಡಿ ಬೇನಾಮಿಯಾಗಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂಬುದು.

The account No. 0298358000000307 of M/s SBMM in Lakshmivilas Bank, Hospet has been examined in respect of certain credits and debits and onward proceeds to other accounts. In one of the transactions taken place on 31/5/2010 an amount of Rs.12,50,00,000/- was deposited in favour of Associated Mining Company in account No. 31000313003 of State Bank of India, Main Branch, Bellary. This account is a joint account of Managing Partners Sri G. Janardhana Reddy and Mrs. G. Lakshmi Aruna of Associated Mining Company (AMC), Bellary.

- ಇದರ ಅರ್ಥ ಎಎಂಸಿ ಎಂಬ ಕಂಪನಿಯನ್ನು ಜನಾರ್ದನ ರೆಡ್ಡಿ ಮತ್ತು ಅವರ ಪತ್ನಿ ನಡೆಸುತ್ತಿದ್ದು ಈ ಕಂಪನಿಯೂ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದೆ ಎಂದು.

ಆದರೆ ಮಕಾಡೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ಗಾಲಿ ರೆಡ್ಡಿ ಇವತ್ತಿಗೂ ತನಗೂ, ಗಣಿಗಾರಿಕೆಯೂ ಸಂಬಂಧವೇ ಎನ್ನುತ್ತಿದ್ದಾನೆ!

ರೆಡ್ಡಿಯನ್ನು ತೊಲಗಿಸಿ

In view of the misconduct of Sri G.Janardhana Reddy, Minister, noted in this Chapter, I recommend to the Competent Authority for his removal from the Cabinet.

- ಅಂದರೆ ಈ ಭ್ರಷ್ಟ ರೆಡ್ಡಿಯನ್ನು ಸಚಿವ ಸಂಪುಟದಿಂದ ಕಿತ್ತೊಗೆಯಬೇಕಿದೆ ಎಂದು. ಆದರೆ ಅದನ್ನು ಮಾಡುವವರು ಯಾರು?

At this stage, I would like to recall an incidence, which took place on 12/9/2009.... When Dr. U.V. Singh, on a reliable report that there was some illegal iron ore mining was taking place in Bellary District and found that information to be true, he went to the spot, where he was confronted by certain people by saying that the mining is being done by a person connected to Sri Somashekara Reddy, Member of Legislative Assembly, and brother of the Minister in charge of the District. Dr. U.V. Singh was made to talk with Mr. Somashekara Reddy on cell phone.

When Mr. Somashekara Reddy asked him a pointed

...ಕಳ್ಳ ವ್ಯವಹಾರದ ಪಕ್ಕಾ ಫಾರ್ಮಾಲಿಟೀಸ್

...ಸ್ಟ್ಯಾ. ಸಂತೋಷ್ ಹೆಗ್ಡೆಯವರು ಗಣಿ ಲೂಟಿಕೋರರ step by step ಅದಿರುಗಳ್ಳತನವನ್ನು ವರದಿಯ ...166 ಹಾಗೂ 167 ರಲ್ಲಿ ಹೀಗೆ ಬಯಲುಗೊಳಿಸಿದ್ದಾರೆ.

...ಮೊದಲು ಅಕ್ರಮ ಗಣಿಗಾರಿಕೆ ನಡೆಸಲು ಸೂಕ್ತವಾಗುವ ಪ್ರದೇಶದ ತಲಾಶ್ ಮಾಡಿ, ಅದರ ಲೈಸೆನ್ಸ್ ...ಪಡೆಯಲು ಮಾಡಬಾರದ ಲಾಬಿಗಳನ್ನು ಮಾಡುತ್ತಾರೆ.

...ಇತರ ಕಾನೂನುಗಳ ದಾರಿ ತಪ್ಪಿಸಲು ಬೇರೆಬೇರೆ ಹೆಸರಿನಲ್ಲಿ ಹತ್ತಾರು ಮೈನಿಂಗ್ ಕಂಪನಿಗಳನ್ನು ತೆರೆದು, ...ಅದಕ್ಕೆಲ್ಲ ತಮ್ಮ ಆಪ್ತರನ್ನು ಮುಖ್ಯಸ್ಥರನ್ನಾಗಿಸುತ್ತಾರೆ. ಅಧಿಕಾರ ಮಾತ್ರ ತಮ್ಮೊಬ್ಬರ ಕೈಲಿರುವಂತೆ ಅರೇಂಜ್ ...ಮಾಡಿಕೊಳ್ತಾರೆ.

...ಅದಿರು ಅಗೆಯಲು, ಟ್ರಾನ್ಸ್‌ಪೋರ್ಟ್ ಮಾಡಲು, ವೇಸ್ಟ್ ಹ್ಯಾಂಡ್ಲಿಂಗ್ ಹೀಗೆ ತರಹೇವಾರಿ ಕೆಲಸಕ್ಕೆಂದು ...ತಮ್ಮ ತಮ್ಮದೇ ಕಂಪನಿಗಳನ್ನು ಪಾಲುದಾರರನ್ನಾಗಿಸಿಕೊಳ್ಳುತ್ತಾರೆ.

...ಅವೇ ಹುಟ್ಟು ಹಾಕಿದ ಕೆಲ ಟ್ರೇಡಿಂಗ್ ಕಂಪನಿಗಳ ಮೂಲಕ ಅದಿರಿನ ಮಾರಾಟದ ವ್ಯವಹಾರವನ್ನು ...ಮುಗಿಸಿ ಬಿಡುತ್ತಾರೆ. ಮೇಲ್ನೋಟಕ್ಕೆ ಇವೆಲ್ಲ ಬೇರೆ ಬೇರೆ ಕಂಪನಿಗಳಿಂದ ನಡೆದಿವೆ ಎನಿಸಿದರೂ ಅವೆಲ್ಲ ...ಒಂದೇ ಗುಂಪಿನ ಪರ್ಫೆಕ್ಟ್ ವ್ಯೂಹ.

...ಅದಿರಿನ ಅಕ್ರಮ ಸಾಗಣೆಯ ಕೆಲಸಕ್ಕೆಂದು ತಮ್ಮದೇ ಟ್ರಾನ್ಸ್‌ಪೋರ್ಟ್ ಸಂಸ್ಥೆಯ ಅಥವಾ ತಮ್ಮವರ ...ಸಂಸ್ಥೆಯ ವ್ಯವಸ್ಥೆ ಮಾಡಿಕೊಳ್ಳುತ್ತಾರೆ (ಇಲ್ಲಿ ಸ್ವಸ್ತಿಕ್ ನಾಗರಾಜ್, ಮಹೇಶ್ ಕಾರಪುಡಿ ಮುಂತಾದ ಹೆಸರನ್ನು ...ಉಲ್ಲೇಖಿಸಿದ್ದಾರೆ).

...ತಮಗೆ ವಿದೇಶಿ ಕಂಪನಿಗಳಿಂದ ಅದಿರಿನ ಬೇಡಿಕೆ ಇದೆ ಎಂದು ತೋರಿಸಲು ವಿದೇಶಿ ಕಂಪನಿಗಳನ್ನು ...ಅವರೇ ಹುಟ್ಟುಹಾಕಿ ಅಲ್ಲಿಂದ ಆರ್ಡರ್ ಬಂದಂತೆ ರೆಕಾರ್ಡು ರೆಡಿ ಮಾಡಿಕೊಳ್ಳುತ್ತಾರೆ. (ಇಲ್ಲಿ ಎಲೈಟ್, ...ಲಿಯಂಟ್, ಜೆಎಲ್ಎ ಮುಂತಾದ ಕಂಪನಿ ಹೆಸರುಗಳನ್ನು ಉಲ್ಲೇಖಿಸುತ್ತಾರೆ)

...ತಮ್ಮ ಗಣಿಗಾರಿಕೆ ನಡೆಯುವ ಜಿಲ್ಲೆಗಳಲ್ಲಿ ಗಣಿ ಇಲಾಖೆ ಮತ್ತು ಇತರೆ ಪೂರಕ ಇಲಾಖೆಯ ಮುಖ್ಯ ...ಸ್ಥಾನಗಳಲ್ಲಿ ತಮಗೆ ಅನುಕೂಲವಾಗುವಂಥ ಅಧಿಕಾರಿಗಳು ಬಂದು ಕೂರುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ ...ಇಲ್ಲಿ ರಾಜಕೀಯ ಅಧಿಕಾರದ ದುರುಪಯೋಗವಾಗಿರುವುದು ಸ್ಪಷ್ಟವಾಗಿದೆ)

...ಅದಿರಿನ ಕಳ್ಳ ಸಾಗಾಣಿಕೆಯನ್ನು ಕಂಡೂಕಾಣದಂತೆ ಕಣ್ಮುಚ್ಚಿ ಕೂರುವಂತೆ ಮಾಡಲು ಅಧಿಕಾರಿಗಳಿಗೆ ...ಪ ಆಮಿಷವನ್ನೂ ಒಡ್ಡುತ್ತಾರೆ ಅಥವಾ ಬೆದರಿಸಿಯೂ ತಮ್ಮ ಕಾರ್ಯ ಸಾಧಿಸಿಕೊಳ್ತಾರೆ.

...ಳ್ಳ ಯಡ್ಡಿಯ ಕಾವಿ ರಕ್ಷಕರು ಏನಂತಾರೆ?

...ಯಡಿಯೂರಪ್ಪ ಬೆತ್ತಲಾದಾಗಲೆಲ್ಲ ಉಟ್ಟ ಕಾಷಾಯ ವಸ್ತ್ರವನ್ನೇ ಅಡ್ಡ ಹಿಡಿದು ಪೊರೆದ ಒಂದು ಹಿಂಡು ...ಗಳು ರಾಜ್ಯದ ತುಂಬಾ ಹರಡಿಕೊಂಡಿದ್ದಾರೆ. ಈ ಬರಗೆಟ್ಟ ಬೈರಾಗಿಗಳು ಯಡ್ಡಿ ಸಿಕ್ಕಿಬಿದ್ದಾಗಲೆಲ್ಲ ಆತನ ...ವಕಾಲತ್ತು ವಹಿಸಿದರು. ಸಂಖ್ಯಾ ಪ್ರಾಬಲ್ಯ ಹೊಂದಿರುವ ಸಮುದಾಯವನ್ನ ಮುಂದೊಡ್ಡಿ ಬ್ಲ್ಯಾಕ್‌ಮೇಲ್ ...ಪ್ರಾರಂಭಿಸಿದರು. ಇಳಿದುಹೋಗಲಿದ್ದ ಶನಿಯನ್ನು ಕಕ್ಕುಲಾತಿಯಿಂದ ತಬ್ಬಿ ಹಿಡಿದು ಪದೇಪದೆ ಕರ್ನಾಟಕದ ... ಮೇಲೆ ಪ್ರತಿಷ್ಠಾಪಿಸಿದರು. ಇಂಥ ಯಡಿಯೂರಪ್ಪನೀಗ ತಾನು ಪಕ್ಕಾ ಕಳ್ಳನೆಂಬುದನ್ನು ಸಾಬೀತುಪಡಿಸಿ ...ಸೇರಿಕೊಂಡಿದ್ದಾನೆ. ಆತನನ್ನು ಪೊರೆದ ಬೈರಾಗಿಗಳ ಪುಂಗಿ ಬಂದ್ ಆಗಿದೆ.

...ತ್ಯತರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ ಯಡ್ಡಿ ಪದೇಪದೇ ಮಠಗಳಿಗೆ ದೇಣಿಗೆ ನೀಡಿದ್ದು ...ಲೋಚನೆಯಿಂದಲೇ. ಇದರ ಫಲಾನುಭವಿ ಮಠದ ಮಠಾಧೀಶರು ಯಡ್ಡಿಯನ್ನು ಕಂಟಕಗಳಿಂದ ಪಾರು ... ಋಣ ತೀರಿಸಿದ್ದೀಗ ಇತಿಹಾಸ. ಮೂರು ಸಾವಿರ ಮಠದ ಗುರುಸಿದ್ದೇಶ್ವರ ಜಯಯೋಗೀಂದ್ರ ...ಗಳು, ಸುತ್ತೂರು ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಹಾಗೂ ಸಿರಿಗೆರೆ ಶಿವಾಚಾರ್ಯ ಮುಂತಾದ ಸ್ವಾಮೀಜಿಗಳು ಕಾಲಕಾಲಕ್ಕೆ ಯಡ್ಡಿ ಪರ ಮಾತಾಡುತ್ತಾ ಬಂದಿದ್ದಾರೆ. ಮುಖ್ಯಮಂತ್ರಿ ಸ್ಥಾನವನ್ನು ವೀರಶೈವ ಭೂಮಿಕೆಯಿಂದ ದಿಟ್ಟಿಸಿ ತಮ್ಮದೇ ಸಮುದಾಯದ ಕುಡಿ ಯಡ್ಡಿಯನ್ನು ಉಳಿಸಲು ದಣಿವರಿಯದೆ ಶ್ರಮಿಸಿದ್ದಾರೆ.



ಮಠಗಳಿಗೆ ದೇಣಿಗೆ ಹಂಚುವುದರಲ್ಲಿ ಜಾತ್ಯತೀತನಾಗಿ ನಡೆದುಕೊಂಡಿರುವ ಯಡ್ಡಿ ಬ್ರಾಹ್ಮಣ ಮಠಗಳನ್ನೂ ಪೊರೆದಿದ್ದಾನೆ. ರಾಮಚಂದ್ರಾಪುರದ ಸೆಗಣಿ ಸ್ವಾಮಿ ರಾಘವೇಶ್ವರನಂಥವರ 'ಆಶೀರ್ವಾದ' ಯಡ್ಡಿಯತ್ತ ಸದಾಕಾಲ ಪ್ರವಹಿಸುತ್ತಿತ್ತು.

ಇನ್ನು ಪೇಜಾವರ ವಿಶ್ವೇಶತೀರ್ಥರಂತೂ ಯಡ್ಡಿಯ ಹಗರಣ ಬಯಲಾದಾಗಲೆಲ್ಲ 'ಆರೋಪ ಸಾಬೀತಾಗದೆ ಕ್ರಮ ಕೈಗೊಳ್ಳುವುದು ಸರಿಯಲ್ಲ' ಎಂಬರ್ಥದ ಮಾತುಗಳನ್ನಾಡಿದರು. ಯತಿವರ್ಯರು ...ಠವನ್ನು ತಮ್ಮ ಸುಪರ್ದಿಗೆ ಡೀನೋಟಿಫೈ ಮಾಡಿಕೊಟ್ಟ ಯಡ್ಡಿಯ ಫಾಯಿದೆಯನ್ನು ಈ ಮೂಲಕ ...ಂಡದ್ದೀಗ ರಹಸ್ಯವಲ್ಲ.

...ಅದಲ್ಲದೇ ಕೆಲ ಬೀಡಾಡಿ ಕಾವಿಧಾರಿಗಳಂತೂ ಯಡ್ಡಿ ಕುರ್ಚಿ ಅಲ್ಲಾಡಿದಾಗೆಲ್ಲ ಬೀದಿಗಿಳಿದು ಹೋರಾಡಿದರು. ...ಕೆಲವರು 'ನಿಮ್ಮ ಹಿಂದೆ ನಾವಿದ್ದೇವೆ ಮುಂದುವರೆಯಿರಿ' ಅಂತ ಪ್ರೋತ್ಸಾಹಿಸಿದರು.

...ಅದರೀಗ ಕಾವಿ ಪಡೆಯಿಂದ ಈ ಪರಿ ಸಮರ್ಥನೆಗೊಳಗಾಗಿದ್ದ ಯಡಿಯೂರಪ್ಪನ ಮಾನ ರಾಷ್ಟ್ರಮಟ್ಟದಲ್ಲಿ ...ಹೋಗಿದೆ. ಬೆಂಬಲಿಸುತ್ತಾ ಬಂದ ಸ್ವಾಮೀಜಿಗಳ್ಯಾರೂ ಈ ಬಗ್ಗೆ ಮಾತನಾಡುತ್ತಿಲ್ಲ.

...ಹಿನ್ನೆಲೆಯಲ್ಲಿ ಒಂದು ಪ್ರಶ್ನೆ ಇಡೀ ಕರ್ನಾಟಕವನ್ನ ಕಾಡುತ್ತಿದೆ; ಯಡಿಯೂರಪ್ಪ ಕಳ್ಳ ಅಂತಾದರೆ, ...ಗೊತ್ತಿದ್ದೂ ಬೆಂಬಲಿಸಿದವರನ್ನು ಏನೆಂದು ಹೆಸರಿಸಬೇಕು? ಅವರಿಗ್ಯಾವ ಶಿಕ್ಷೆಯೂ ಇಲ್ಲವೇ?

...ion, whether he has taken permission of the Minister in charge of Bellary to ... Bellary, Dr. U.V. Singh replied that as a citizen of India, he does not require ...ody's permission to visit Bellary. The facts narrated herein above clearly shows ...the administration in Bellary has totally collapsed.

... ಡಾ.ಯು.ವಿ.ಸಿಂಗ್ ಅವರಿಗೆ ಗಣಿ ಕಳ್ಳ ಸೋಮಶೇಖರ್ ಬೆದರಿಸಿದ್ದರ ವಿವರ ಇದು.

ರೆಡ್ಡಿಯಿಂದ ಹಣ ವಸೂಲಿ ಮಾಡಿ

...n amount of Rs.4,79,03,917.00 has been paid to "Sri. G.J.Reddy Sir" as Bellary ...mount. Of course this is not a final figure. It is noted that the amount has been ...through the bank accounts of Axis bank, Bellary A/c nos. 2669 and 16667. ...e accounts pertain to Sree Bhakta Markandeshwara Minerals (SBMM) and Sri ...hmi Venkateshwara Minerals respectively. The rest of the money has been paid ...gh cash. The amount so paid as been routed through circuitous routes. Since ...mount is paid for having given protection for illegal mining activities. It should ...covered by the following the provisions of Law and forfeited to State Govern... . Contemplated action should also be initiated against "Sri G.J. Reddy Sir" ...r the various provisions of Law.

... ಅಕ್ರಮ ಗಣಿಗಾರಿಕೆಗೆ 'ರಕ್ಷಣೆ' ನೀಡಲು ಜನಾರ್ದನ ರೆಡ್ಡಿ ಕೋಟ್ಯಂತರ ರೂಪಾಯಿಗಳನ್ನು ...ಿ ಮಾಡಿದ್ದಾರೆ. ಈ ಹಣವನ್ನು 'ಸರ್. ಜಿ.ಜೆ.ರೆಡ್ಡಿ ಸರ್' ಅವರಿಂದ ಸರ್ಕಾರ ಪಡೆಯಬೇಕು.

... is observed from the seized records that hawala money is paid. Though the ...tum of money is quite less, but it indicates the prevailing of hawala transactions ...egal mining. This requires further investigation.

... ಅಕ್ರಮ ಗಣಿಗಾರಿಕೆಯಲ್ಲಿ ಹವಾಲಾ ವ್ಯವಹಾರವೂ ಇದ್ದು ಇದನ್ನು ಇನ್ನಷ್ಟು ತನಿಖೆಗೆ ಒಳಪಡಿಸಬೇಕು.

ಸಂತೋಷ್ ಹೆಗ್ಡೆಯವರೆ, ನಮಸ್ತೆ!

ಇದು ಲೋಕಾಯುಕ್ತ ಸಂಸ್ಥೆಯ ಇತಿಹಾಸದಲ್ಲೇ ಮೊಟ್ಟಮೊದಲ, ಮರೆಯಲಾರದ ದಾಖಲೆ. ಲೋಕಾಯುಕ್ತ ಮಸೂದೆಗೆ ಮೊದಲಿನಿಂದಲೂ ಹಲ್ಲಿಲ್ಲದ ಹಾವೆಂಬ ಅಪವಾದವಿತ್ತು, ಸರಣಿ ರೇಡುಗಳು, ಆಸ್ತಿ ವಿವರ, ಅಲ್ಲೊಂದಿಷ್ಟು ಜನರ ವ್ಯರ್ಥ ವಿಜೃಂಭಣೆ–ಇವುಗಳ ಹೊರತಾಗಿ ಮತ್ತ್ಯಾವ ಪರಿಣಾಮವೂ ಕಾಣಸಿಗುತ್ತಿರಲಿಲ್ಲ. ಆದರೆ ಇಂತಹುದೊಂದು ಹಲ್ಲಿಲ್ಲದ ಹಾವಿನೊಂದಿಗೆ ಅಪಾಯಕಾರಿ ಗಣಿ ಬಿಲ ಹೊಕ್ಕ ಸಂತೋಷ್ ಹೆಗ್ಡೆಯವರು ಸ್ಫೋಟಕ ವರದಿ ಕಲೆ ಹಾಕಿದ್ದಾರೆ. ಇದರ ಬಿರುಸಿಗೆ ಭ್ರಷ್ಟಾತಿಭ್ರಷ್ಟ ಮುಖ್ಯಮಂತ್ರಿಯ ರಾಜಕೀಯ ಬದುಕು ಕುರ್ಚಿಯ ಸಮೇತ ಉರುಳಿಬಿದ್ದಿದೆ!



ಇದೀಗ ಅಖಂಡ ಹದಿನೈದು ರಾಜ್ಯಗಳಲ್ಲಿ ಲೋಕಾಯುಕ್ತ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಆದರೆ ಅಲ್ಲೆಲ್ಲೂ ಲೋಕಾಯುಕ್ತ ಅಧಿಕಾರಿಗಳು ಇಂಥಾ ರಿಸ್ಕ್ ತೆಗೆದುಕೊಂಡ ಉದಾಹರಣೆಗಳಿಲ್ಲ. ಆದರೆ ಸಂತೋಷ್ ಹೆಗ್ಡೆಯವರು ಪಟ್ಟು ಬಿಡದೆ ಕೆಲಸ ಮಾಡಿ ಮುಗಿಸಿದ್ದಾರೆ. ಒಂದಿಡೀ ಸರ್ಕಾರ, ಭಯಂಕರ ಗಣಿ ಮಾಫಿಯಾವನ್ನೆಲ್ಲ ತಣ್ಣಗೆ ಎದುರಿಸಿ ಸತ್ಯವನ್ನು ಜನರ ಮುಂದೆ ತೆರೆದಿಟ್ಟದ್ದಾರೆ.

ಸಂತೋಷ್ ಹೆಗ್ಡೆಯವರದ್ದು ಆರಂಭದಿಂದಲೂ ಸರಳ ನಡವಳಿಕೆ. ಕರ್ನಾಟಕ ಲೋಕಾಯುಕ್ತರಾಗಿ ಅಧಿಕಾರ ವಹಿಸಿಕೊಂಡಂದಿನಿಂದಲೂ ಎಂದೂ ಕೂಡ ತೋರಿಕೆ ಪ್ರದರ್ಶಿಸಿದವರಲ್ಲ, ಅಗಾಧ ಅವಕಾಶಗಳಿದ್ದರೂ ಸ್ವವಿಜೃಂಭಣೆಗೆ ಅವಕಾಶ ಮಾಡಿಕೊಡಲಿಲ್ಲ. ವೆಂಕಟಾಚಲಯ್ಯನವರ ಭಯಂಕರ ರೇಡು, ಕ್ಯಾಮೆರಾ ದೆದುರಿನ ವೀರಾವೇಶ ಗಮನಿಸಿದ್ದ ಅನೇಕರು, ತಣ್ಣಗೆ ರೇಡು ನಡೆಸಿ ಅಷ್ಟೇ ತಣ್ಣಗೆ ಮಾಹಿತಿ ಒಪ್ಪಿಸಿ ಕಣ್ಮರೆಯಾಗುತ್ತಿದ್ದ ಸಂತೋಷ್ ಹೆಗ್ಡೆ ಇದನ್ನು ನಿಭಾಯಿಸೋದು ಕಷ್ಟ ಅಂತಲೇ ಆಡಿಕೊಂಡಿದ್ದರು. ಆದರೀಗ ಅದೇ ಅವರ ಶಕ್ತಿಯೆಂಬುದು ತಾನಾಗಿಯೇ ಸಾಬೀತಾಗಿದೆ.

ಕರ್ನಾಟಕದ ದರಿದ್ರ ಬಿಜೆಪಿ ಸರ್ಕಾರ ಸಂತೋಷ್ ಹೆಗ್ಡೆಯವರಿಗೆ ಕೊಡಬಾರದಷ್ಟು ಮಾನಸಿಕ ವೇದನೆ ಕೊಟ್ಟಿದೆ. ಹೆಗ್ಡೆಯವರು ಪದೇಪದೇ ಪರಮಾಧಿಕಾರ ಕೊಡಿ ಅಂದಾಗ ಬಿಜೆಪಿ ಭಟ್ಟಂಗಿಗಳು 'ಪರಮಾಧಿಕಾರ ಕೊಡಿ ಅನ್ನೋದರ ಬದಲು ಇರೋ ಅಧಿಕಾರದಲ್ಲೇ ಕೆಲಸ ಮಾಡಿ' ಅಂದಿದ್ದವು. ಇದನ್ನೇ ಸವಾಲಾಗಿ ತೆಗೆದುಕೊಂಡ ಸಂತೋಷ್ ಹೆಗ್ಡೆ ಇರುವ ಅಧಿಕಾರದಲ್ಲೇ ಭ್ರಷ್ಟ ಮುಖ್ಯಮಂತ್ರಿಯ ತಲೆ ಎಗರಿಸಿ ಮಾದರಿಯಾಗಿ ಮಾರ್ಪಟ್ಟದ್ದಾರೆ.

ಸಂತೋಷ್ ಹೆಗ್ಡೆಯವರು ಯಾವತ್ತೂ ಕೂಡಾ ಯಾರ ಮರ್ಜಿಗೂ ಬೀಳಲಿಲ್ಲ, ಸದರಿ ಗಣಿ ವರದಿ ಇಡೀ ಸರ್ಕಾರವನ್ನೇ ಅಲ್ಲಾಡಿಸುವುದು ಸ್ಪಷ್ಟವಿದ್ದುದರಿಂದ ಎಂಥಾ ದೊಡ್ಡ ಮಟ್ಟದ ಡೀಲುಗಳಾದರೂ ನಡೆಯಲು ಸಾಧ್ಯವಿತ್ತು, ಆದರೆ ಹೆಗ್ಡೆಯವರ ಪ್ರಖರ ನಿಷ್ಠುರತೆ ಅದ್ಯಾವುದಕ್ಕೂ ಎಡೆಮಾಡಿಕೊಡಲಿಲ್ಲ. ಧನಂಜಯ ಕುಮಾರನೆಂಬ ಹಲಾಲುಕೋರ ಏನೇನೋ ಒದರಿದರೂ ಆತನೇ ಬೆತ್ತಲಾದ.

ಸ್ಪಷ್ಟವಾಗಿ ಹೇಳಬೇಕೆಂದರೆ ಸಂತೋಷ್ ಹೆಗ್ಡೆ ಈ ಪೀಳಿಗೆಯ ಪಾಲಿಗೆ ಆದರ್ಶ ವ್ಯಕ್ತಿ. ಇದು ಅತಿಶಯದ ಮೆಚ್ಚುಗೆಯಲ್ಲ. ಪರಿಸ್ಥಿತಿ ಹೇಗಿದೆಯೆಂದರೆ ಇದೀಗ ಭ್ರಷ್ಟಾಚಾರದ ವಿರುದ್ಧ ಮಾತಾಡುವುದೇ ಬಾಲಿಶತನವೆಂಬಂತಾಗಿದೆ. ಹಾಗೊಂದು ವೇಳೆ ಪಟ್ಟುಬಿಡದೆ ವಾದಿಸಿದರೆ 'ಯಾರು ಸಾಚಾ ಇದ್ದಾರೆ ತೋರ್ಸಿ' ಅಂತಲೂ ಸವಾಲು ತೂರಿ ಬರುತ್ತದೆ. ಸದ್ಯ ಈಗ ಅಳಿದುಳಿದ ಸಾಚಾತನಗಳ ಪ್ರತಿನಿಧಿಯಂತೆ ಸಂತೋಷ್ ಹೆಗ್ಡೆ ಅವತರಿಸಿದ್ದಾರೆ. ನಿಷ್ಠುರತೆ ಇಟ್ಟುಕೊಂಡೂ ಚೆಂದಗೆ ಬದುಕಬಹುದು, ಎಂಥಾದ್ದನ್ನಾದರೂ ಎದುರಿಸಿ ಜಮಿಸಬಹುದೆಂಬುದಕ್ಕೆ ಸ್ಫೂರ್ತಿ ಯಾಗಿದ್ದಾರೆ.

ಸಂತೋಷ್ ಹೆಗ್ಡೆಯವರೆ, ನಮಸ್ತೆ.....

ಅಸಲಿ ಕಳ್ಳ ಜಿಂದಾಲ್

'ಕೋತಿ ತಾನು ಮೊಸರು ತಿಂದು ಮೇಕೆ ಬಾಯಿಗೆ ಒರೆಸಿದಂತೆ' ಎನ್ನುವ ಗಾದೆ ಮಾತು ನಿಮಗೆ ನೆನಪಿರಬಹುದು.

ಗಣಿ ಹಗರಣದಲ್ಲಿ ಯಡ್ಡಿ ತಲೆದಂಡ ನೀಡಿರುವ ಘಟನೆ ಇದಕ್ಕಿಂತ ಭಿನ್ನವಾಗೇನೂ ಇಲ್ಲ.

ಕರ್ನಾಟಕ ಸರ್ಕಾರಕ್ಕೆ ಕಳೆದ 14 ತಿಂಗಳಿಂದ ಗಣಿ ದಂಧೆ ಒಂದರಲ್ಲೇ ಒಟ್ಟು 16,085 ಕೋಟಿ ರೂಪಾಯಿ ಲುಕ್ಸಾನಾಗಿದೆ ಎಂಬ ಲೋಕಾಯುಕ್ತರ ವರದಿಯೇನೋ ನಿಜವನ್ನೇ ಹೇಳುತ್ತಿದೆ. ಆದರೆ ಅಷ್ಟು ಅಗಾಧ ಮೊತ್ತದ ಸಂಪತ್ತು ಅಥವಾ ಹಣವನ್ನು ದೋಚಿದವರ್‍ಯಾರು?

ಲಂಕೇಶ್‌ನಲ್ಲಿ ಇತ್ತೀಚೆಗೆ ಬರೆದಂತೆ ಹಾಗೂ ಈಗಿನ ಲೋಕಾಯುಕ್ತರ ವರದಿಯಲ್ಲಿ 10-20 ಕೋಟಿ ರೂಪಾಯಿಗಳ ಎರಡು ಡೀಲ್‌ಗಳ ಬಗ್ಗೆ ಹೇಳಲಾಗಿದೆ. ಅದರಲ್ಲಿ ಯಡ್ಡಿ ಮಕ್ಕಳ ಪ್ರೇರಣಾಟ್ರಸ್ಟ್‌ಗೆ ಗಣಿ ಕಳ್ಳರು ನೀಡಿದ್ದ 10 ಕೋಟಿ ರೂಪಾಯಿ ಡೊನೇಷನ್ ಒಂದು. ಇನ್ನೊಂದು ಬೆಂಗಳೂರಿನ ರಾಚೇನಹಳ್ಳಿಯಲ್ಲಿದ್ದ ಒಂದೆಕರೆ ಜಮೀನನ್ನು ಅದರ ರೇಟ್ ಒಂದೂವರೆ ಕೋಟಿ ರೂಪಾಯಿ ಮಾತ್ರ ಇದ್ದರೂ 20 ಕೋಟಿ ರೂ. ನೀಡಿದ್ದರು ಯಡ್ಡಿಗೆ.

ಈ ಲಂಚ ನೀಡಿದ್ದು ಸೌತ್‌ವೆಸ್ಟ್ ಮೈನಿಂಗ್ ಕಂಪನಿ!

ಆಶ್ಚರ್ಯ ಏನೆಂದರೆ ಈ ಲಂಚದ ಹಣ ತಗೊಂಡ ಯಡ್ಡಿಗೆ ಕಳ್ಳ ಅನ್ನುತ್ತಿದ್ದಾರೆ ಎಲ್ಲರೂ. ಆದರೆ ಲಂಚ ಕೊಟ್ಟ ಗಣಿ ಕಂಪನಿ ಬಗ್ಗೆ ಯಾರೂ ಮಾತಾಡುತ್ತಿಲ್ಲ ಯಾಕೆ?

ಅವರು ಜಿಂದಾಲ್ ಕಳ್ಳರು

ಸೌತ್ ವೆಸ್ಟ್ ಮೈನಿಂಗ್ ಕಂಪನಿಯ ಅಸಲಿ ಮಾಲೀಕರು ಜಿಂದಾಲ್ ಫ್ಯಾಮಿಲಿಯವರು. ಇವರಿಗೆ ಸ್ಟೀಲ್, ಎನರ್ಜಿ, ಸಿಮೆಂಟ್, ಮೈನಿಂಗ್, ಅಲ್ಯೂಮಿನಿಯಂ ಐಟಿ ಬ್ಯುಸಿನೆಸ್‌ಗಳಿವೆ. ನೀವು ನಂಬುತ್ತೀರೋ ಇಲ್ಲವೋ ಈ ಜಿಂದಾಲ್ ಕಂಪನಿ 1982 ರಲ್ಲಿ ಶುರುವಾಗಿದ್ದು ಒಂದು ಚಿಕ್ಕ Steel Rolling Mill ಮೂಲಕ. ಇದಾಗಿ ಮೂವತ್ತು ವರ್ಷಗಳಾಗಿವೆ. ಈಗ ಈ ಕಂಪನಿ 1 ಲಕ್ಷ ಕೋಟಿ ರೂಪಾಯಿಗೂ ಬ್ಯುಸಿನೆಸ್ ನಡೆಸುತ್ತಿದೆ!

ಹರಿಯಾಣದ ಓಂಪ್ರಕಾಶ್ ಜಿಂದಾಲ್ ಇದರ ಮೂಲಪುರುಷ. 2005 ರಲ್ಲಿ ಅವನು ಸತ್ತಾಗ ಹರಿಯಾಣದ ಶಾಸಕ ಕಂ ಇಂಧನ ಸಚಿವನಾಗಿದ್ದ. ಈಗವನ ಹೆಂಡತಿ ಸಾವಿತ್ರಿ ಕಂದಾಯ ಸಚಿವೆಯಾಗಿದ್ದಾಳೆ. ಇವರಿಗೆ ಪೃಥ್ವಿರಾಜ್ ಜಿಂದಾಲ್, ಸಜ್ಜನ್ ಜಿಂದಾಲ್, ರತನ್ ಜಿಂದಾಲ್ ಹಾಗೂ ನವೀನ್ ಜಿಂದಾಲ್ ಎಂಬ ನಾಲ್ವರು ಗಂಡು ಮಕ್ಕಳು. ಈಗ ಇವರೆಲ್ಲಾ ಸೇರಿಯೇ 1 ಲಕ್ಷ ಕೋಟಿ ಬೆಲೆಯ ಜಿಂದಾಲ್ ಉದ್ಯಮ ನಡೆಸುತ್ತಿದ್ದಾರೆ.

ಯಡ್ಡಿಗೆ ಲಂಚ ಕೊಟ್ಟು ರುಂಡ ಹಾರಲು ಕಾರಣರಾದ ಖದೀಮರು ಇವರೆ!

ಇಂಡಿಯಾದ ಹದಿಮೂರು ಅತ್ಯಂತ ಶ್ರೀಮಂತರ ಪೈಕಿ ಒಬ್ಬರಾಗಿರುವ ಜಿಂದಾಲ್ ಕರ್ನಾಟಕ, ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್, ವೆಸ್ಟ್ ಬೆಂಗಾಲ್ ಮುಂತಾದೆಡೆ ಮೈನಿಂಗ್ ಬ್ಯುಸಿನೆಸ್ ನಡೆಸುತ್ತಿದ್ದಾರೆ. ಅಲ್ಲಿನ ಸರ್ಕಾರಗಳನ್ನೇ ಖರೀದಿಸಿ ರಾಜಕಾರಣಿಗಳಿಗೆ ಕಿಕ್‌ಬ್ಯಾಕ್ ಕೊಟ್ಟು ಅಧಿಕಾರಿಗಳಿಗೆ ಲಂಚ ತಿನ್ನಿಸಿ ಕೋರ್ಟ್‌ಗಳಿಗೆ ಹಾದಿ ತಪ್ಪಿಸಿ ತಮ್ಮ ಸಂಪತ್ತು ಬೆಳೆಸಿಕೊಳ್ಳುತ್ತಿದ್ದಾರೆ.

ಬಳ್ಳಾರಿಯ ವಿಜಯನಗರದಲ್ಲೂ ಇವರಿಗೆ ಒಂದು ಬೃಹತ್ ಉಕ್ಕಿನ ಕಾರ್ಖಾನೆಯಿದೆ. ಕಬ್ಬಿಣದ ಅದಿರಿನ ಅಕ್ರಮ-ಸಕ್ರಮ-ಗಣಿಗಾರಿಕೆಯೂ, ಇದೆ.


ತಮ್ಮ ವ್ಯವಹಾರದ ಲಾಭಕ್ಕಾಗಿ ಯಡ್ಡಿಗೆ 20 ಕೋಟಿ ಲಂಚ ತಿನ್ನಿಸಿದ ಜಿಂದಾಲ್‌ಗೆ ಯಾವ ಶಿಕ್ಷೆಯೂ ಆಗುವುದಿಲ್ಲ ಎನ್ನುವುದು ನಮ್ಮ ದುರಂತ.

ಅಂದಹಾಗೆ ಮಹಾರಾಷ್ಟ್ರದ ಗಡಿಯಲ್ಲಿ ಬೆಳಗಾವಿಯ ಬಳಿ ಯಡ್ಡಿ ರತ್ನಗಿರಿ ಸಿಮೆಂಟ್ ಕಾರ್ಖಾನೆ ಖರೀದಿಸಿರುವ ಬಗ್ಗೆ ಕುಮಾರಸ್ವಾಮಿ ಆರೋಪ ಮಾಡಿದ್ದರಲ್ಲವೆ?

ಅದೇ ರತ್ನಗಿರಿಯ ಜೈಗಡ್ ಎಂಬಲ್ಲಿ ಇದೇ ಜಿಂದಾಲ್‌ನ ಉಷ್ಣ ವಿದ್ಯುತ್ ಸ್ಥಾವರವೊಂದಿದೆ.

ಯಡ್ಡಿ-ಜಿಂದಾಲ್ ನಡುವಿನ ದಂಧೆಗಳು ಇನ್ನೂ ಬೇಕಾದಷ್ಟಿರುವ ಸಾಧ್ಯತೆಗಳನ್ನು ಇದು ತೋರುತ್ತಿಲ್ಲವೆ!

ಮಂಡ್ಯ: ಬಿಜೆಪಿ ನಿರ್ನಾಮಕ್ಕೆ ಎಚ್.ಪಿ.ಮಹೇಶ್‌ನೇ ಸಾರಥಿ



ಮುಖ್ಯಮಂತ್ರಿ ಯಡ್ಡಿಯ ತವರು ಜಿಲ್ಲೆಗೆ ರಾಜ್ಯ ಗೃಹಮಂತ್ರಿ ಒಕ್ಕಲಿಗ ಅಶೋಕ್ ಉಸ್ತುವಾರಿ ವಹಿಸಿದ್ದರೂ, ರಾಜ್ಯದ ಅತಿರಥ ಮಹಾರಥರ ದಂಡು ಆಗಾಗ ಬರುತ್ತಿದ್ದರೂ ಜಿಲ್ಲೆಯಲ್ಲಿ ಕಮಲ ಪಕ್ಷ ಅರಳುವ ಲಕ್ಷಣಗಳು ಮಾತ್ರ ಕಾಣುತ್ತಿಲ್ಲ, ಅರಳುವುದಿರಲಿ ಉಳಿಯುವ ಲಕ್ಷಣಗಳೂ ಕಾಣುತ್ತಿಲ್ಲ. ಬಿಜೆಪಿಯ ಜಿಲ್ಲಾ ನಾಯಕರು ಸದಾ ಒಳಜಗಳದಲ್ಲಿ ತೊಡಗಿದ್ದಾರೆ. ಮಾತ್ರವಲ್ಲದೆ ಪರಸ್ಪರ ಸುಳ್ಳು ದೂರುಗಳನ್ನು, ಕೇಸುಗಳನ್ನು ಹಾಕುವ ಮಟ್ಟಕ್ಕೂ ತಲುಪಿದ್ದಾರೆ. ಬಿಜೆಪಿಯ ಜಿಲ್ಲಾ ಅಧ್ಯಕ್ಷ ಸ್ಥಾನದಲ್ಲಿ ಹೆಚ್.ಪಿ. ಮಹೇಶ್ ಎಂಬ ಸಾರಾಯಿ ದಂಧೆ ಕುಟುಂಬದ ಎಲಿಮೆಂಟನ್ನು ಕೂರಿಸಿದ ನಂತರವಂತೂ ನಿಷ್ಠಾವಂತ ಕಾರ್ಯಕರ್ತರ ಅಸಹನೆ ಮಿತಿಮೀರಿದೆ.

ಒಕ್ಕಲಿಗರ ಪ್ರಾಬಲ್ಯವಿರುವ ಮಂಡ್ಯ ಜಿಲ್ಲೆ ಹಿಂದೆ ಕಾಂಗ್ರೆಸ್ ಹಾಗೂ ಈಗ ಜೆಡಿಎಸ್‌ನ ಭದ್ರಕೋಟೆ ಎಂಬಂತಿದೆ. ಇಲ್ಲಿ ಬಿಜೆಪಿ ಪಕ್ಷ ಜನ್ಮತಾಳಿ ಅರ್ಧ ಶತಮಾನವಾಗಿದ್ದರೂ ಮಂಡ್ಯದಲ್ಲಿ ಕಮಲ ಅರಳಲೇ ಇಲ್ಲ. ಆದರೂ ಹೇಗಾದರು ಮಾಡಿ ಅಧಿಕಾರ ಪಡೆಯಲು ಮಂಡ್ಯ ನಗರಸಭೆಯಲ್ಲಿ ಬಿಜೆಪಿ ಆಪರೇಷನ್ ಕಮಲ ಮಾಡಿದ್ದರೂ ಬರಖತ್ತಾಗುತ್ತಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಪಕ್ಷದಲ್ಲೀಗ 'ಮೂಲ ಮತ್ತು ವಲಸೆ' ಎಂಬ ಗುದ್ದಾಟಗಳು ಎಗ್ಗಿಲ್ಲದೆ ಸಾಗಿವೆ. ಹಿಂದೆ ಬಿಜೆಪಿಯ ಜಿಲ್ಲಾಧ್ಯಕ್ಷನಾಗಿದ್ದ ಇಂಡವಾಳು ಎಚ್.ಹೊನ್ನಪ್ಪ ಜೆಡಿಎಸ್‌ನಿಂದ ಬಂದವ. ಈತ ಚುನಾವಣಾ ಸಮಯದಲ್ಲಿ ವಿರೋಧಪಕ್ಷಗಳೊಂದಿಗೆ ಡೀಲ್ ಮಾಡಿಕೊಂಡು ಕೊಬ್ಬುವ ಭ್ರಷ್ಟ. ಈತನ ಇಂತಹ ಸಾಧನೆಗಾಗಿ ಈತನನ್ನು ಕಿತ್ತುಹಾಕಲಾಯಿತು.

ಕಳೆದ ಎಮ್ಮೆಲ್ಸಿ ಚುನಾವಣೆಯಲ್ಲಿ ಬಿಜೆಪಿಗೆ ಬಂದ ಜೆಡಿಎಸ್‌ನ ಮಾಜಿ ಶಾಸಕ ಜಿ.ಬಿ.ಶಿವಕುಮಾರ್‌ನನ್ನು ಜಿಲ್ಲಾಧ್ಯಕ್ಷನ್ನಾಗಿ ಮಾಡಲಾಯಿತು. ಈತ ವ್ಯಕ್ತಿಗತವಾಗಿ ಪಕ್ಷದ್ರೋಹಿ ಮತ್ತು ದುಷ್ಟನಲ್ಲದಿದ್ದರೂ ತಿಥಿ, ಮದುವೆಗಳಿಗೆ ಹೋಗಿಬರುವುದಷ್ಟೆ ಈತನ ಕಾಯಕವಾಗಿತ್ತು. ಈತ ಹೆಸರಿಗಷ್ಟೆ ಜಿಲ್ಲಾಧ್ಯಕ್ಷನಾಗಿದ್ದ. ಇಡೀ ಜಿಲ್ಲಾ ಬಿಜೆಪಿಯನ್ನು ನಿಯಂತ್ರಿಸುತ್ತಿದ್ದುದ್ದು ಲಿಂಗವಂತ ನಾಗರಾಜಪ್ಪ ಈತ "ಯಡ್ಡಿನ್ನ ಸಂಬಂಧಿ" ಎನ್ನುತ್ತಲೇ ಇಡೀ ಪಕ್ಷವನ್ನ ತನ್ನ ಅಭಿಮಾನಿ ಬಳಗದಂತೆ ಬಳಸಿಕೊಂಡು ದುಂಡಗಾದ. ಇದು ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರಿಗೆ ಹಿಡಿಸಲಿಲ್ಲ, ಇದನ್ನ ಜಿ.ಬಿ.ಶಿವಕುಮಾರ್ ಸಹ ವಿರೋಧಿಸಿದ್ದರಿಂದ ಶಿವಕುಮಾರನನ್ನೇ ಜಿಲ್ಲಾಧ್ಯಕ್ಷ ಸ್ಥಾನದಿಂದ ಕಿತ್ತುಹಾಕಲಾಯಿತು.

ಆನಂತರ ಈ ಸ್ಥಾನಕ್ಕೆ ಎಚ್.ಪಿ.ಮಹೇಶ್ ಎಂಬಾತನನ್ನು ತಂದುಕೂರಿಸಲಾಯಿತು. ಇದರ ಹಿಂದೆ ಇದ್ದವ ಲಿಂಗವಂತ ನಾಗರಾಜಪ್ಪ, ಇದಕ್ಕೆ ಸಾಥ್ ನೀಡಿದ್ದು ಗೃಹಸಚಿವ ಆರ್.ಅಶೋಕ್‌ರ ಜಿಲ್ಲಾ ಉಸ್ತುವಾರಿಯನ್ನು ನಿಭಾಯಿಸುತ್ತಿರುವ ವಿಧಾನಪರಿಷತ್ ಸದಸ್ಯ ಅಶ್ವತನಾರಾಯಣಗೌಡ. ಎಚ್.ಪಿ.ಮಹೇಶ್ ಸಾರಾಯಿ ದಂಧೆಯ ಕುಖ್ಯಾತ ದಿವಂಗತ ನಾಗೇಂದ್ರನ ಸಹೋದರ. ಈತ ಸಂಘಟನಾ ಚತುರತೆಯಾಗಲಿ, ಜನರು ಗುರ್ತಿಸುವ ಚಾರ್ಮಾಗಲಿ ಇಲ್ಲದವ. ಅದು ಹೇಗೆ ಈತನನ್ನು ಬಿಜೆಪಿ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ತಂದರೋ ರಾಮಭಕ್ತರೇ ಹೇಳಬೇಕು.

ಮಹೇಶ್‌ನನ್ನು ಜಿಲ್ಲಾಧ್ಯಕ್ಷನನ್ನಾಗಿ ಮಾಡಿದ್ದರ ವಿರುದ್ಧ ಬಿಜೆಪಿಯಲ್ಲಿ ಹೊಗೆಯಾಡುತ್ತಿರುವ ಅಸಮಾಧಾನ ಪಾಂಡವಪುರದಲ್ಲಿ ಭುಗಿಲೆದ್ದಿದೆ. ಮಂಜುನಾಥ್ ಮತ್ತು ಲಿಂಗವಂತ ನಾಗರಾಜಪ್ಪಗಳು ಕಿತ್ತಾಡಿಕೊಂಡು ಪರ ವಿರೋಧದ ಪ್ರತಿಭಟನೆಗಳನ್ನು ಮಾಡಿಸುತ್ತಲೇ, ಪಾಂಡವಪುರದ ಪೊಲೀಸ್ ಠಾಣೆಯಲ್ಲಿ ಪರಸ್ಪರ ಕೊಲೆ ಬೆದರಿಕೆ ಕೇಸನ್ನು ದಾಖಲಿಸಿಕೊಂಡಿದ್ದಾರೆ. ಮಂಜುನಾಥ್ ವಿರುದ್ಧ ಸುಳ್ಳು ಕೇಸನ್ನು ದಾಖಲಿಸಲು ನಾಗರಾಜಪ್ಪನ ಪರ ಠಾಣೆಗೆ ಸಚಿವ ರೇಣುಕಾಚಾರ್ಯನೇ ಕಾಲ್ ಮಾಡಿದ್ದಾನೆನ್ನುವುದು ಪಾಂಡವಪುರ ಬಿಜೆಪಿ ಕಾರ್ಯಕರ್ತರ ಅಳಲು.


ಜಿಲ್ಲಾ ಬಿಜೆಪಿಯೊಳಗೆ ಲಿಂಗವಂತ ನಾಗರಾಜಪ್ಪ ಮತ್ತು ಮಹೇಶ್ ಜೊತೆಗೂಡಿ ತಮ್ಮದೇ ಪಟಲಾಂಅನ್ನು ಕಟ್ಟಿಕೊಳ್ಳತೊಡಗಿದ್ದಾರೆ. ಆ ನಿಟ್ಟನಲ್ಲಿ ಜಿಲ್ಲಾ ಘಟಕಗಳ ಮತ್ತು ತಾಲ್ಲೂಕು ಘಟಕಗಳ ರೈತ, ಮಹಿಳಾ, ಎಸ್ಸಿಎಸ್ಟಿ ಸ್ಲಂ, ಯುವ ಮೋರ್ಚಾಗಳಿಗೆ ಹಿಂದೆ ಇದ್ದ ಪದಾಧಿಕಾರಿಗಳನ್ನು ಕಿತ್ತೆಸೆದು ತಮ್ಮ ಚೇಲಾಗಳಿಗೆ ಪಟ್ಟ ಕಟ್ಟಿದ್ದಾರೆ. ಅದರಲ್ಲೂ ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಪ್ರೇಮ ಯುವರಾಜ್ ಎಂಬಾಕೆಯನ್ನು ಕಿತ್ತೆಸೆದು ಬಿಜೆಪಿಯ ಸದಸ್ಯೆಯೂ ಅಲ್ಲದ ಸುಜಾತ ಕೃಷ್ಣ ಎಂಬಾಕೆಯನ್ನು ನೇಮಿಸಿದ್ದಾರೆ. ರೈತ ಮೋರ್ಚಾದ ನಾಯಕತ್ವ ವಹಿಸಿಕೊಂಡು ಅಷ್ಟಿಷ್ಟಾದರೂ ಕೆಲಸ ಮಾಡುತ್ತಿದ್ದ ಕೊತ್ತನಹಳ್ಳಿ ಮಲ್ಲಿಕಾರ್ಜುನ ಎಂಬಾತನನ್ನು ಕಿತ್ತೆಸೆದು ಮಹೇಶ್‌ನ ಸೇವಕ ನಂದಕುಮಾರ್‌ನನ್ನು ನೇಮಿಸಲಾಗಿದೆ. ಎಸ್ಸಿ ಎಸ್ಟಿ ವಿಭಾಗಕ್ಕೆ ಪುಟ್ಟಂಕಯ್ಯ ಎಂಬ 'ಮಾಜಿ' ದಲಿತನನ್ನು ಕೂರಿಸಲಾಗಿದೆ. ಆದರೆ ಪುಟ್ಟಂಕಯ್ಯನ ವಿರುದ್ಧ ದಲಿತರಲ್ಲೆ 'ಅವಕಾಶವಾದಿ', 'ಸರ್ಕಾರಿ ನೌಕರರ ಏಜೆಂಟು' ಮೊದಲಾದ ಕಂಪ್ಲೆಂಟುಗಳಿವೆ. ಈ ಮಧ್ಯೆ ಬಿಜೆಪಿಯ ಅನೇಕ ವಿಕೃತ ಮನಸ್ಸಿನವರು 'ದನದ ಬಾಡು ತಿನ್ನುವವನನ್ನು ಹೇಗೆ ಬಿಜೆಪಿಗೆ ಸೇರಿಸಿಕೊಂಡಿದ್ದೀರಿ' ಎಂದು ಮಹೇಶ್‌ನನ್ನು ಪ್ರಶ್ನಿಸತೊಡಗಿದ್ದಾರೆ.

ನಾಗಮಂಗಲದಲ್ಲಿ ನಂಗಾನಾಚ್ ಕುಖ್ಯಾತಿಯ ಶಿವರಾಮೇಗೌಡ ಬಿಜೆಪಿಯನ್ನು ತನ್ನ ಅಭಿವೃದ್ಧಿಗಾಗಿ ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾನೆ. ಅದರಲ್ಲೂ ಸರ್ಕಾರಿ ನೌಕರರ ವರ್ಗಾವಣೆ ಈತನ ಪ್ರಮುಖ ದಂಧೆ. ಪಕ್ಕಾ ಅವಕಾಶವಾದಿಯಾದ ಈತ ಯಾವ ಕ್ಷಣ ಬೇಕಾದರೂ ಬಿಜೆಪಿಯನ್ನು ತೊರೆಯುವ ಅನುಮಾನಗಳು ಬಿಜೆಪಿ ಕಾರ್ಯಕರ್ತರೊಳಗೇ ಇದೆ.

ಮಳವಳ್ಳಿಯಲ್ಲಿ ಇದ್ದ ಪರಾಜಿತ ಅಭ್ಯರ್ಥಿ ಕಲ್ಲುಣಿ ಮಹದೇವಯ್ಯ ತೀರಿದ ನಂತರ ಅಲ್ಲಿ ಬಿಜೆಪಿಗೆ ಗತಿಯೇ ಇಲ್ಲವಾಗಿತ್ತು, ಅಂತಹ ಸ್ಥಿತಿಯಲ್ಲೂ ಮಹೇಶ್ ಕಪನೀಗೌಡ ಎಂಬ ಭ್ರಷ್ಟನಿಗೆ ತಾಲ್ಲೂಕು ಅಧ್ಯಕ್ಷ ಸ್ಥಾನವನ್ನ ಮಾರಿಕೊಂಡಿದ್ದಾನೆ.

ಪಾಂಡವಪುರದಲ್ಲಿ ನಾಗರಾಜಪ್ಪ ಮತ್ತು ಮಹೇಶ್ ನೇಮಿಸಿರುವ ಪದಾಧಿಕಾರಿಗಳ ಪಟ್ಟಿಯನ್ನು ವಿರೋಧಿಸಿದ ಎಚ್.ಎನ್.ಮಂಜುನಾಥ್ ಎಂಬಾತನ ಮೇಲೆ ಸುಳ್ಳು ಕೇಸುಗಳು ಬಿದ್ದಿರುವುದರಿಂದ ಪರಿಸ್ಥಿತಿ ಗಂಭೀರವಾಗಿದೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿಯೂ ಪುರಾತನ ಚೆಡ್ಡಿ ಕೆ.ಬಲರಾಂನನ್ನು ಹೊರಗಿಟ್ಟ ಮಹೇಶ್ ಕಾಂಗ್ರೆಸ್‌ನಿಂದ ಬಂದಿರುವ ಪಾಲಹಳ್ಳಿ ಚಂದ್ರಶೇಖರ್ ಥರದವರನ್ನು ಪದಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದಾನೆ. ಇದನ್ನು ಕಂಡು ಅತೃಪ್ತ ಹೊನ್ನಪ್ಪ ಜಿ.ಬಿ.ಶಿವಕುಮಾರ್, ಬಿ.ಟಿ.ಶ್ರೀನಿವಾಸ್ ಗೌಡ ಸೇರಿದಂತೆ ವಿವಿಧ ಚೆಡ್ಡಿಗಳು ಗಣಂಗೂರು ಐಬಿಯಲ್ಲಿ ಸಭೆ ಸೇರಿ ರಾಜ್ಯಾಧ್ಯಕ್ಷ ಈಶ್ವರಪ್ಪನ ಬಳಿ ತಮ್ಮ ದುಃಖವನ್ನು ತೋಡಿಕೊಳ್ಳುವ ನಿರ್ಣಯ ಕೈಗೊಂಡಿದ್ದಾರಂತೆ.


ಹೊನ್ನಪ್ಪ


ಮಧುಮಾದೇಗೌಡ


ವಿದ್ಯಾನಾಗೇಂದ್ರ

ಯಡ್ಡಿಯ ತವರೂರಿನ ಕೆ.ಆರ್.ಪೇಟೆಯಲ್ಲಿ ಎಸ್ಸೈ ವರ್ಗಾವಣೆಯಲ್ಲಿ ಹಂಚಿಕೆಯಾದ ಹಣಕ್ಕಾಗಿ ಬಿಜೆಪಿ ಜಿಲ್ಲಾಧ್ಯಕ್ಷ ಮಹೇಶ್ ಮತ್ತು ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್ ನಡುವೆ ಕಿತ್ತಾಟ ನಡೆದಿದೆ. ಆದರೆ ಮುಖ್ಯಮಂತ್ರಿಗಳ ಸ್ಪೆಷಲ್ ಆಫೀಸರ್ ಅರವಿಂದ್ ಮತ್ತು ಹಾಲಿ ಶಾಸಕ ಕೆ.ಬಿ.ಚಂದ್ರಶೇಖರ್ ಸೇರಿಕೊಂಡು ಮೂಲ ಚೆಡ್ಡಿಗಳನ್ನು ಕಡೆಗಣಿಸಿದ್ದಾರೆಂಬ ಅಸಮಾಧಾನ ಭುಗಿಲೆದ್ದಿದೆ.

ಜಿಲ್ಲಾಧ್ಯಕ್ಷ ಸ್ಥಾನವನ್ನು ಮಹೇಶ್ ಕುಟುಂಬಕ್ಕೆ ಏಕೆ ಕೊಡಬೇಕು? ಆತ ಪಕ್ಷಕ್ಕಾಗಿ ಮಾಡಿರುವ ಕೆಲಸವಾದರೂ ಏನು ಎಂಬಿತ್ಯಾದಿ ಪ್ರಶ್ನೆಗಳನ್ನು ಬಿಜೆಪಿ ಕಾರ್ಯಕರ್ತರು ಬಹಿರಂಗವಾಗಿಯೇ ಕೇಳತೊಡಗಿದ್ದಾರೆ. ಇದಕ್ಕೆ ಕಾರಣಗಳೂ ಇವೆ. "ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಸಿಗದೇ ಬಿಜೆಪಿಗೆ ಬಂದ ವಿದ್ಯಾ ನಾಗೇಂದ್ರ ಚುನಾವಣೆಯಲ್ಲಿ ಸೋತರೂ ಆಕೆಗೆ ಮೂಡಾ ಅಧ್ಯಕ್ಷಗಿರಿ ಕರುಣಿಸಲಾಯ್ತು, ಜೊತೆಗೆ ಕಳೆದ ಜಿ.ಪಂ.ಚುನಾವಣೆಯಲ್ಲಿ ಬೂದನೂರು ಕ್ಷೇತ್ರಕ್ಕೆ ವಿದ್ಯಾಗೆ ಟಿಕೆಟ್ ಕೊಟ್ಟರೂ ಆಕೆ ಮತ್ತೆ ಸೋತರು. ಜೊತೆಗೆ ಮೂಡಾದಲ್ಲಿ ಈಕೆ ಭಾರೀ ಹಗರಣ ಮಾಡಿದ್ದರೂ ಆಕೆಯನ್ನು ಸುಮ್ಮನೆ ಬಿಡಲಾಗಿದೆ. ಅಂಥದ್ದರಲ್ಲಿ ಇದೇ ಕುಟುಂಬಕ್ಕೆ ಜಿಲ್ಲಾಧ್ಯಕ್ಷ ಎಂಬ ಮುಖ್ಯಸ್ಥಾನ ಕೊಟ್ಟಿರುವುದು ಅನ್ಯಾಯ" ಎಂದು ಬಿಜೆಪಿ ಚೆಡ್ಡಿಗಳು ಬೀದಿಬೀದಿಯಲ್ಲಿ ಅರಚತೊಡಗಿದ್ದಾರೆ.

ಎಚ್.ಪಿ.ಮಹೇಶ್ ಹೇಳಿದಂತೆ ಪಕ್ಷದ ವರಿಷ್ಠರಾದ ಅಶ್ವತನಾರಾಯಣಗೌಡ, ಮೈಸೂರಿನ ಮಾರುತಿರಾವ್ ಪವಾರ್, ಎಲ್ಲಾರೆಸ್, ಡಿ.ಸಿ.ತಮ್ಮಣ್ಣ ಮತ್ತು ಮೈಮುಗ್... ಅಧ್ಯಕ್ಷ ನಾಗರಾಜಪ್ಪ ಕುಣಿಯುತ್ತಿರುವುದು ಕಟ್ಟರ್ ಚೆಡ್ಡಿಗಳು ಮೈ ಪರಚಿಕೊಳ್ಳುವಂತಾಗಿದೆ. ಸದ್ಯದಲ್ಲೇ ಜಿಲ್ಲಾಧ್ಯಕ್ಷ ಮಹೇಶ್ ಮತ್ತು ನಾಗರಾಜಪ್ಪ ವಿರುದ್ಧ ಚೆಡ್ಡಿಗಳು ಕಾರ್ಯಾಚರಣೆಗೆ ಇಳಿದರೆ ಅಚ್ಚರಿ ಇಲ್ಲ, ಹಾಗಾದರೆ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ನಿರ್ನಾಮವಾಗುವ ದಿನಗಳು ದೂರವಿಲ್ಲ.

• ಲಕ್ಷ್ಮಣ್ ಚೀರನಹಳ್ಳಿ

ಟ್ರಾನ್ಸ್‌ಫರ್ ದಂಧೆಯಲ್ಲಿ ಬಿಜೆಪಿ ನಾಯಕರು

ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ನಾಯಕರು ಸರ್ಕಾರಿ ಅಧಿಕಾರಿಗಳ ವರ್ಗಾವಣೆಯಲ್ಲಿ ಲಕ್ಷಗಟ್ಟಲೆ ಹಣಮಾಡಿಕೊಳ್ಳುತ್ತಿದ್ದಾರೆ. ಈ ದಂಧೆಯಲ್ಲಿ ಎಚ್.ಪಿ.ಮಹೇಶ್ ಹೆಸರು ಪ್ರಮುಖವಾಗಿ ಕೇಳಿಬರುತ್ತಿವೆ. ಇದರಿಂದಾಗಿ ಜಿಲ್ಲೆಯಿಂದ ಎಡಿಸಿ ಪುಟ್ಟಮಾದಯ್ಯ ಸೇರಿದಂತೆ ಹಲವು ಪ್ರಾಮಾಣಿಕ ಅಧಿಕಾರಿಗಳು ವರ್ಗಾವಣೆಗೊಂಡಿದ್ದಾರೆ.

ಕಾವೇರಿ ನೀರಾವರಿ ನಿಗಮದ ಅಧ್ಯಕ್ಷ ರಾಮಲಿಂಗಯ್ಯ ಎಂಬ ಮತ್ತೊಬ್ಬ ಬಿಜೆಪಿ ನಾಯಕನಿಗೆ ಈಗ ಲಕ್ಷಹೊಡೆದು ಮನೆ ಸೇರಿದ್ದರೂ ಭ್ರಷ್ಟ ಎಇಇ ಬಸ್ರುದ್ದೀನ್‌ನನ್ನು ಇರುವಲ್ಲಿಯೇ ಉಳಿಸಲು 50,000 ಪಡೆದಿದ್ದಾನೆ. ಜೊತೆಗೆ ಜಿಲ್ಲಾಧ್ಯಕ್ಷ ಮಹೇಶ್ ಸಹ ಒಂದು ಲಕ್ಷ ಕೇಳುತ್ತಿದ್ದು ಅದನ್ನು ಬಸ್ರುದ್ದೀನನಿಗೆ ಕೊಡಲಾಗದೆ ಆಫೀಸಿಗೆ ಬರದೇ ತಪ್ಪಿಸಿಕೊಂಡು ಓಡಾಡುತ್ತಿದ್ದಾನಂತೆ.

ಮಂಡ್ಯ ನಗರಸಭೆ ಆಯುಕ್ತ ಖತರ್‌ನಾಕ್ ರಾಮಸ್ವಾಮಿ ನಿವೃತ್ತಿಯಿಂದ ತೆರವಾಗಿದ್ದ ಹುದ್ದೆಗೆ ಮಾಜಿ ಎಮ್ಮೆಲ್ಸಿ ಎಂ.ಡಿ.ರಮೇಶ್‌ರಾಜುನ ಅಳಿಯ ಸುರೇಶ್‌ನ ಜೊತೆ ಮಹೇಶ್‌ನ ಚೇಲಾ ಚಪ್ಪಲಿ ಅಂಗಡಿ ಕುಮಾರ್ 10 ಲಕ್ಷಗಳಿಗೆ ಡೀಲ್ ಮಾಡಿದ್ದಾನೆ. ಆದರೆ ನಾಗರಾಜಪ್ಪ ಎಂಬ ಮತ್ತೊಬ್ಬ ಬಿಜೆಪಿ ನಾಯಕ ಇದಕ್ಕಿಂತ ಮೊದಲೇ ಚಾಮರಾಜನಗರದಲ್ಲಿ ಚಪ್ಪಲಿ ಸೇವೆಯಿಂದ ತಪ್ಪಿಸಿಕೊಂಡ ಪ್ರಕಾಶ್ ಎಂಬ ಭ್ರಷ್ಟನನ್ನು ಆಯುಕ್ತ ಹುದ್ದೆಗೆ ತಂದು ಕೂರಿಸಿದ್ದಾನೆ.

ಹಾಗೆಯೇ ಮಂಡ್ಯ ನಗರಸಭೆಯ ದಕ್ಷ ಮತ್ತು ಪ್ರಾಮಾಣಿಕ ಇಂಜಿನಿಯರ್ ಪುಟ್ಟಶೇಷಗಿರಿ ಎಂಬುವವರನ್ನು ಎತ್ತಂಗಡಿ ಮಾಡಲು ಮಹೇಶ್ ಸಂಚು ಹೂಡಿದ್ದ. ಆದರೆ ಶೇಷಗಿರಿ ಕೆಎಟಿಯಿಂದ ತಡೆಯಾಜ್ಞೆ ತಂದು ಇಲ್ಲೇ ಉಳಿದುಕೊಂಡಿದ್ದಾರೆ.

ಮಂಡ್ಯ ಜಿಲ್ಲೆಯ ಬಹುಪಾಲು ಬಿಜೆಪಿ ನಾಯಕರ ಟ್ರಾನ್ಸ್‌ಫರ್ ದಂಧೆಯಿಂದಾಗಿ ಪ್ರಾಮಾಣಿಕ ಅಧಿಕಾರಿಗಳ ಎತ್ತಂಗಡಿಯಾಗಿ ಭ್ರಷ್ಟರು, ಲಂಚಕೋರರು ಜಿಲ್ಲೆಗೆ ಒಕ್ಕರಿಸಿಕೊಳ್ಳುತ್ತಿದ್ದಾರೆ.

ಮುಧೋಳದಲ್ಲಿ ಗರಿಗೆದರಿರುವ ದಂಧೆಗಳಲ್ಲಿ ವೇಶ್ಯಾವಾಟಿಕೆ ಪ್ರಮುಖವಾದುದು. ಈ ಕಸುಬಂತೂ ಇಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ಹಲವಾರು ಮುಗ್ಧ ಹೆಂಗಳೆಯರನ್ನು ಕೂಡಾ ವೇಶ್ಯಾಜಾಲ ದಂಧೆಗೆ ಹಚ್ಚುತ್ತಿದೆ. ಮಳಲಿ, ಕುಳಲಿ, ಪಿ.ಎಸ್. ಬದ್ನಿ, ಶಿರೋಳ, ಮಂಟೂರ್ ಮುಂತಾದ ಗ್ರಾಮಗಳಲ್ಲಿ ಸಂಜೆಯಾಯಿತೆಂದರೆ ರಂಗೀನ್ ಪ್ರಪಂಚ ಅರಳಿ ನಿಲ್ಲುತ್ತವೆ. ಈ ಭಾಗದ ಲಾಡ್ಜ್‌ಗಳಲ್ಲಂತೂ ಡೇ ಅಂಡ್ ನೈಟ್ ಡಿಂಗ್‌ಡಾಂಗ್‌ಗಳು ಎಗ್ಗಿಲ್ಲದೆ ನಡೆಯುತ್ತಿವೆ.



ಬಾಗಲಕೋಟೆ ಕಾರಜೋಳನ ನೆರಳಲ್ಲಿ ನಡೆಯದ ದಂಧೆಯಿಲ್ಲ!

ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ರಜೋಳ ಭಾಳಾ ಎತ್ತರಕ್ಕೇರಿ ಹತ್ತಿದ ಏಣಿ ಒದ್ದು ಕ್ಕನಿಸಿದ್ದಾನೆ. ಆತನಿಗೀಗ ತಾನೇ ಕಂಡುಬಂದ ಕಷ್ಟಗಳು ಟಿಲ್ಲ, ತನ್ನದೇ ಜನರ ಬದುಕು ಹಲವು ರೀತಿಯಲ್ಲಿ ...ತ್ತಿದ್ದರೂ ಈತನಿಗೇನೂ ಅನ್ನಿಸುತ್ತಿಲ್ಲ, ಗೆಲ್ಲಿಸಿ ಕಳಿಸಿದ ಹಾಳಾಗಿ ಹೋಗಲಿ, ಜಿಲ್ಲೆಯ ತುಂಬಾ ದಂಧೆಕೋರರೇ ಬಿತುಳುಕಲಿ, ಅಧಿಕಾರಿಗಳು ಬಡಬಗ್ಗರ ಮೇಲೇರಿ ಗಲಿ-ಆದರೆ ತನಗೆ ಮಾತ್ರ ಪರ್ಸೆಂಟೇಜು ತಲುಪಿದರೆ ಸಂಬ ಸೂತ್ರಕ್ಕಂಟಿಕೊಂಡಿರುವ ಕಾರಜೋಳ ಕಾಷ್ಠಮೌನ ಸಿ ಕೂತಿದ್ದಾನೆ.

ದಮನಿತ ಮಾದಿಗ ಸಮುದಾಯಕ್ಕೆ ಸೇರಿದ ಕಾರಜೋಳ ಬಲದಿಂದಲೇ ರಾಜಕೀಯ ನೆಲೆ ಕಂಡುಕೊಂಡವನು. ರೆ ಅಧಿಕಾರ ಸಿಗುತ್ತಲೇ ಎಲ್ಲಾ ಸಂವೇದನೆಗಳನ್ನೂ ಕೊಳ್ಳುತ್ತಾ ಬಂದ ಕಾರಜೋಳ ಬರಬರುತ್ತಾ ಆರೆಸ್ಸೆಸ್ ...ವಾಗಿ ಬದಲಾಗಿಬಿಟ್ಟ. ತೀರಾ ಒಂದಿಡೀ ಸಮು ...ಯದ ಉದ್ಧಾರ ಮಾಡುವುದು ಬೇಡ, ಕಷ್ಟ-ಕಾರ್ಪಣ್ಯ ...ಗಾದರೂ ಸ್ಪಂದಿಸಬಾರದೆ? ಊಹ್ಞೂಂ, ಈತನಿಗೆ ಅಂಥಾ ...ನಸ್ಸಿಲ್ಲ. ಇಂಥಾ ಸ್ಥಿತಿಯಿಂದಾಗಿಯೇ ಇಂದು ಕಾರಜೋಳ ...ಸಿಬಂದಿರುವ ಮುಧೋಳ ಕ್ಷೇತ್ರ ಹಲವಾರು ದಂಧೆ ...ಗೂ ಪಕ್ಕಾ ಭ್ರಷ್ಟ ಅಧಿಕಾರಿಗಳಿಂದ ಪಿತಗುಡಹತ್ತಿದೆ.

ಮುಧೋಳ ಕ್ಷೇತ್ರಾದ್ಯಂತ ಬಿಜಾಪುರ ಜಿಲ್ಲೆಯ ಅಧಿಕಾರಿ ...ಗಳದ್ದೇ ಕಾರುಬಾರು. ಇದಕ್ಕೆ ಕಾರಣ ಇಲ್ಲದಿಲ್ಲ, ಕಾರಜೋಳ ...ಮೂಲತಃ ಬಿಜಾಪುರ ಜಿಲ್ಲೆಯವನು. ಈತನ ಸಕಲ ...ಮಗಳ ಸಾಮ್ರಾಜ್ಯ ಸ್ಥಾಪಿತವಾಗಿರುವುದೂ ಅಲ್ಲೇ. ಈ ಮೊದಲು ಬಿಜಾಪುರ ಜಿಲ್ಲಾ ಉಸ್ತುವಾರಿ ...ವನಾಗಿದ್ದನಲ್ಲಾ? ಆ ಸಂದರ್ಭದಲ್ಲಿ ಪ್ರತೀ ಇಲಾಖೆ ...ಯಲ್ಲೂ ವಸೂಲಿವೀರ ಅಧಿಕಾರಿಗಳನ್ನು ಸಾಕಿಕೊಂಡಿದ್ದ. ...ನಂತರ ಮುಧೋಳ ಕ್ಷೇತ್ರಕ್ಕೆ ಸ್ಪರ್ಧಿಸಿ ಗೆದ್ದು ...ಗಲಕೋಟೆ ಜಿಲ್ಲಾ ಉಸ್ತುವಾರಿ ಹೊತ್ತ ಬಳಿಕ ವಸೂಲಿ ...ರ ಅಧಿಕಾರಿಗಳನ್ನೆಲ್ಲಾ ಇಲ್ಲಿಗೆ ಕರೆಸಿ ...ಂಡ. ಸದ್ಯ ಮುಧೋಳದ ಆಯ ...ನ ಸ್ಥಳಗಳಲ್ಲಿ ಅಂಥವರೇ ತುಂಬಿ ...ಕೊಂಡಿದ್ದಾರೆ. ತಹಶೀಲ್ದಾರ್ ಶಂಕರ ...ಡ ಸೋಮನಾಳ, ಸರ್ಕಲ್ ಇನ್ಸ್ ...ಪೆಕ್ಟರ್ ಬಸವನಗೌಡ ಹುಲಸಗುಂದ, ...ಇನ್ಸ್‌ಪೆಕ್ಟರ್ ಚೌಧರಿ ಕಾರ ...ಜೋಳನ ಚೇಲಾ ಪಡೆಯ ಪ್ರಮುಖ ...ರು. ಇನ್ನುಳಿದಂತೆ ತಾಲ್ಲೂಕು, ...ಜಿಲ್ಲಾ ಪಂಚಾಯ್ತಿ, ಸಮಾಜ ಕಲ್ಯಾಣ ...ಇಲಾಖೆ, ಪಿಡಬ್ಲ್ಯೂಡಿ ಮುಂತಾದ ...ಇಲಾಖೆಗಳಲ್ಲೆಲ್ಲಾ ಇಂಥವರೇ ತುಂಬಿ ...ನಾಗರಿಕರ ಜೀವ ಹಿಂಡುತ್ತಿದ್ದಾರೆ.



'ಪ್ರತೀ ರಾಜಕಾರಣಿಯು ಮಾಡುವುದೂ ಇದನ್ನೇ.


ವೇಶ್ಯಾವಾಟಿಕೆಯನ್ನೇ ಓವರ್‌ಟೇಕ್ ಮಾಡಿ ಬೆಳೆಯುತ್ತಿರುವುದು ನಕಲಿ ಸಾರಾಯಿ ದಂಧೆ. ಇದಕ್ಕೆ ದೇಶಭಕ್ತರೇ ಮಾಲೀಕರು. ಹಲಗಲಿ, ಚಿಕ್ಕೂರು, ತಾಂಡಾ, ಮಾಚಕನೂರು, ಕೆ.ಡಿ. ಬದ್ನಿ, ಯಡಹಳ್ಳಿ, ಕುಳಲಿ ಮೊದಲಾದ ಗ್ರಾಮಗಳಲ್ಲಿ ನಕಲಿ ಸಾರಾಯಿ ನಲ್ಲಿ ನೀರಿನಂತೆ ಹರಿಯುತ್ತಿದೆ. ಈ ಕಳ್ಳ ಭಟ್ಟಿಯನ್ನು ಹಾಡು ಹಗಲೇ ಊರಿಂದೂರಿಗೆ ಸಾಗಿಸಲಾಗುತ್ತಿದೆ. ಸರ್ಕಲ್ ಇನ್ಸ್‌ಪೆಕ್ಟರ್ ಹುಲಸಗುಂದನೇ ಹಬ್ಬಿಸಿರುವ ಪುಕಾರಿನ ಪ್ರಕಾರ ಈ ನಕಲಿ ಸಾರಾಯಿ ದಂಧೆಕೋರರು ಪ್ರತೀ ತಿಂಗಳು ಕಾರಜೋಳನ ಕೈಬೆಚ್ಚಗಾಗಿಸುತ್ತಾರೆ. ಆದುದರಿಂದಲೇ ದಂಧೆಯ ಬಗ್ಗೆ ಯಾರೂ ಚಕಾರ ವೆತ್ತುತ್ತಿಲ್ಲ.

ಇಸ್ಪೀಟ್, ಮಟ್ಕಾ ಅಡ್ಡೆಗಳಂತೂ ಮುಧೋಳದ ಮಟ್ಟಿಗೆ ಸಾಮಾನ್ಯ ಸಂಗತಿ. ಇದರಲ್ಲಿ ಬಿಳ್ಳೂರ ಫ್ಲಾಟ್‌ನಲ್ಲಿ ಸುಭಾಷ್ ಎಂಬ ಚಡ್ಡಿ ಸಂತತಿಯವನೊಬ್ಬನ ಅಡ್ಡೆಯಲ್ಲಿ ಭಾರೀ ವ್ಯವಹಾರ ನಡೆಯುತ್ತಿದೆ. ತಮ್ಮದೇ ಗುಂಪೊಂದನ್ನು ಕಟ್ಟಿ ಮಟ್ಕಾ-ಇಸ್ಪೀಟ್ ಅಡ್ಡೆಗಳಿಗೆ ಧೂಬಿಡುತ್ತಿದ್ದಾರೆ. ಎಎಸ್ಸೈ ಭಜಂತ್ರಿ, ಪೇದೆಗಳಾದ ಬೆಳ್ಳುಬ್ಬಿ ಕಲ್ಯಾಣ್ ಪಾಟೀಲ್, ಸಾಲಾಗುಂದಿಗಳ ತಂಡ ನಕಲಿ ಬಿಲ್ ಬುಕ್ ಹಿಡಿದು ದಂಡ ಕಕ್ಕಿಸಿ ಮೇಲಧಿಕಾರಿಗಳ ತಿಜೋರಿ ತುಂಬಿಸುತ್ತಿದೆ.

ತಹಶೀಲ್ದಾರ್ ಶಂಕರ ಗೌಡನದ್ದಂತೂ ಅಪಾರ ಹಣದ ಹರಿವಿರುವ ಹೈಟೆಕ್ ವ್ಯವಹಾರ. ಘಟಪ್ರಭಾ, ಕೃಷ್ಣಾ ನದಿಗಳ ಒಡಲು ಬಗೆಯುವ ಅಕ್ರಮ ಉಸುಕಿನ ದಂಧೆಯೇ ಶಂಕರನ ವ್ಯವಹಾರದ ಕರ್ಮಭೂಮಿ. ಈತ ಅದೇನೋ ಘನಂಧಾರಿ ಕೆಲಸ ಮಾಡುವವನ ಪೋಸಿನಲ್ಲಿ ಜೀಪು ಹತ್ತಿದನೆಂದರೆ ಹೈಟೆಕ್ ತಿರುಪೆಗೆ ಚಾಲನೆ ಸಿಕ್ಕಿತಂತಲೇ ಅರ್ಥ. ತಾಲ್ಲೂಕಿನ ತುಂಬಾ ಪ್ರತೀ ಹಳ್ಳಿಗಳ ನದಿ ದಡದಲ್ಲಿಯೂ ನೂರಾರು ಉಸುಕು ತೆಗೆಯುವ ಬೋಟ್‌ಗಳಿವೆ. ಇಲ್ಲಿಂದ ಪ್ರತಿನಿತ್ಯ ಮಹಾರಾಷ್ಟ್ರಕ್ಕೆ ನೂರಾರು ಟಿಪ್ಪರ್ ಉಸುಕು ರವಾನೆಯಾಗುತ್ತದೆ. ಇಂಥ ಒಂದು ಟಿಪ್ಪರನ್ನು ತಡೆದು ನಿಲ್ಲಿಸಿದರೂ ಶಂಕರಗೌಡನಿಗೆ ಕನಿಷ್ಠ 10 ಸಾವಿರದಷ್ಟು ಕಮಾಯಿ ಗ್ಯಾರಂಟಿ.


64 ಲಕ್ಷದ 18 ಎಕರೆ ತೋಟ, ಬಂಗಲೆ ಹಾಗೂ ಕೇಜಿಗಟ್ಟಲೆ ಚಿನ್ನ.... ಮಾಜಿ ಮೇಸ್ತ್ರಿ ಚೌಧರಿಯೀಗ ಇಷ್ಟೆಲ್ಲಾ ಪ್ರಾಪರ್ಟಿಗಳ ಮಾಲೀಕ!

ಇನ್ಸ್‌ಪೆಕ್ಟರ್ ಬಸವನಗೌಡ ಮತ್ತು ಪಿಎಸ್ಸೈ ಚೌಧರಿ ಕಂಡಲ್ಲೆಲ್ಲಾ ಉಂಡು ತೃಪ್ತಿಯಾಗದೆ ಪೊಲೀಸ್ ನಿವೇಶನ ನವೀಕರಣಕ್ಕೆ ಬಿಡುಗಡೆಯಾದ 8 ಲಕ್ಷವನ್ನು ನುಂಗಿ ನೊಣೆದಿದ್ದಾರೆ. ಇನ್ನು ಇಂಗಳಗಿ ಗ್ರಾಮದಲ್ಲಿ ಲಕ್ಷ್ಮಣ ಚನ್ನಣ್ಣವರ ಎಂಬಾತನ ದಾಂಧಲೆಗಳು ಮೇರೆ ಮೀರಿವೆ. ಇಲ್ಲಿ ಏನೇ ನಡೆದರೂ ಅದರಲ್ಲಿ ಲಕ್ಷ್ಮಣನ ನೆರಳಿದ್ದೇ ಇರುತ್ತದೆ. ಈವರೆಗೆ ಹತ್ತಾರು ಕೊಲೆಗಳು ನಡೆದಿವೆ. ಏಳು ಜನ ಬಾಲಕಿಯರು ಕಾಣೆಯಾಗಿದ್ದಾರೆ. ಆದರೂ ಕೂಡಾ ಲಕ್ಷ್ಮಣ ಅನಾಯಾಸವಾಗಿ ಓಡಾಡಿಕೊಂಡಿದ್ದಾನೆ. ಈತ ಚೌಧರಿ ಕುಲಬಾಂಧವ ಹಾಗೂ ಕಾರಜೋಳನ ಕಾಲೊತ್ತುವ ಶಿಷ್ಯ ಎಂಬುದೇ ಪ್ರಮುಖ ಕಾರಣ.



ಯಮನಪ್ಪ

ಇಷ್ಟೆಲ್ಲಾ ಅಂದಾದುಂದಿ ನಡೆಸಿ ಇಡೀ ವ್ಯವಸ್ಥೆಯನ್ನೇ ಹಾಳುಗೆಡವಿರುವ ಕಾರಜೋಳ ಕಮಾಯಿಗಾಗಿ ಹೊಸ ಹೊಸಾ ಐಡಿಯಾಗಳನ್ನು ಹುಡುಕುತ್ತಿರುತ್ತಾನೆ. ಇತ್ತೀಚೆಗೆ ನಡೆದ ಚಾಲುಕ್ಯ ಉತ್ಸವದಲ್ಲಿ ಕಮಾಯಿ ಕಡಿಮೆಯಾಯಿತೋ ಏನೋ, ಇದೀಗ 'ರನ್ನ ನಾಡಿನ ಉತ್ಸವ' ಎಂಬ ಹೊಸ ಸ್ಕೀಮೊಂದನ್ನು ಹಾಕಿಕೊಂಡಿದ್ದಾನೆ. ಇದೇ ತಿಂಗಳು 29 ಮತ್ತು 30 ರಂದು ಈ ಕಾರ್ಯಕ್ರಮ ನಡೆಯಲಿದೆ. ಇದಕ್ಕಾಗಿ ಕಾರಜೋಳ ಸರ್ಕಾರದಿಂದ 65 ಲಕ್ಷ ಅನುದಾನ ಬಿಡುಗಡೆ ಮಾಡಿಸಿಕೊಂಡಿದ್ದಾನೆ. ಇದೂ ಸಾಲದೆಂಬಂತೆ ನಿವೃತ್ತ ಶಿಕ್ಷಣಾಧಿಕಾರಿ ಯಮನಪ್ಪ ಕಾತರಕಿ ಎಂಬಾತನ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದ್ದಾನೆ. ಸದರಿ ಸಮಿತಿಗೆ ತಹಶೀಲ್ದಾರ್ ಶಂಕರಗೌಡ ಸೋಮನಾಳ ಚೇರ್‌ಮನ್ ಆಗಿದ್ದಾನೆ. ಪ್ರತಿ ಶುಗರ್, ಸಿಮೆಂಟ್ ಫ್ಯಾಕ್ಟರಿಯವರು ತಲಾ 16 ಲಕ್ಷ ಕೊಡಬೇಕೆಂಬ ಕಟ್ಟಪ್ಪಣೆ ಇದೀಗಲೇ ಕಾರಜೋಳನ ಬಿಲದಿಂದ ಹೊರಬಿದ್ದಾಗಿದೆ. ಈ ಚೋರ ಪಡೆ ಅದೆಷ್ಟು ವಸೂಲಿ ಮಾಡುತ್ತಾರೋ, ಅದೆಷ್ಟು ಗುಂಜಿಕೊಳ್ಳುತ್ತಾರೋ ರನ್ನನೇ ಬಲ್ಲ.



ಹಾದಿಬೀದಿಗಳಲ್ಲಿ ವೇಶ್ಯಾ ವ್ಯವಹಾರ

...ರೂ ಮಾಡದಿರುವುದು ಕಾರಜೋಳ ಏನು ಮಾಡಿದ' ...ತೊಂದು ಪ್ರಶ್ನೆ ಹುಟ್ಟಬಹುದು. ಆದರೆ ಮುಧೋಳದ ...ಬಾ ವ್ಯತಿರಿಕ್ತ ಘಟನೆಗಳೇ ನಡೆಯುತ್ತಿವೆ. ಕಾರಜೋಳನ ...ಳಲ್ಲಿರುವ ಅಧಿಕಾರಿಗಳ ನುಂಗಾಟದಿಂದಾಗಿ ಇಡೀ ...ವ್ಯವಸ್ಥೆಯೇ ಹಳಿತಪ್ಪಿದಂತಿದೆ. ಗಲ್ಲಿಗಲ್ಲಿಗಳಲ್ಲಿ ತರಹೇವಾರಿ ...ದಂಧೆಗಳ ದುಖಾನು ತೆರೆದಿರುವುದರಿಂದ ಸಾಮಾನ್ಯ ...ನಾಗರಿಕರು ಉಸಿರುಗಟ್ಟುವಂಥ ವಾತಾವರಣದಲ್ಲಿ ...ಬದುಕಹತ್ತಿದ್ದಾರೆ.

ಹೀಗೆ ಮುಧೋಳದಲ್ಲಿ ಗರಿಗೆದರಿರುವ ದಂಧೆಗಳಲ್ಲಿ ...ವೇಶ್ಯಾವಾಟಿಕೆ ಪ್ರಮುಖವಾದುದು. ಈ ಕಸುಬಂತೂ ಇಲ್ಲಿ ...ವ್ಯಾಪಕವಾಗಿ ನಡೆಯುತ್ತಿದೆ. ಹಲವಾರು ಮುಗ್ಧ ...ಹೆಂಗಳೆಯರನ್ನು ಕೂಡಾ ವೇಶ್ಯಾಜಾಲ ದಂಧೆಗೆ ಹಚ್ಚುತ್ತಿದೆ. ...ಮಳಲಿ, ಕುಳಲಿ, ಪಿ.ಎಸ್. ಬದ್ನಿ, ಶಿರೋಳ, ಮಂಟೂರ್ ...ಮುಂತಾದ ಗ್ರಾಮಗಳಲ್ಲಿ ಸಂಜೆಯಾಯಿತೆಂದರೆ ರಂಗೀನ್ ...ಪ್ರಪಂಚ ಅರಳಿ ನಿಲ್ಲುತ್ತವೆ. ಈ ಭಾಗದ ಲಾಡ್ಜ್‌ಗಳಲ್ಲಂತೂ ...ಡೇ ಅಂಡ್ ನೈಟ್ ಡಿಂಗ್‌ಡಾಂಗ್‌ಗಳು ಎಗ್ಗಿಲ್ಲದೆ ...ನಡೆಯುತ್ತಿವೆ. ಆದರೆ ಪೊಲೀಸು ಮಂದಿ ಮಾಮೂಲಿ ...ಪಡೆದು ತೆಪ್ಪಗೆ ಕುಕ್ಕರಿಸಿದ್ದಾರೆ. ಜಾಸ್ತಿ ಕಮಾಯಿ ...ಬರುವುದರಿಂದಂತೂ ವೇಶ್ಯಾ ಅಡ್ಡೆಗಳಿಗೆ ಕಾವಲು ನಿಲ್ಲುವಂಥ ...ಹೆಗ್ಗಳ್ಳ ಅಧಿಕಾರಿಗಳೂ ಇಲ್ಲಿದ್ದಾರೆ.

ಬಿಜೆಪಿ ಕಾರ್ಯಕರ್ತರಿಗೆ ಸೇರಿದ ಲಾಡ್ಜ್‌ಗಳಲ್ಲಂತೂ ಇದೇ ಆದಾಯದ ಮೂಲ. ಮಟ್ಕಾ ಬುಕ್ಕಿಗಳ ಹಾವಳಿ ಹೇಳತೀರದಾಗಿದೆ. ಬಿಜೆಪಿ ಕಾರ್ಯಕರ್ತ ಭೀಮ ಸೇರಿದಂತೆ ಹತ್ತಾರು ದೇಶಭಕ್ತರ ದಂಡೇ ಮಟ್ಕಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದೆ. ಇದನ್ನು ಹತ್ತಿಕ್ಕಬೇಕಾದ ಇನ್ಸ್‌ಪೆಕ್ಟರ್ ಬಸವನಗೌಡ ಹುಲಸಗುಂದ, ಪಿಎಸ್‌ಐ ಆರ್.ಎಸ್.ಚೌಧರಿಗಳು ಪಿಎಸ್ಸೈ ಆರ್.ಎಸ್.ಚೌಧರಿಯ ವಸೂಲಿ ವೈಭವವಂತೂ ಬೆಚ್ಚಿಬೀಳಿಸುವಂತಿದೆ. ಈತ ಕನ್ನಡ ಶಾಲಾ ಶಿಕ್ಷಕನಾಗಿದ್ದವನು. ತನ್ನ ಜಾತಿ ಮುಂದೆ ಮಾಡಿ ಸಂಸದ ಪಿ.ಸಿ. ಗದ್ದಿಗೌಡರನಿಗೆ ಮಸ್ಕಾ ಹೊಡೆದ ಪರಿಣಾಮವೆಂಬಂತೆ ಖಾಕಿ ತೊಡುವ ಭಾಗ್ಯ ಪ್ರಾಪ್ತವಾಯಿತು. ಹಾಗೆ ಮುಧೋಳಕ್ಕೆ ವಕ್ಕರಿಸಿ ಗೆಬರಲು ನಿಂತ ಚೌಧರಿಯೀಗ ಕೋಟಿಗೆ ತೂಗುತ್ತಾನೆ. ಒಂದು ಫ್ಲಾಟ್, ಬಿಜಾಪುರದ ಸಿಂದಗಿಯಲ್ಲಿ

ಇದೆಲ್ಲ ಗೋವಿಂದ ಕಾರಜೋಳನ ಆಡಳಿತ ವೈಖರಿಯ ಸ್ಯಾಂಪಲ್‌ಗಳಷ್ಟೇ. ಆದರೀ ಭಾಗದ ರೈತರು ಸರಿಯಾದ ವಿದ್ಯುತ್ ಇಲ್ಲದೆ, ಸರಿಯಾದ ರಸ್ತೆ ಸಂಪರ್ಕಗಳಿಲ್ಲದೆ ಬಸವಳಿದಿದ್ದಾರೆ. ಇಂಥಾ ಸಮಸ್ಯೆಗಳತ್ತ ತಿರುಗಿಯೂ ನೋಡದ ಕಾರಜೋಳ ದಂಧೆಗಳ ಸಾಮ್ರಾಜ್ಯದಲ್ಲಿ ಬ್ಯೂಜಿಯಾಗಿದ್ದಾನೆ.

ಸದ್ಯ ಈ ಕ್ಷೇತ್ರದ ಜನರೂ ಇದರಿಂದ ರೋಸತ್ತಿದ್ದಾರೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಮುಂದಿನ ಚುನಾವಣೆಯಲ್ಲಿ ಕಾರ'ಜೋಳ'ಕ್ಕೆ ತಿಪ್ಪೆಯಲ್ಲಿ ಮಲೆತು ನಾರುವ ಭಾಗ್ಯ ಖಂಡಿತಾ ಲಭಿಸಲಿದೆ.

• ಮೇಘರಾಜ್




ಲೋಕಾಪುರಕ್ಕೆ ಹಾರಿದ ಚೌಧರಿ

ಅಖಂಡ ನಾಲ್ಕು ವರ್ಷಗಳ ಕಾಲ ಮುಧೋಳದ ಮೂಲೆಮೂಲೆಯನ್ನೂ ಮೇಯ್ದ ಸಬ್‌ಇನ್ಸ್‌ಪೆಕ್ಟರ್ ಚೌಧರಿ ಲೋಕಾಪುರಕ್ಕೆ ವರ್ಗಾ ಮಾಡಿಸಿಕೊಂಡಿದ್ದಾನೆ. ಬಹುತೇಕ ಎಲ್ಲಾ ದಂಧೆಗಳಿಂದಲೂ ಪಾಲುದಾರಿಕೆ ಪೀಕುತ್ತಿದ್ದ ಚೌಧರಿ ಲೋಕಾಪುರದಲ್ಲೂ ಇದನ್ನೇ ಮುಂದುವರೆಸುವುದು ಖಚಿತ.


ಅಂದಹಾಗೆ ಈ ಲೋಕಾಪುರ ಮುಧೋಳ ಕ್ಷೇತ್ರದಲ್ಲೇ ಬರುವ ಊರು. ಇಲ್ಲಿ ಸಿಮೆಂಟ್ ಫ್ಯಾಕ್ಟರಿಗಳದ್ದೇ ದರ್ಬಾರು. ಇವುಗಳಲ್ಲಿ ಅಕ್ರಮಗಳದ್ದೇ ಮೇಲುಗೈಯಿದೆ. ಇದಕ್ಕೆ ಬೇಕಾದ ಸುಣ್ಣದ ಕಲ್ಲುಗಳೂ ಕೂಡಾ ಈ ಊರಿನಿಂದಲೇ ಸರಬರಾಜಾಗುತ್ತದೆ. ಚೌಧರಿ ಈ ಸುಣ್ಣದ ಕಲ್ಲು ಸಾಗಾಣಿಕೆದಾರರಿಗೆ ಗಂಟುಬಿದ್ದು ಗೆಬರುವ ಉತ್ಸಾಹದಿಂದಲೇ ಈ ಜಾಗ ಆರಿಸಿಕೊಂಡಿದ್ದಾನೆ.

ಮುಧೋಳದಲ್ಲೇ ಇನ್ನೊಂದಷ್ಟು ಕಾಲ ಮುಂದುವರೆದಿದ್ದರೆ ಚೌಧರಿ ಒಂದಲ್ಲಾ ಒಂದು ದಂಧೆಯಲ್ಲಿ ಖಂಡಿತಾ ತಗುಲಿಕೊಳ್ಳುತ್ತಿದ್ದ. ಇದೀಗ ವರ್ಗಾವಣೆಯ ಮೂಲಕ ಅದರಿಂದ ಬಚಾವಾಗಿದ್ದಾನೆ. ಫಲವತ್ತಾದ ಪ್ರದೇಶಕ್ಕೆ ವಕ್ಕರಿಸಿದ್ದಾನೆ.

ಕಾರಜೋಳನ ದರ್ಬಾರಿನಲ್ಲಿ ಎಂತೆಂಥಾ ದಗಲ್ಬಾಜಿಗಳು ನಡೆಯುತ್ತವೆಯೋ?



ರೇವತಿಯೊಬ್ಬಳ ಕಥೆಯಲ್ಲ; ಹಿಜ್ರಾ ಸಮುದಾಯದ ದುರಂತಗಾಥೆ



'ಬದುಕು ಬಯಲು: ಹಿಜ್ರಾ ಒಬ್ಬಳ ಆತ್ಮಕತೆ' ರೇವತಿ ಎನ್ನುವ ಒಬ್ಬಾಕೆಯ ಆತ್ಮಕಥೆಯಲ್ಲ, ಅಂಥ ಬಹಳಷ್ಟು ಜನರ ಕಥೆಯೂ ಹೌದು. ಜನ್ಮತಃ ಗಂಡಾದರೂ ಭಾವದಿಂದ, ಸ್ವಭಾವದಿಂದ ಆ ಗಂಡಿನ ಅಸ್ಮಿತೆಯೊಂದಿಗೆ ಹೊಂದಿಕೊಳ್ಳಲಾರದ ವ್ಯಕ್ತಿಗಳ ಬದುಕು ಈ ಸಮಾಜದಲ್ಲಿ ಎಷ್ಟು ನರಕಯಾತನೆಯದು, ಎಂಥ ಅಮಾನವೀಯ ಅವಸ್ಥೆಗಳನ್ನು ಅವರು ಅನುಭವಿಸುತ್ತಾರೆ ಎನ್ನುವ ಕಟುವಾಸ್ತವ ಚಿತ್ರಣ ಇಲ್ಲಿದೆ. ರೇವತಿಯ ಕಥನದಲ್ಲಿ ಆಕೆ ತೆರೆದಿಡುವ ನಗ್ನಸತ್ಯ ನಮ್ಮ ಸಮಾಜದಲ್ಲಿರುವ "ನಾಗರಿಕ" "ಶಿಷ್ಟ" ಎನಿಸಿಕೊಂಡ ಜನಕ್ಕೆ ದಿಗಿಲು ಹುಟ್ಟಿಸುವಷ್ಟು ನೇರವಾದದ್ದು ಮತ್ತು ಸುಶೀಜನರಿಗೆ ಊಹಿಸಲೂ ಕಷ್ಟವಾದದ್ದು. ಆದರೆ ಗಾಢವಾಗಿ ಸೆಳೆದುಕೊಳ್ಳುವ ಆಕೆಯ ಬದುಕಿನ ವಿವರಗಳು ಈ ಕೃತಿಯನ್ನು ಮನಗೊಟ್ಟು ಓದಿದ ಯಾರಿಗೇ ಆಗಲೀ ಅದರೊಳಗೆ ಮಾನವೀಯ ಗೌರವಕ್ಕಾಗಿ, ಘನತೆಯಿಂದ ಬಾಳುವ ಹಕ್ಕಿಗಾಗಿ ಹೂಮ್ಮುವ ಮೊರೆ ಮನವನ್ನು ಕಲಕದೆ ಬಿಡುವುದಿಲ್ಲ.

ತಮಿಳುನಾಡಿನ ನಮ್ಮಕ್ಕಲ್ ಎಂಬ ಊರಿನ ಲಾರಿ ಡ್ರೈವರ್ ಒಬ್ಬರ ಕುಟುಂಬದಲ್ಲಿ ಕೊನೆಯ ಮಗನಾಗಿ ಹುಟ್ಟಿದ ದೊರೈಸ್ವಾಮಿ ಎಂಬ ಹತ್ತುವರ್ಷದ ಬಾಲಕನ ನೆಲೆಯಿಂದ ರೇವತಿಯ ಕಥೆ ಶುರುವಾಗುತ್ತದೆ. ಆ ವಯಸ್ಸಿನಲ್ಲೇ ಆಕೆಗೆ ತಾನು ಬೇರೆ ಹುಡುಗರಿಗಿಂತ 'ಭಿನ್ನ' ಎನ್ನುವುದು ತೀವ್ರವಾಗಿ ಅರಿವಾಗುತ್ತದೆ. ಶಾಲೆಯಲ್ಲಿ ಜೊತೆಯ ಹುಡುಗರ ಗೇಲಿ, ಕೀಟಲೆ, ಕಿರುಕುಳ; ಮನೆಯಲ್ಲಿದ್ದರೆ ಮನೆಯ ಜನರ ಸಿಟ್ಟು, ಹಿಂಸೆ, ಬೈಗುಳಗಳಿಂದ ಪಾರಾಗಲು 'ಪೊಟ್ಟೈ' ಎಂದು ಕರೆಯಲಾಗುವ ತನ್ನಂಥದೇ ವ್ಯಕ್ತಿಗಳ ಸಹವಾಸ ಮಾಡಿ, ಕೊನೆಗೆ ಮನೆಬಿಟ್ಟು ಓಡಿಹೋಗಿ ಮೊದಲು ದೆಹಲಿಯಲ್ಲಿ ಮತ್ತು ಆಮೇಲೆ ಮುಂಬೈಯಲ್ಲಿ ಜಾಗದಿಂದ ಜಾಗಕ್ಕೆ ಅಲೆಯುತ್ತಾ ರೇವತಿಯೆನ್ನುವ 'ಹಿಜಡಾ' ಆಗಿ, ತಮಿಳುನಾಡಿನ ದಿಂಡಗಲ್‌ನಲ್ಲಿರುವ ಒಂದು ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯ ಮೂಲಕ ಲಿಂಗ ಬದಲಾಯಿಸಿಕೊಂಡು ಸ್ತ್ರೀಅಂಕಿತವನ್ನು ಗಳಿಸಿಕೊಳ್ಳುವ ರೇವತಿಯ ಬದುಕು ಪ್ರತಿ ದಿನ ಪ್ರತಿ ಘಳಿಗೆ ಭೀತಿ ಮತ್ತು ಅಸ್ಥಿರತೆಯ ಬದುಕೇ.

ರೇವತಿಯಾಗಿ ತನ್ನ ಮನೆಗೆ ವಾಪಸ್ಸಾದಾಗ ರೇವತಿಯ ಅಣ್ಣಂದಿರು ಆಕೆಯನ್ನು ಹೊಡೆದು ಬಡಿಯುವುದನ್ನು ಸುದೀರ್ಘವಾಗಿ ವರ್ಣಿಸಿರುವ ರೇವತಿಗೆ ತನ್ನ ತಂದೆ, ತಾಯಿ, ಅಣ್ಣಂದಿರು, ಅಕ್ಕ ಎಲ್ಲರ ಬಗ್ಗೆಯೂ ಇರುವ ಪ್ರೀತಿ ಅವರಿಂದಲೇ ತಿರಸ್ಕಾರ ಹಿಂಸೆಗೆ ಒಳಗಾಗಿಯೂ ಕಡಿಮೆಯಾಗುವುದಿಲ್ಲ. ತನ್ನ ಬದುಕು ಎಷ್ಟೊಂದು ದುರ್ಭರವಾದರೂ ದುಡಿದ ಹಣದಲ್ಲಿ ತಂದೆಗೂ ಸಹಾಯ ಮಾಡುತ್ತಾರೆ, ತಾಯಿಗೆ ಚಿಕಿತ್ಸೆ ಮಾಡಿಸುತ್ತಾರೆ. ಹೀಗೆ ಇಲ್ಲೊಂದು ಅಂತಃಕರಣ ತುಂಬಿದ ಹೆಣ್ಣು ಹೃದಯದ ತುಡಿತದ ನೈಜ ಚಿತ್ರವೂ ಎದುರಾಗುತ್ತದೆ.

ಸಮಾಜದಲ್ಲಿ ಜನರಿಗೆ ಹಿಜಡಾಗಳ ಬಗ್ಗೆ ಇರುವ ಭೀತಿಗಳ ಸ್ಪಷ್ಟ ಅರಿವಿದೆ; "ಜನರು ನಮ್ಮ ಬಗ್ಗೆ ಕೆಟ್ಟದಾಗಿ ಯೋಚಿಸುತ್ತಾರೆ. ನಾವು ಅವರ ಮಕ್ಕಳನ್ನು ಕದ್ದೊಯ್ದು ಷಂಡರನ್ನಾಗಿ ಮಾಡಿಬಿಡುತ್ತೇವೆ ಎಂದು ಅವರು ತಿಳಿದಿರುತ್ತಾರೆ. ನಮಗೆ ಅವರು ಹಣ ಕೊಡದೆ ಹೋದಲ್ಲಿ ನಾವು ಬಟ್ಟೆ ಎತ್ತಿ ತೋರಿಸುತ್ತೇವೆಂದು ಹೆದರುತ್ತಾರೆ. ನಾವು ಎಲ್ಲರೂ ವೇಶ್ಯಾತನದಿಂದಲೇ ಬದುಕುತ್ತೇವೆಂದು ಅವರ ತಿಳಿವಳಿಕೆ. ಅಂಥವರಿಗೆ ನಾವೂ ಮನುಷ್ಯರು, ನಮಗೂ ನಿಮ್ಮಂತೆ ಆಸೆ, ಬಯಕೆಗಳಿವೆ ಎಂದು ತೋರಿಸಲು" ಬಯಸುವುದಾಗಿ ರೇವತಿ ಹೇಳುತ್ತಾರೆ. ಈ ಪ್ರಕ್ರಿಯೆಯಲ್ಲಿ ಹೊರಗಿನ ಲೋಕಕ್ಕಾಗಿ ತನ್ನ ಬದುಕನ್ನೂ ಅದರ ಭಾಗವಾದ ಹಿಜಡಾ ಸಮುದಾಯವನ್ನೂ ಈಕೆ ಡಿ ಕ್ಲಾಸ್ಸಿಫೈ ಮಾಡುತ್ತಾರೆ. ಈ ಚಿತ್ರಣಕ್ಕೆ ಅಪರೂಪದ ಸಾಮಾಜಿಕ-ಸಾಂಸ್ಕೃತಿಕ ಮಹತ್ವವೊದಗಿದೆ.

ಹಿಜಡಾಗಳು ಬೃಹತ್ ಸಮಾಜದ ಅಂಚಿನಲ್ಲೇ ಇದ್ದರೂ ತಾವೇ ಒಂದು ಸಮುದಾಯವಾಗಿದ್ದಾರೆ. ಅವರು ಗುರು-ಚೇಲಾ ಎನ್ನುವ ವಿಧ್ಯುಕ್ತವೂ 'ಪವಿತ್ರ'ವೂ ಆದ ದೀಕ್ಷೆಯಿಂದ ಅಜ್ಜಿ ತಾಯಿ, ಮಗಳು, ಮೊಮ್ಮಗಳು ಮುಂತಾಗಿ ಹಲವು ಪೀಳಿಗೆಯ ಸ್ತ್ರೀ ಸಂಬಂಧಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಆದರೆ ಆ ಸಮುದಾಯದ್ದೇ ಆದ ನಡಾವಳಿ ನಿಯಮಗಳ ಪಾವಿತ್ರ್ಯವನ್ನು ಉಳಿಸಿಕೊಳ್ಳಲು ಬದ್ಧರಾಗುವ ಹೊಣೆ ಕೂಡ ಯಾತನೆಯಿಂದ ಮುಕ್ತವಲ್ಲ, ಅದೂ ಕಡ್ಡಾಯ, ಹಿಂಸೆಯ, ಕ್ರೂರತೆಯಲ್ಲಿ ವ್ಯಕ್ತಿಗಳನ್ನು ಬಂಧಿಸಿಡಬಲ್ಲದು. ಆದರೂ ಇಂಥ ಹಿಜಡಾ ಸಮುದಾಯದ ವಿಶಿಷ್ಟ ಸ್ತ್ರೀಸಂಬಂಧಗಳ ಮೂಲಕ ದೊರೆತ ಪ್ರೀತಿ, ವಿಶ್ವಾಸ, ಅಂತಃಕರಣಗಳೇ ಆಕೆಗೆ ಅವರೊಂದಿಗಿನ ಬದುಕಿನೊಳಗಿದ್ದ ಅತ್ಯಲ್ಪ ಸಂತಸದ ಘಳಿಗೆಗಳಾಗುತ್ತವೆ.

ಹಿಜಡಾ ಸ್ಥಿತಿಯಲ್ಲಿ ಬದುಕಿ ಉಳಿಯಲು ಲೈಂಗಿಕ ಕಾರ್ಯಕರ್ತೆಯೂ ಆಗಬೇಕಾದದ್ದು ರೇವತಿಯ ಮುಂದಿದ್ದ ಏಕೈಕ ದಾರಿ. ಅದೂ ಅತ್ಯಾಚಾರ, ಗಿರಾಕಿಗಳಾಗಿ ಬರುವವರ ಹಾಗೂ ರೌಡಿಗಳ ಹಿಂಸಾಚಾರ, ಪೊಲೀಸರ ಕೈಯಲ್ಲಿ ಸಿಕ್ಕಾಗಿನ ಯಾತನೆಯ ಹಾದಿ. ಆಕೆಗೆ ಮೊದಲು ಹಿಜಡಾ ದೀಕ್ಷೆ ಕೊಟ್ಟಾಗಿನ ಬದುಕಿನ ಸಂದರ್ಭವನ್ನು ವರ್ಣಿಸುತ್ತಾ ರೇವತಿ ಹೇಳುತ್ತಾರೆ:

"ಒಬ್ಬ ಪೊಟ್ಟೈ ಆಗಿ ಹುಟ್ಟಿದ್ದು ಪೊಟ್ಟೈಗಳೊಂದಿಗೆ ಬದುಕು ಮಾಡಬೇಕಿದ್ದಾಗ ತನ್ನ ಕಿವಿ, ಮೂಗುಗಳನ್ನು ಚುಚ್ಚಿಸಿಕೊಂಡು ಉದ್ದವಾಗಿ ಕೂದಲು ಬೆಳೆಸಿಕೊಳ್ಳ ಬೇಕಾದದ್ದು ಅತ್ಯಂತ ಅವಶ್ಯಕ. ನೀವು ಕೇವಲ ಒತ್ತು ಗುಂಡಿಯಂಥ ಕಿವಿಯೋಲೆ ಮತ್ತು ವಿಗ್ ಧರಿಸಿದರೆ ಯಾರೊಬ್ಬರೂ ನಿಮಗೆ ಗೌರವ ನೀಡುವುದಿಲ್ಲ." ಆದರೆ ಈ ಎರಡನ್ನೂ ಶ್ರದ್ಧೆಯಿಂದಲೇ ನಡೆಸುವ ರೇವತಿಯನ್ನು ಅವು ಅತ್ಯಾಚಾರಕ್ಕೆ ಬಲಿಯಾಗದಂತೆ ಕಾಪಾಡಲಿಲ್ಲ, ಆಕೆಗೆ ಯಾವ ಗೌರವವೂ ಅವುಗಳಿಂದ ದೊರೆಯಲೂ ಇಲ್ಲ. ರೇವತಿಯ ಬದುಕನ್ನು ನಿಜವಾಗಿ ಕಾಪಾಡಿದ್ದು, ಬದಲಿಸಿದ್ದು 'ಸಂಗಮ' ಎಂಬ ಸಂಸ್ಥೆಯ ಪರಿಚಯವೇ.

ರೇವತಿ ಬೆಂಗಳೂರಿಗೆ ಬಂದು ದಂಧೆಯನ್ನೂ ಲೈಂಗಿಕ ಕಾರ್ಯಕರ್ತೆಯಾಗಿ ಜೀವನವನ್ನೂ ಆರಂಭಿಸಿದ ಮೇಲೆ ಅನೇಕ ಚೇಲಾಗಳನ್ನೂ ಪಡೆದರು. ಈ ಚೇಲಾಗಳು ನಗರದಲ್ಲೇ ಹುಟ್ಟಿ ಬೆಳೆದಿದ್ದ ವಿದ್ಯಾವಂತರು, ಬುದ್ಧಿಜೀವಿಗಳು. ಇವರು ರೇವತಿಯನ್ನು 'ಸಂಗಮ'ಕ್ಕೆ ಪರಿಚಯಿಸಿದವರು. 'ಸಂಗಮ'ದಲ್ಲಿ ರೇವತಿಗೆ ಹಿಜಡಾಗಳಂಥ ಲೈಂಗಿಕ ಅಲ್ಪಸಂಖ್ಯಾತರು, ದಲಿತರು, ಆದಿವಾಸಿಗಳು ಮುಂತಾದ ಸಮಾಜದ ಸೀಮಾಂತದ ಸಮುದಾಯಗಳ ಮಾನವೀಯ, ನಾಗರಿಕ ಹಕ್ಕುಗಳ ಸಲುವಾದ ಹೋರಾಟಗಳ ತಾತ್ವಿಕ ಅರಿವು ಬೆಳೆಯಿತು. ಅಲ್ಲಿ ಕಚೇರಿಯ ಸಹಾಯಕಿಯಾಗಿ ದುಡಿಯುವಂಥ ಗೌರವಯುತ ಜೀವನೋಪಾಯವೂ ಒದಗಿತು. ಹತ್ತು ವರ್ಷಗಳಿಂದ ಸಂಗಮದ ಹೋರಾಟಕ್ಕೆ ತಮ್ಮನ್ನೂ ತೊಡಗಿಸಿಕೊಂಡಿರುವ ರೇವತಿ ಇದೀಗ ತಮ್ಮ ನಲವತ್ತರ ದಶಕದಲ್ಲಿ ಸೆಮಿನಾರುಗಳಲ್ಲಿ ಲೈಂಗಿಕತೆ ಮತ್ತು ಲೈಂಗಿಕ ಅಲ್ಪಸಂಖ್ಯಾತರನ್ನು ಕುರಿತು

ಪುಸ್ತಕ ವಿಮರ್ಶೆ


ಉಪನ್ಯಾಸಗಳನ್ನು ನೀಡುತ್ತಾರೆ. ಆ ವಿಷಯಗಳ ಬಗ್ಗೆ ತರಗತಿಗಳಲ್ಲಿ ಪಾಠ ಹೇಳುತ್ತಾರೆ. ಕೊನೆಗೂ ಅವರು ಬದುಕಿನುದ್ದಕ್ಕೂ ಹಂಬಲಿಸಿದ್ದ ಗೌರವ ಘನತೆ ಅವರಿಗೆ ದೊರೆಯುವುದು ಸಾಧ್ಯವಾಗಿದೆ.

ಹೆಣ್ಣು, ಗಂಡು ಎಂಬ ಜೀವಶಾಸ್ತ್ರೀಯವಾದ (ಸಂತಾನೋತ್ಪಾದಕ ಜೀವಿಗಳೆಂಬ ಅರ್ಥದ) ವ್ಯತ್ಯಾಸಗಳ ಆಚೆಗೆ ಸಾಂಸ್ಕೃತಿಕವಾಗಿ ರಚಿತವಾದ ಜೆಂಡರ್ ಎನ್ನುವುದು ಬಹುರೂಪದ್ದು. ಆದರೆ ಪಿತೃಪ್ರಧಾನ ವ್ಯವಸ್ಥೆ ಅನ್ಯಲಿಂಗ ಸಂಬಂಧವನ್ನು ಮಾತ್ರ 'ಸಹಜ' ಎನ್ನುತ್ತದೆ. ಆ ಚೌಕಟ್ಟಿಗೆ ಹೊಂದಲಾರದ ಲೈಂಗಿಕ ಅಲ್ಪಸಂಖ್ಯಾತರೆಲ್ಲ ಮುಖ್ಯ ವ್ಯವಸ್ಥೆಯ ತುದಿಯಲ್ಲಿ ಅಂಚಿನ ಜಾಗಗಳಲ್ಲಿ ತಿರಸ್ಕಾರ, ಅವಹೇಳನ, ಶೋಷಣೆ, ದಮನಗಳಿಗೆ ಬಲಿಯಾಗಿ ಅಧಿಕಾರದಿಂದ ಹಾಗಿರಲಿ, ಸಾಮಾನ್ಯ ಮಾನವೀಯ ಹಕ್ಕುಗಳಿಂದಲೂ ವಂಚಿತರಾಗಿ ಬದುಕುತ್ತಿರುವುದರ ಅತ್ಯಂತ ಭಾವನಾಪೂರ್ಣ ಆದರೆ ವಸ್ತುನಿಷ್ಠ ದಾಖಲೆ ರೇವತಿಯ ಈ ಆತ್ಮಕಥೆ. ಪ್ರಾಮಾಣಿಕವೂ ನಿಷ್ಠುರವೂ ಆದ ಈ ಆತ್ಮಕಥೆಯನ್ನು ಅವರು ಮೊದಲು ತಮಿಳಿನಲ್ಲಿ ರಚಿಸಿದ್ದರು. ಕಳೆದ ವರ್ಷ ಅದರ ಇಂಗ್ಲಿಷ್ ಅನುವಾದವನ್ನು ಪೆಂಗ್ವಿನ್ ಪ್ರಕಟಿಸಿದಾಗ ಜಗತ್ತಿನಾದ್ಯಂತ ಜನರ ಎದೆಯನ್ನು ಅದು ಮಿಡಿಸಿತು. ಇದೀಗ ಇಂಥ ಅಪರೂಪದ ಕೃತಿಯನ್ನು ಲೇಖಕಿ ದು. ಸರಸ್ವತಿ ಇದೊಂದು ಅನುವಾದ ಎನ್ನಿಸದಷ್ಟು ಸಹಜ ಭಾಷೆಯಲ್ಲಿ ಸೊಗಸಾಗಿ ಮತ್ತೆ ರೇವತಿಯನ್ನು ಕಟ್ಟಿಕೊಟ್ಟಿದ್ದಾರೆ. ಸರಸ್ವತಿಯಿಂದ ಇಂಥ ಅನುವಾದವನ್ನು ಮಾಡಿಸಿರುವವರು ಲೇಖಕಿ, ಪತ್ರಕರ್ತೆ, ಪ್ರಕಾಶಕಿ ಗೌರಿ ಲಂಕೇಶ್. ಈ ಇಬ್ಬರೂ ರೇವತಿಯಂಥವರ ಹಿತಕ್ಕಾಗಿ ಶ್ರಮಿಸಿ ಮೆಚ್ಚುಗೆಗೆ ಅರ್ಹರಾಗಿದ್ದಾರೆ.

• ಬಿ.ಎನ್.ಸುಮಿತ್ರಾಬಾಯಿ


ವಿಮರ್ಶೆಯ ಸೋಲು ಪ್ರಜಾಪ್ರಭುತ್ವದ ನೇಣು

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

'The democracy fails when the criticism fails' ಎನ್ನುವ ಮಾತೊಂದಿದೆ. ವಿಮರ್ಶೆ ಸೋತರೆ ಪ್ರಜಾಪ್ರಭುತ್ವವೇ ಸೋಲುತ್ತದೆ. ಅವು ಇಂಡಿಯಾದ ತುರ್ತುಪರಿಸ್ಥಿತಿಯ ದಿನಗಳು. ವಿಮರ್ಶೆಯ ಬಾಯಿಗೆ ಬೀಗ ಜಡಿದು, ಅಭಿವ್ಯಕ್ತಿ ಸ್ವಾತಂತ್ರ್ಯದ ಸೋಲನ್ನು ಗಲ್ಲಿಗೇರಿಸಲು ಹೊರಟ ದಿನಗಳವು. 26 ಜೂನ್ 1975ರಂದು ಶುರುವಾಗಿ 21 ಮಾರ್ಚ್ 1977ರಂದು ಕೊನೆಗೊಂಡ ತುರ್ತುಪರಿಸ್ಥಿತಿ ಇಂದಿರಾ ಗಾಂಧಿಯ, ಇಂದಿರಾ ಸರ್ಕಾರದ, ಇಂದಿರಾ ಕಾವಲುಪಡೆಯ ಭಟ್ಟಂಗಿಗಳ ವಿಕೃತರೂಪವನ್ನು ದರ್ಶನ ಮಾಡಿಸಿದ ಅತ್ಯಂತ ಬಿಕ್ಕಟ್ಟಿನ ದಿನಗಳವು. ಎಮರ್ಜೆನ್ಸಿ ಹೆಸರಿನ ಅಮಾನವೀಯ ಕಾರ್ಯಾಚರಣೆಯಲ್ಲಿ ಇಂದಿರಾ ಸರ್ಕಾರ ನಾಶಮಾಡಲು ಹೊರಟಿದ್ದು ಇದೇ ಪ್ರಜಾಪ್ರಭುತ್ವದ ಬೆನ್ನೆಗಿದ್ದ ವಿಮರ್ಶೆಯ ಕಣ್ಣುಗಳನ್ನೇ. ಆಗ ದೇಶದಲ್ಲಿ ಫ್ಯಾಸಿಸ್ಟ್ ಶಕ್ತಿಯೊಂದು ಹುಟ್ಟಿಕೊಳ್ಳುವ ಅಪಾಯವಿತ್ತು. ಅವತ್ತು ಇಂದಿರಾ ಸರ್ಕಾರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂಪೂರ್ಣ ನೇಣಿಗೆ ತಳ್ಳಿದ್ದಿದ್ದರೆ ಇಂಡಿಯಾದಲ್ಲಿ ಪ್ರಜಾಪ್ರಭುತ್ವ ಯಾವತ್ತೋ ಅಡವಿ ಪಾಲಾಗಿ ಇಲ್ಲೊಬ್ಬ ಡಿಕ್ಟೇಟರ್ ಬಂದಿರುತ್ತಿದ್ದ.



ಇಂಥ ಎಮರ್ಜೆನ್ಸಿಯ ದಿನಗಳಲ್ಲಿ ಹುಟ್ಟಿಕೊಂಡ ಪದ್ಯಗಳೇ 'ಜೂನ್ 75 ಮಾರ್ಚ್ 77 - ತುರ್ತುಕವನಗಳ ಪ್ರಾತಿನಿಧಿಕ ಸಂಕಲನ'. 1978ರಲ್ಲಿ ಮೊದಲ ಮುದ್ರಣ ಕಂಡಿದ್ದ ಈ ಸಂಕಲನಕ್ಕೆ ಈಗ ಎರಡನೆಯ ಮುದ್ರಣದ ಭಾಗ್ಯ. 33 ವರ್ಷಗಳ ನಂತರ ಇಂಥದೊಂದು ಸಾಹಸಕ್ಕೆ ಕೈಹಾಕಿದವರು ಚಂಪಾ. ಈ ಸಂಕಲನದಲ್ಲಿ ಕಾಣಿಸಿಕೊಂಡಿರುವ ಅನೇಕ ಕವಿಗಳು ಈಗಿಲ್ಲ. ಏರ್ಯ ಲಕ್ಷ್ಮೀನಾರಾಯಣ ಆಳ್ವ, ವಿ.ಎಸ್. ಕಾಶೆಟ್ಟಿ, ಎಚ್.ಎಚ್. ಗಂಗಾಧರಾಚಾರ್, ಚಲಂ ಬೆನ್ನೂರಕರ್, ಎಂ. ಮುಕುಂದ, ಮುಗುಳವಳ್ಳಿ ಸದಾಶಿವ, ಶಿವಶರಣ ಜಾವಳಿ, ರಾಂಪುರದ ರಾಜಣ್ಣ, ರುದ್ರಪ್ಪ ಕಾಯಿ ಮೊದಲಾದ ಕವಿಗಳನ್ನು ಮೊದಲಸಲ ಕಂಡ ಅನುಭವ.

ಅಲ್ಲಿಯತನಕ
ಈ ನಿರಾತಂಕ ನೀರಿಳಿಯುವ ಗಂಟಲಸ್ಥಿತಿಯಲ್ಲಿ
ನಿಮ್ಮದು ಪ್ರಸನ್ನ ವದನದ ಸಿಹಿಜೋಕು.
ಕಾಣದ ಕಾಡಿನ ಕತ್ತಲ ಕಾಲುದಾರಿಯಲ್ಲಿ
ಇತ್ತ ಕತ್ತೆಯ ಯಾಂತ್ರಿಕ ಬದುಕು.

ಕಾಳೇಗೌಡ ನಾಗವಾರರ 'ಕತ್ತೆ ಬದುಕು' ಪದ್ಯದ ಸಾಲುಗಳು ಆ ದಿನಗಳ ಕಠೋರ ಚಿತ್ರವೊಂದನ್ನು ತೆರೆದಿಟ್ಟರೆ, ಸರಜೂ ಕಾಟ್ಕರರ 'ಸೂರ್ಯ' ಪದ್ಯವು ಎಮರ್ಜೆನ್ಸಿಯ ಉಸಿರುಗಟ್ಟಿಸುವ ದಿನಗಳು ಸೂರ್ಯನನ್ನೇ ಹೊಡೆದು ಬಡಿದು ಮಣಿಸಲು ಹೊರಟಂತಿದೆ ಎಂದು ಸಾರುತ್ತದೆ.

ಮೂಢ ಮತಿಗಳಾ
ಪಶ್ಚಾತ್ತಾಪ ಪಡದಿದ್ದರೆ ಬೂದಿಯಾಗುವಿರಿ
ಸಾಯಿಬಾಬಾನ ಜೋಳಿಗೆ ತುಂಬ.
ಇದು ಅನುಭವ:
ತಪಿಸುವ ಸೂರ್ಯನ ಪ್ರಖರತೆ
ಎಂದಿಗೂ ತಣ್ಣಗಾಗುವುದಿಲ್ಲ.

'ನಾಗರಿಕ ಹಕ್ಕುಗಳನ್ನು ಊನಗೊಳಿಸಿ, ಅಭಿವ್ಯಕ್ತಿ-ಅಭಿಪ್ರಾಯ ಸ್ವಾತಂತ್ರ್ಯಗಳನ್ನು ಕಸಿದುಕೊಂಡು, ಸಮಷ್ಟಿ ಮಾಧ್ಯಮಗಳನ್ನು ಸ್ವಂತದ ಶಂಖವನ್ನಾಗಿ ಮಾಡಿಕೊಂಡ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ನಮ್ಮ ದೇಶದ 'ಬುದ್ಧಿಜೀವಿ'ಗಳು ಹೇಗೆ ಹೋರಾಡಿದರು ಎಂಬ ಕತೆ ಈಗ ಎಲ್ಲರಿಗೂ ಗೊತ್ತು. ಕನ್ನಡದ ಸಂದರ್ಭದಲ್ಲೇ, ಮಹಾಮಹಾ ಅನ್ನಿಸಿಕೊಂಡ ಸಾಹಿತಿಗಳು ಬಾಯಿ ಬಂದು ಮಾಡಿಕೊಂಡರು; ಕೆಲವರಿಗಂತೂ ಹುಡುಬಂಡ ಕನಸುಗಳು ಬಿದ್ದವು; ಹಲವರು ಜಳಕ ಮಾಡುವವರ ಬುಡಕ್ಕೆ ಡೊಗ್ಗಿದ್ದೇ ಬಂತು ಎಂದುಕೊಂಡು ತಮ್ಮ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಎಮರ್ಜೆನ್ಸಿಯ 'ಲಾಭ'ಗಳಲ್ಲಿ ಪಾಲು ಹಂಚಿಕೊಂಡರು.' -ಇವು ಚಂದ್ರಶೇಖರ ಪಾಟೀಲರು ಮೊದಲ ಮುದ್ರಣಕ್ಕೆಂದು ಬರೆದಿರುವ ಕೆಲವು ತುರ್ತು ಮಾತುಗಳು.

ಜೂನ್ 75 - ಮಾರ್ಚ್ 77

ಸಂಪಾದಕ: ಚಂದ್ರಶೇಖರ ಪಾಟೀಲ
ಪ್ರಕಾಶಕರು: ಸಂಕ್ರಮಣ ಪ್ರಕಾಶನ, ಜ್ಯೋತಿ ಲೇಔಟ್, 2ನೇ ಕ್ರಾಸ್, ಬಾಲಚೇನಹಳ್ಳಿ, ಜೆ.ಪಿ.ನಗರ, ಬೆಂಗಳೂರು-560 078
ಪುಟಗಳು: 158, ಬೆಲೆ: ರೂ.100, ಮೊದಲ ಮುದ್ರಣ: 1978, ಎರಡನೆಯ ಮುದ್ರಣ: 2011

(...ಳೆದ ವಾರದಿಂದ)

...ರ್ಜುನನು ಸುಮ್ಮನೆ ಭರವಸೆಗಳನ್ನು ಮತ್ತು ಗಂಭೀರ ...ಕ್ಷೆಕೆಗಳನ್ನು ತಾಳ್ಮೆಯಿಂದ ಕೇಳಿದ. ಆದರೆ ಕೃಷ್ಣ ಕೊನೆ ...ಲ್ಲಿ ತನ್ನ ಉಪದೇಶದ ಸಾರಾಂಶವನ್ನು ಹೇಳಿ ಹೀಗೆ ...ಕ್ತಾಯ ಮಾಡಿದ: "ಗುಹ್ಯಕ್ಕಿಂತ ಗುಹ್ಯವಾದ ಈ ...ನವನ್ನು ನಾನು ನಿನಗೆ ಹೇಳಿದೆ. ಅದನ್ನೆಲ್ಲಾ ಚೆನ್ನಾಗಿ ...ಚಾರ ಮಾಡಿ ನಿನಗೆ ಹಿತವೆನಿಸುದುದನ್ನು ಮಾಡು."

...ಅರ್ಜುನ ಸುಮ್ಮನೆ ಇದ್ದು ದೇವಗುರು ನಿರೀಕ್ಷಿಸಿದಂತೆ ...ತನು ಉಪದೇಶವನ್ನು ಕೂಡಲೇ ಒಪ್ಪಿಕೊಳ್ಳಲಿಲ್ಲ. ...ರುವಿಗೆ ಶಂಕೆಯುಂಟಾಯಿತು. ಗೊಂದಲಕ್ಕೀಡಾದ

ಶ್ರೀಕೃಷ್ಣನು ಎಲ್ಲೂ ಅದನ್ನು ವಿರೋಧಿಸುವುದಿಲ್ಲ. ವಾಸ್ತವವಾಗಿ ಅದನ್ನು ಒಪ್ಪಿಕೊಂಡು ಅರ್ಜುನನನ್ನು ಯೋಗಿಯಾಗಲು ಸಲಹೆ ಮಾಡುತ್ತಾನೆ. ಆದರೆ ಸಾಂಖ್ಯವನ್ನು ವೇದಾಂತಕ್ಕಿಂತ ಭಿನ್ನವಲ್ಲ ಎಂಬಂತೆ ಅತಿ ದುರ್ಬಲವಾಗಿ ಚಿತ್ರಿಸಲಾಗಿದೆ.


ಚರ್ಚೆಯ ಎರಡನೇ ಹಂತದಲ್ಲಿ ಶಿಷ್ಯನು ಗುರುವಿನ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಒಲವು ತೋರಿಸುತ್ತಿದ್ದಾನೆ ಎಂದು ಗೊತ್ತಾದಾಗ ಶ್ರೀಕೃಷ್ಣನು ಆಧ್ಯಾತ್ಮ, ಧಾರ್ಮಿಕ ಕಟ್ಟುಪಾಡುಗಳು ಮತ್ತು ಧರ್ಮವನ್ನು ಕುರಿತು ಹೆಚ್ಚು ವಿಶ್ಲೇಷಣಾತ್ಮಕವಾಗಿ ವಿವರಿಸುತ್ತಾನೆ. ಅವನು ಪರಮಸತ್ಯದ ವಿವಿಧ ಸಿದ್ಧಾಂತಗಳನ್ನು ವಿವರಿಸುತ್ತಾನೆ.

ಶ್ರಾವಕನು ಅಥವಾ ವಾಚಕನು ಸುಲಲಿತವಾದ ದಿವ್ಯ ಭಾವನಾತ್ಮಕ, ಧಾರ್ಮಿಕ ಉಪದೇಶ ಲಹರಿಯಲ್ಲಿ ಕೊಚ್ಚಿಕೊಂಡು ಹೋಗುವಂತೆ ಮಾಡಲಾಗಿದೆ. ಇಲ್ಲಿ ತರ್ಕಕ್ಕೆ ಅವಕಾಶವೇ ಇಲ್ಲ. ಅರ್ಜುನ ಅಥವಾ ಭಗವದ್ಗೀತೆಯ ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲೆ ತನ್ನ ಪ್ರಭಾವ ಯಶಸ್ವಿಯಾಗಿರುವುದನ್ನು ತಿಳಿದು ಗೀತೆಯ ಲೇಖಕ ತನ್ನ ಬಿಗಿನಿಲುವನ್ನು ಸ್ವಲ್ಪವೂ ಸಡಿಲಿಸದೆ ಪ್ರತಿಪಾದಿಸುತ್ತಾನೆ. ಅವನು ಧಾರ್ಮಿಕ ನಂಬಿಕೆ ಮತ್ತು ಸ್ಮೃತಿಗಳನ್ನು ಅವಲಂಬಿಸುತ್ತಾನೆ.

ಜೆ.ಎಸ್.ಖೈರ್ ಹೇಳುತ್ತಾರೆ: "ಅವನು ತನ್ನ ಉಪದೇಶಗಳನ್ನು ಅವರು (ಗೀತೆಯ ವಿದ್ಯಾರ್ಥಿಗಳು) ಮರುಮಾತಿಲ್ಲದೆ ನಂಬಬೇಕೆಂದು ನಿರೀಕ್ಷಿಸುತ್ತಾನೆ. ನಂಬಿಕೆ, ನಿಗೂಢತೆ, ದಿವ್ಯತ್ವ, ಅತೀಂದ್ರಿಯ ಶಕ್ತಿಗಳು, ಭಯೋತ್ಪಾದನೆ, ಪ್ರಶಂಸೆ, ಅತಿಮಾನವ ರೂಪ, ಭ್ರಾಂತಿ ಮತ್ತು ಅತ್ಯದ್ಭುತ ಭೀಕರ ದೃಶ್ಯಗಳ ಸಮ್ಮೋಹನಾಸ್ತ್ರಗಳ ಮೂಲಕ ಅವನು ವಿಶ್ವಾಸ ಗಳಿಸಲು ಯತ್ನಿಸುತ್ತಾನೆ; ವಾದದ ಮೂಲಕ ಅಲ್ಲ. ಅವನು ತನ್ನ ಶ್ರೋತೃವಾದ ಸಾಮಾನ್ಯ ಮನುಷ್ಯನ ಮನೋವಿಜ್ಞಾನವನ್ನು ಚೆನ್ನಾಗಿ ಬಲ್ಲವನು. ಅವನಲ್ಲಿ ನಂಬಿಕೆ ಇಡುವವರು ದಿವ್ಯತ್ವವನ್ನು ಪಡೆಯುತ್ತಾರೆ. ನಂಬಲೊಲ್ಲದವರು ನಾಶವಾಗುತ್ತಾರೆ"

ಗೀತಾಚಾರ್ಯನ ಚಾತುರ್ಯ

• ಪ್ರೊ. ಬಿ.ವಿ. ವೀರಭದ್ರಪ್ಪ



ಭಗವದ್ಗೀತೆ ಒಪ್ಪದವರು ದೇಶ ಬಿಟ್ಟು ತೊಲಗಿ ಎಂದು ಅಪ್ರಾಥಮಿಕ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಫರ್ಮಾನು ಹೊರಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಭಗವದ್ಗೀತೆಯ ಶ್ರೇಷ್ಠತೆ ಏನು? ಎಲ್ಲರೂ ಒಪ್ಪಲೇಬೇಕಾದ ವಿಚಾರ ಅದರಲ್ಲೇನಿದೆ? ಮೊದಲಾದ ಪ್ರಶ್ನೆಗಳು ಹಲವರನ್ನು ಕಾಡುತ್ತಿವೆ. ಅವೆಲ್ಲವನ್ನು ಪರಿಹರಿಸುವಂತಿರುವ ಪ್ರೊ.ಬಿ.ವಿ.ವೀರಭದ್ರಪ್ಪನವರ ಬರಹದ ಅಂತಿಮ ಕಂತು ಇಲ್ಲಿದೆ...

...ದ್ಧಿಜೀವಿಯ ಮನಸ್ಸು ಇನ್ನೂ ಸಂಶಯಗಳನ್ನು ...ಂದಿದೆಯೇ? ಶ್ರೀಕೃಷ್ಣನು ಮತ್ತೆ ಆರಂಭಿಸಿದ.

"ಎಲ್ಲಕ್ಕಿಂತ ಗುಹ್ಯವಾದ ನನ್ನ ಪರಮ ವಚನವನ್ನು ...ು. ನೀನು ನನಗೆ ಬಹುಪ್ರಿಯ. ಆದುದರಿಂದ ನಾನು ...ಹಿತಕ್ಕಾಗಿ ಈ ಮಾತನ್ನು ಹೇಳುತ್ತೇನೆ. ನನ್ನಲ್ಲಿಯೇ ...ಸ್ಸಿಡು. ನನ್ನ ಭಕ್ತನಾಗಿ ನನಗಾಗಿ ಯಜ್ಞ ಮಾಡು. ...ಗೆ ನಮಸ್ಕರಿಸು. ನನ್ನನ್ನೇ ಹೊಂದುತ್ತಿ, ಇದು ನನ್ನ ಪ್ರತಿಜ್ಞೆ.


...ಸಕಲ ಧರ್ಮಗಳನ್ನು ಪರಿತ್ಯಜಿಸಿ ನನಗೊಬ್ಬನಿಗೇ ...ಣಾಗತನಾಗು. ಸಕಲ ಪಾಪಗಳಿಂದ ನಿನ್ನನ್ನು ನಾನು ...ಬಿಡುಗಡೆ ಮಾಡುತ್ತೇನೆ. ಶೋಕಿಸಬೇಡ."

...ಈ ಮನಸೆಳೆಯುವ ಭರವಸೆಗಳು, ನಯವಾದ ...ದ್ದುಮಾತುಗಳು ಹೊಗಳಿಕೆ ಮತ್ತು ಮನವಿಗಳು ...ವಾಗಲಿಲ್ಲ. ಅರ್ಜುನ ಘೋಷಿಸಿದ: "ನಿನ್ನ ಕೃಪೆಯಿಂದ ...ಮೋಹ ಕಳೆಯಿತು. ನನಗೆ ಅರಿವು ಬಂದಿದೆ. ಶಂಕೆ ...ಮಾಧಾನವಾಯಿತು. ನಾನು ಈಗ ಸ್ವಸ್ಥ ಚಿತ್ತ. ನೀನು ...ಳಿದಂತೆ ನಡೆಯುತ್ತೇನೆ." ಇದು ನಿಜವಾಗಿಯೂ ಮನಃ ...ರ್ವಕ ಘೋಷಣೆಯೇ ಎಂಬ ಅಚ್ಚರಿ ಉಂಟಾಗುತ್ತದೆ.

...ಒಬ್ಬ ಅರೆ–ವಿಚಾರವಾದಿಯನ್ನು ...ದೈಭೀರುವಾದ ಆಸ್ತಿಕನನ್ನಾಗಿ ಪರಿ...ಸಲು ಭಗವದ್ಗೀತೆಯ ಸಂವಾದದ ...ರು ಹಂತದಲ್ಲಿ ಪ್ರಯತ್ನಿಸಲಾಗಿದೆ. ...ನಾಗಿ ಮತಾಂತರಗೊಂಡಿದ್ದರೂ ...ರ್ಶಕನೂ ಸಾಂಖ್ಯ ಸಿದ್ಧಾಂತಗಳ ...ವದಲ್ಲಿ ತೊಳಲಾಡುತ್ತಿರುವವನೂ ...ವನೊಡನೆ ಶ್ರೀಕೃಷ್ಣನು ವ್ಯವಹರಿಸ...ಬೇಕಾಗಿತ್ತು. ಪ್ರಾರಂಭದಲ್ಲಿ ನವವೈದಿಕ ಗುರು ತನ್ನ ಶಿಷ್ಯನಲ್ಲಿ ...ಭಾವನೆಯನ್ನುಂಟುಮಾಡಲು ತರ್ಕಸಮ್ಮತವಾದ ವೈಚಾರಿಕ ...ವಗಳಲ್ಲಿ ತೊಡಗುತ್ತಾನೆ. ಶ್ರೀಕೃಷ್ಣನ ಮನವಿ ...ಪ್ರಕವಾಗಿರದೆ ಬೌದ್ಧಿಕವಾಗಿತ್ತು. ಅವನ ಶೈಲಿ ಸರಳ ...ತ್ತು ನೇರವಾಗಿತ್ತು. ಚರ್ಚೆ ಇಬ್ಬರು ಬುದ್ಧಿಜೀವಿಗಳಲ್ಲಿ ...ಯುವಂತಹುದಾಗಿತ್ತು. ಸಾಂಖ್ಯ–ಯೋಗ ತತ್ವಗಳು ...ರಲ್ಲಿ ಇನ್ನೂ ಜನಪ್ರಿಯವಾಗಿದ್ದುವು. ಆದ್ದರಿಂದ

ತನ್ನ ಅಭಿಪ್ರಾಯಗಳನ್ನು ಒಪ್ಪಿಕೊಳ್ಳದವರೊಡನೆ ಸಹನೆ ತೋರಿಸುತ್ತಾನೆ ಮತ್ತು ಎಲ್ಲರಿಗೂ ಒಳ್ಳೆಯವನಾಗಿದ್ದಾನೆ. ಇಲ್ಲಿ ಸಾಂಖ್ಯ ಯೋಗ, ಮೀಮಾಂಸ ಮತ್ತು ವೇದಾಂತ ತತ್ವಗಳನ್ನು ನಿಷ್ಪಕ್ಷಪಾತವೋ ಎಂಬಂತೆ ಪಾಂಡಿತ್ಯ ಪೂರ್ಣವಾಗಿ ಪ್ರತಿಪಾದಿಸಲಾಗಿದೆ. ಇಲ್ಲಿ ಹೆಚ್ಚು ಕಡಿಮೆ ತರ್ಕ ಮತ್ತು ವೈಚಾರಿಕತೆಯಿಂದ ಮನವೊಲಿಸಲು ಯತ್ನಿಸಲಾಗಿದೆ; ಶೈಲಿ ಆಡಂಬರವಾಗದೆ ನೇರವಾಗಿದೆ.

ಮೂರನೇ ಹಂತ ತಲುಪುತ್ತಿದ್ದ ಹಾಗೆ ಶ್ರೀಕೃಷ್ಣ ತನ್ನ ನಿಜ ಬಣ್ಣದಲ್ಲಿ ಕಾಣಿಸಿಕೊಳ್ಳುತ್ತಾನೆ. ಧರ್ಮ ಮತ್ತು ಪುರೋಹಿತ ಪದ್ಧತಿಯ ವಕ್ತಾರನಾಗುತ್ತಾನೆ. ಅವನ ಮಾತುಗಳಿಗೆ ಈಗ ಕಾರ್ಯಕಾರಣ ಸಂಬಂಧ ಅನ್ವಯಿಸುವುದಿಲ್ಲ. ತರ್ಕ ಮತ್ತು ವೈಚಾರಿಕತೆ ಅವನ ಧೃತಿಗೆಡಿಸುವುದಿಲ್ಲ. ಅರ್ಜುನನು ಈಗ ನವ ವೈದಿಕವಾದದ ತತ್ವ ಸಿದ್ಧಾಂತಗಳನ್ನು ಪ್ರಶ್ನೆ ಮಾಡದೆ ಸ್ವೀಕರಿಸಲು ಸಿದ್ಧವಾಗಿದ್ದಾನೆ ಎಂಬುದು ಅವನಿಗೆ



ಮನವರಿಕೆಯಾಗಿದೆ. ಆದ್ದರಿಂದ ಅವನು ನೇರವಾಗಿ ಸಿದ್ಧಾಂತಗಳನ್ನು ಘೋಷಿಸುತ್ತಾನೆ ಮತ್ತು ಅವನು ನಂಬಿಕೆಯಿಂದ ಅಂಗೀಕರಿಸು ಇಲ್ಲವೆ ನಾಶವಾಗು ಎಂದು ಅರ್ಜುನನಿಗೆ ಕಟ್ಟಪ್ಪಣೆ ಮಾಡುತ್ತಾನೆ. ಪ್ರತಿಯೊಂದು ಹೇಳಿಕೆಯೂ ಭಾವನಾತ್ಮಕ ಒತ್ತಾಯದ ಪದಜಾಲದಿಂದ ಕೂಡಿದೆ. ವೇದಾಂತ ಅಥವಾ ಆಸ್ತಿಕವಾದದ ಮುಖ್ಯತತ್ವಗಳಿಗೆ ಸಾಮರಸ್ಯ ಮತ್ತು ಸುಸಾಂಗತ್ಯಗಳನ್ನು ಅಧೀನಗೊಳಿಸಲಾಗಿದೆ.

ಭಗವದ್ಗೀತೆಯ ಸುಮಾರು ಮೂರರಲ್ಲಿ ಎರಡು ಭಾಗ ಚರ್ಚೆಯ ಮೂರನೆ ಹಂತಕ್ಕೆ ಮೀಸಲಾಗಿದೆ. ಮೊದಲ ಎರಡು ಹಂತಗಳನ್ನು ಕೇವಲ ಮೂರರಲ್ಲಿ ಒಂದು ಭಾಗದೊಳಗೆ ಚರ್ಚಿಸಲಾಗಿದೆ.

ಬೇರೆ ಬೇರೆ ಹಂತಗಳ ಚರ್ಚೆಯಲ್ಲಿ ಶ್ರೀಕೃಷ್ಣನ ಭಾಷೆಯ ಶೈಲಿ ಮನವೊಲಿಸುವಿಕೆಯ ರೀತಿಯಿಂದ ಬಲವಂತದ ಮತ್ತು ಎದುರಿಲ್ಲದ ಮಾತಿನ ಕಡೆ ತಿರುಗುವುದನ್ನು ನಾವು ಗಮನಿಸಬಹುದು. ಎರಡು ಪಾತ್ರಗಳು ಒಬ್ಬರು ಇನ್ನೊಬ್ಬರನ್ನು ಸಂಬೋಧಿಸುವ ರೀತಿಯೂ ಗಮನಾರ್ಹವಾಗಿ ಬದಲಾಗಿದೆ. ಮೊದಲ ಹಂತದದಲ್ಲಿ ಶ್ರೀಕೃಷ್ಣ ಮತ್ತು ಅರ್ಜುನ ಸಮಾನ ಮಟ್ಟದಲ್ಲಿ ಗೆಳೆಯರಂತೆ ಮಾತನಾಡುತ್ತಾರೆ. ಅರ್ಜುನನು ಶ್ರೀಕೃಷ್ಣನನ್ನು ಕೇಶವ, ಗೋವಿಂದ, ಮಾಧವ, ಜನಾರ್ದನ ಇತ್ಯಾದಿ ಹೆಸರುಗಳಿಂದ ಕರೆದರೆ ಪ್ರತಿಯಾಗಿ ಶ್ರೀಕೃಷ್ಣನು ಅರ್ಜುನನನ್ನು ಧನಂಜಯ, ಪಾರ್ಥ, ಪರಂತಪ, ಪಾಂಡವ ಇತ್ಯಾದಿ ಹೆಸರುಗಳಿಂದ ಕರೆಯುತ್ತಾನೆ. ಅನಂತರ ಅವರು ಅಸಮಾನರಾಗುತ್ತಾರೆ. ಶ್ರೀಕೃಷ್ಣನು ದೇವರ ಅವತಾರವಾಗಿ ಮಾರ್ಪಟ್ಟ ನಂತರ ಅರ್ಜುನ ಅವನನ್ನು ಆದಿದೇವ, ಜಗತ್‌ನಿವಾಸ, ಪರಮೇಶ್ವರ, ಮಹಾಯೋಗೇಶ್ವರ, ದೇವದೇವ, ಜಗತ್‌ಪತಿ ಇತ್ಯಾದಿ ವಿಶೇಷಣಗಳಿಂದ ಕರೆಯುತ್ತಾನೆ. ಪ್ರತಿಯಾಗಿ ಶ್ರೀಕೃಷ್ಣನು ಅರ್ಜುನನನ್ನು ಕುರುವೀರ, ಕುರುಶ್ರೇಷ್ಠ ದೇಹಭೃತಂವರ ಇತ್ಯಾದಿ ವಿಶೇಷಣಗಳಿಂದ ಕರೆಯುತ್ತಾನೆ.

ಅಲ್ಲದೆ ಶ್ರೀಕೃಷ್ಣನು ಪ್ರಾರಂಭದಲ್ಲಿ ದೇವರನ್ನು ಕುರಿತು ಮಾತಾಡುವಾಗ ತನ್ನಿಂದ ಬೇರೆಯಾದ ಇನ್ನೊಬ್ಬರನ್ನು ಸೂಚಿಸಲೆಂಬಂತೆ ಪ್ರಥಮ ಪುರುಷ (Third Person)ದಲ್ಲಿ ಮಾತನಾಡುತ್ತಾನೆ. ದೇವರನ್ನು ಕುರಿತು ಬಳಸಲಾದ ಪದಗಳು ತತ್(ಅದು), ಸ(ಅವನು), ಯತ್(ಯಾರು), ಯೆನ್(ಯಾರಿಂದ) ಅಥವಾ ಬ್ರಹ್ಮನ್, ಪುರುಷ, ಪರಮಾತ್ಮನ್, ಕ್ಷತ್ರಿನ್ ಇತ್ಯಾದಿ. ಆದರೆ ಕೊನೆಯ ಹಂತದಲ್ಲಿ ಶ್ರೀಕೃಷ್ಣನು ತನ್ನನ್ನು ಕುರಿತು ಪರಮಾತ್ಮ, ಅವಿನಾಶಿ, ನಿರ್ವಿಕಲ್ಪ, ಅಮೃತಾತ್ಮ ಇತ್ಯಾದಿಯಾಗಿ ಕರೆದುಕೊಳ್ಳುತ್ತಾನೆ.

ಶ್ರೀಕೃಷ್ಣ ಮತ್ತು ಅರ್ಜುನರ ನಡುವೆ ನಡೆದ ಚರ್ಚೆ ಅರ್ಜುನನ ಸಂಶಯಗಳನ್ನು ನಿವಾರಿಸುವ ನಿರ್ದಿಷ್ಟ ಉದ್ದೇಶದಿಂದ ನಡೆಯಿತು ಎಂಬ ಅರಿವು ಲೇಖಕನಿಗಿದೆ. ಆದರೆ ಬೌದ್ಧಕ್ರಾಂತಿಯ ಸೋಲಿನ ನಂತರ ಪಾಂಡವ ರಾಜಕುಮಾರನಷ್ಟೇ ಹತಾಶರಾಗಿ ಗೊಂದಲಕ್ಕೀಡಾಗಿದ್ದ ಭಾರತೀಯ ಪ್ರಜೆಗಳನ್ನು ಉದ್ದೇಶವಾಗಿಟ್ಟುಕೊಂಡು ಸಹ ಗೀತೆ ರಚಿತವಾಗಿದೆ ಎಂಬುದೂ ಅಷ್ಟೇ ಸತ್ಯ.

ಸಂವಾದಗಳು, ತುಂಬಾ ಬೌದ್ಧಿಕ ಮಟ್ಟದಲ್ಲಿ ನಡೆಯುವ ಭಾಗಗಳು, ನಿರ್ದಿಷ್ಟವಾಗಿ ಬುದ್ಧಿಜೀವಿಗಳನ್ನು ಕುರಿತಾಗಿವೆ. ಅವರನ್ನು ವಿಪಾಷಿತ, ಕವಿಯ, ಪಂಡಿತಾ, ಬುದ್ಧಿಮಾನ್, ಮುನಿ, ಯತಿ, ಜಿತಾತ್ಮನ್ ಋಷಿ, ಯೋಗಿ ಎಂದು ಸಂಬೋಧಿಸಲಾಗಿದೆ. ಆದರೆ ಚರ್ಚೆ ಧರ್ಮದ ಅಥವಾ ದೇವರ ಅವತಾರದ ಕೆಳಹಂತಕ್ಕೆ ಇಳಿದಾಗ ಸಾಮಾನ್ಯ ಜನರನ್ನು ಜನ, ದೇವವ್ರತ, ಪಿತೃವ್ರತೆ, ಆರ್ತ, ಜಿಜ್ಞಾಸು, ಸ್ತ್ರೀಯ, ಶೂದ್ರ, ಪಾಪಕೃತಾತ್ಮ ಎಂದು ಸಂಬೋಧಿಸಲಾಗಿದೆ. ತತ್ವಜ್ಞಾನಿ ಲೇಖಕನು ತನ್ನ ಸಂದೇಶವನ್ನು ಸಮಕಾಲೀನ ಸಮಾಜದ ಮೇಲಿನಿಂದ ಕೆಳಗಿನ ಎಲ್ಲ ವರ್ಗಗಳಿಗೆ ತಲುಪಿಸಲು ಬಯಸಿದ್ದಾನೆ.

ಅಮೃತಾ ಪ್ರೀತಂ ಕನಸು ಭಗ್ನ

ಪಂಜಾಬಿ ಕವಿಯತ್ರಿ ಅಮೃತಾರವರ ಕೊನೆಯ ಕನಸು ಕಡೆಗೂ ...ಭಗ್ನವಾಯಿತು. ದೆಹಲಿಯಲ್ಲಿ ಅವರು ವಾಸವಾಗಿದ್ದ ಮನೆಯನ್ನು ಅವರ ಮಗ ನವತೇಜ್ ಮಾರಿಹಾಕಿದ ಸುದ್ದಿ ಹೊರಬಿದ್ದಿದೆ. ತಮ್ಮ ಕಾಲಾನಂತರ ತಮ್ಮ ಮನೆಯನ್ನು ಮ್ಯೂಸಿಯಂ ಮಾಡಬೇಕೆಂದು ಅಮೃತಾ ಕನಸು ...ಂಡಿದ್ದರು. ಅವರಿಗೆ ಆ ಮನೆ ತಂದೆಯಿಂದ ...ಬಳುವಳಿಯಾಗಿ ಬಂದಿತ್ತು. ವ್ಯಾಪಾರಸ್ಥರಾಗಿದ್ದ ಅವರ ತಂದೆ ದೇಶ ವಿಭಜನೆಯ ಕಾಲದಲ್ಲಿ ಪಾಕಿಸ್ತಾನದಿಂದ ...ನಿರಾಶ್ರಿತರಾಗಿ ದೆಹಲಿಗೆ ಬಂದಾಗ ಸರ್ಕಾರ ಅವರಿಗೆ ...ನೀಡಿದ್ದ ಈ ಮನೆಯೊಂದಿಗೆ ಅಮೃತಾರವರಿಗೆ ಭಾವನಾತ್ಮಕ ಸಂಬಂಧವಿತ್ತು. ಅಮೃತಾ ಅವರ ಸಂಗ್ರಹ...ದಲ್ಲಿದ್ದ ಅಪರೂಪದ ಪುಸ್ತಕಗಳು ಹಾಗೂ ಅವರ ಸಂಗಾತಿ ಗೋಡೆಗಳ ಮೇಲೆ ಸೃಷ್ಟಿಸಿದ್ದ ವರ್ಣಮಯ ಕಲಾಚಿತ್ರಗಳು ಅಲ್ಲಿದ್ದವು. ದೆಹಲಿ ಕೇಂದ್ರ ಭಾಗದ ಹೌಸ್‌ಖಾಸ್ ಎಂಬಲ್ಲಿ ಇದ್ದ ಈ ಮನೆ ಈಗ ...ವಾಸಾಗಿ ಬಿಲ್ಡರ್‌ಗಳ ಪಾಲಾಗಿದೆ.


ಭಾರತೀಯ ಕಾವ್ಯಾಸಕ್ತರಿಗೆ ಪಂಜಾಬಿನ ಅಮೃತಾ ಹಾಗೂ ಮಲೆಯಾಳಂನ ಕಮಲಾದಾಸ್ ಬಗ್ಗೆ ಅಪಾರ ಆಸಕ್ತಿ ಮತ್ತು ಪ್ರೀತಿ. ಏಕೆಂದರೆ, ಮಹಿಳಾ ಸಂವೇದನೆ ಅಭಿವ್ಯಕ್ತಿಗೊಳ್ಳಲು ಮುಜುಗರ ಪಡುತ್ತಿದ್ದ ಸಮಯದಲ್ಲಿ ಎಲ್ಲಾ ...ಕಟ್ಟಳೆಗಳನ್ನು ದಾಟಿ ಅಂತರಂಗದ ಕದವ ತೆರೆದಿಟ್ಟವರು ಇವರು.

ಅಮೃತಾ ಅವರ ಬದುಕೇ ಒಂದು ರೀತಿ ಕ್ರಾಂತಿಕಾರಕವಾದುದು. ...ತಾವು ಪ್ರೀತಿಸಿದ, ಆರಾಧಿಸಿದ ಹಿಂದಿ ಕವಿ ಸಾಹಿರ್ ಲೂಧಿಯಾನ್ವಿಗಾಗಿ ...ಕಟ್ಟಿಕೊಂಡ ಗಂಡನನ್ನು ತೊರೆದು ಬಂದ ದಿಟ್ಟ ಹೆಣ್ಣು ಮಗಳು ಈಕೆ. ಆದರೆ ಇಲ್ಲಿ ಒಳಿಯಾಟ ಬೇರೆಯದೆ ಆಗಿತ್ತು. ಸಾಹಿರ್ ಆ ವೇಳೆಗಾಗಲೇ ...ಇನ್ನೊಬ್ಬಳಲ್ಲಿ ಅನುರಕ್ತನಾಗಿದ್ದ. ಕೊನೆಗೆ ಅಮೃತಾ ಮದುವೆಯಾಗದೆ ಸಂಗಾತಿಯಾಗಿ ಕಲಾವಿದ ಇಮ್ರೋಜ್‌ರವರನ್ನು ಆಯ್ಕೆ ಮಾಡಿಕೊಂಡು ತಮ್ಮ ಕೊನೆಯ ಜೀವಿತಾವಧಿಯವರೆಗೆ ದೆಹಲಿಯಲ್ಲಿ ಅವರೊಂದಿಗೆ ಬದುಕಿದರು.

1919 ರಲ್ಲಿ ಲಾಹೋರ್ ನಗರದಲ್ಲಿ ಜನಿಸಿದ ಅಮೃತಾ 28 ಕಾದಂಬರಿ, 18 ಕಾವ್ಯ ಸಂಕಲನ, 5 ಕಥಾಸಂಕಲನ ಹಾಗೂ 16 ಪ್ರಬಂಧ ಮತ್ತು ಗದ್ಯ ಲೇಖನಗಳನ್ನ ಹೊರತಂದು 2005ರಲ್ಲಿ ಇನ್ನಿಲ್ಲವಾದರು.

ಅವರ ಆತ್ಮಕಥೆ 'ರಶೀದಿ ಟಿಕೇಟು' ಬದುಕು–ಬರಹಗಳ ನಡುವೆ ಅಂತರವಿಲ್ಲದ ಪ್ರಾಮಾಣಿಕ ಅಂತರಂಗದ ಅನಿಸಿಕೆಯಾಗಿದೆ. ಈ ಕೃತಿ ಕನ್ನಡವಲ್ಲದೆ ಭಾರತದ ಬಹುತೇಕ ಭಾಷೆಗಳಿಗೆ ಅನುವಾದಗೊಂಡಿದೆ.

ದೆಹಲಿಯಲ್ಲಿದ್ದ ಅಮೃತ ಪ್ರೀತಂರವರ ನಿವಾಸ ಕೇವಲ ಅವರ ವಾಸಸ್ಥಳವಾಗಿರಲಿಲ್ಲ, ಅದೊಂದು ಸಾಂಸ್ಕೃತಿಕ ಕೇಂದ್ರವಾಗಿತ್ತು. ಲೇಖಕರು, ಕಲಾವಿದರು, ಸಂಗೀತಗಾರರು, ನಾಟಕಕಾರರು ಇವರೆಲ್ಲರಿಗೂ ಅಮೃತಾರವರ ನಿವಾಸದ ಬಾಗಿಲು ಸದಾ ತೆರೆದೇ ಇರುತ್ತಿತ್ತು. ದಂಪತಿಗಳಿಬ್ಬರೂ ಅತಿಥಿಗಳಿಗೆ ಚಹಾ ನೀಡಿ ಸತ್ಕರಿಸುತ್ತಿದ್ದ ಬಗೆ ಈಗ ಕೇವಲ ನೆನಪು ಮಾತ್ರ.



ಧರ್ಮಾತೀತವಾಗಿ ಬದುಕಿದ ಅಮೃತಾರವರು ಸಾಹಿತ್ಯಕ್ಕೆ ಜಾತಿ ಧರ್ಮದ ಗಡಿರೇಖೆಗಳಿಲ್ಲ ಎಂದು ನಂಬಿದ್ದವರು ಅದರಂತೆ ಬದುಕಿದವರು.

ತಮ್ಮ ಕೊನೆಯ ದಿನಗಳಲ್ಲಿ ಮನೆಯನ್ನು ಮಾರಾಟ ಮಾಡದೆ ತಮ್ಮ ನೆನಪಿಗಾಗಿ ಮ್ಯೂಜಿಯಂ ಮಾಡಬೇಕೆಂದು ಉಯಿಲು ಬರೆದಿಟ್ಟರೂ ಸಹ, ಅಮ್ಮನ ಖ್ಯಾತಿ ಗೌರವಗಳ ಬಗ್ಗೆ ಅರಿವಿಲ್ಲದ ಮಗ ಹಣದಾಸೆಗಾಗಿ ಮನೆಯನ್ನು ಮಾರಾಟ ಮಾಡುವುದರ ಮೂಲಕ ಅಮೃತಾರವರ ಅಭಿಮಾನಿಗಳಿಗೆ ನೋವುಂಟು ಮಾಡಿದ್ದಾನೆ. ಈ ನೋವಿನ ನಡುವೆಯೂ ಸಮಾಧಾನಕರ ಸಂಗತಿ ಎಂದರೆ, ಈಗಲೂ ಬದುಕಿರುವ ಅಮೃತಾರವರ ಸಂಗಾತಿ ಇಮ್ರೋಜ್ ಅವರ ಎಲ್ಲಾ ಪುಸ್ತಕ ಹಾಗೂ ಅಪರೂಪದ ಕಲಾಕೃತಿಗಳನ್ನು ತಾವು ಈಗ ವಾಸವಾಗಿರುವ ದೆಹಲಿಯ ಗ್ರೇಟರ್ ಕೈಲಾಸ್ ಬಡಾವಣೆಯ ಮನೆಯೊಂದರಲ್ಲಿ ಸಂರಕ್ಷಿಸಿದ್ದಾರೆ.

• ಡಾ.ಎನ್.ಜಗದೀಶ್ ಕೊಪ್ಪ



ಬಿಳಿದಾಳೆಯ ಆನೆ-ಬೇನೆ ಕತೆಗಳು

ಕೆಲವು ಸಾರಿ ಇದೆಲ್ಲಾ ತಮಾಷೆ ತರ ಕಾಣುತ್ತದೆ. ಆದರೆ ಅನುಭವಿಸುವ ರೈತರ ಪಾಡು ಹೇಳತೀರದು.

ಆನೆಗಳಿಂದಾಗುತ್ತಿರುವ ಬೆಳೆನಾಶ, ಪ್ರಾಣಹಾನಿಗಳ ಬಗ್ಗೆ ನೀವೆಲ್ಲಾ ಮೀಡಿಯಾಗಳಲ್ಲಿ ನೋಡಿರುತ್ತೀರಿ. ಕಳೆದ ವಾರ ಸ್ವತಃ ನಮ್ಮ ಜಮೀನಿಗೂ ನುಗ್ಗಿರುವ ಮೂರು ಕಾಡಾನೆಗಳು ಆರಡಿ ಎತ್ತರದ ಐದಾರು ಕಲ್ಲು ಕಂಬಗಳನ್ನು ಮುರಿದು ಹಾಕಿವೆ. ಹೋಗುವಾಗ ನನ್ನ ಬಗ್ಗೆ ಅಯ್ಯೋ ಪಾಪ ಅನ್ನಿಸಿತೇನೋ ನಮ್ಮ ಜಮೀನಿನೊಳಗೆಯೇ ಎರಡು ಬುಟ್ಟಿ ತುಂಬುವಷ್ಟು ಲದ್ದಿ ಹಾಕಿ ಹೋಗಿವೆ. ಒಟ್ಟು ಎರಡು ಸಾವಿರ ರೂಪಾಯಿಯಷ್ಟು ಲುಕ್ಸಾನಿಗೆ ಎರಡು ಬುಟ್ಟಿ ಆನೆ ಲದ್ದಿ ಅಂದರೆ ಅದೇನು ಅಂತಾ ಒಳ್ಳೇ ಡೀಲ್ ಅಲ್ಲ ಬಿಡಿ. ಆದರೆ ಅರಣ್ಯ ಇಲಾಖೆಗೆ ದೂರುಕೊಡಲು ಹೋದರೆ ಇಷ್ಟು ಸಹ ಸಿಗುವುದಿಲ್ಲ.



ಕಳೆದ ವಾರ ಗೈಡ್, ಜಾಬ್ ನ್ಯೂಸ್ ಹಾಗೂ ಲಂಕೇಶ್ ಕೆಲಸಗಳನ್ನೆಲ್ಲ ಮುಗಿಸಿ ಬಿಳಿದಾಳೆಗೆ ಹೋಗಿದ್ದೆ. ಅಲ್ಲಿ ಜಮೀನಿನ ಕೆಲಸ ಒಂದು ರಾಶಿ ಇತ್ತು. ಜೊತೆಗೆ ಆನೆಗಳ ದಾಳಿಗೆ ಸಿಕ್ಕು ಮುರಿದು ಬಿದ್ದಿದ್ದ ಬೇಲಿ ಸರಿ ಮಾಡುವ ಎಕ್ಸಟ್ರಾ ಕೆಲಸವೂ ಬಂತು.

ಅಲ್ಲಿನ ನನ್ನ ಜೊತೆಗಾರ ಶಿಕಾರಿ ಶಿವ "ಐವತ್ ಕಾಲ್ನಡೆ ಆನೆ ಅವೆ ಕಾಡಲ್ಲಿ" ಅಂದ. ಜೊತೆಗೆ ಈ ಮಾನ್ಸೂನ್ ಸೀಜನ್‌ನಲ್ಲೇ ಮೂರು ಆನೆ ಮರಿಗಳೂ ನಮ್ಮೂರ ಕಾಡಿನಲ್ಲಿ ಜನ್ಮ ತಾಳಿರುವ ಸುದ್ದಿಯೂ ಕೇಳಿಬಂತು. ದಿನಕ್ಕೆ ಮೂರು ಸಾರಿ ಬಸ್ ಬಂದುಹೋಗುವಂತೆ ಈಗ ವಾರಕ್ಕೆ ಮೂರು ದಿನ ಆನೆಗಳೂ ನಮ್ಮೂರಿಗೆ ಬಂದುಹೋಗುವುದು ಮಾಮೂಲಾಗಿ ಹೋಗಿದೆ. ಈ ಗದ್ದಲದಲ್ಲಿ ನಾನು ಬೇಸಾಯ ಹೂಡಿ ಗೆಲ್ಲುವುದುಂಟೆ ಅಂತಾ ಯೋಚನೆಯಾಗಿದೆ. ಆದಿರಲಿ ಬಿಡಿ. ನಾನು ಊರಲ್ಲಿದ್ದ ಎರಡು ದಿನದಲ್ಲಿ ಈ ಆನೆ-ಮನುಷ್ಯರ ಮುಖಾಮುಖಿಯ ಕೆಲವು ಘಟನೆಗಳ ಬಗ್ಗೆ ಹುಣಸನಹಳ್ಳಿಯ ರೈತ ಮಿತ್ರ ರಾಜಣ್ಣ ಹಾಗೂ ಶಿಕಾರಿ ಶಿವ ಹೇಳಿದರು.

ನನಗವು ತಮಾಷೆಯಾಗಿ ಕಂಡದ್ದರಿಂದ ನಿಮಗೂ ಹೇಳುತ್ತಿದ್ದೇನೆ.

ಎಮ್ಮೆ ಹಿಂಡಿನಲ್ಲಿ ಬಂತು ಮರಿ ಆನೆ

ಬಿಳಿದಾಳೆಯ ಆನತಿ ದೂರದಲ್ಲಿ ಕೆಸ್ತೂರೆಂಬ ಹಳ್ಳಿಯಿದೆ. ಬನ್ನೇರುಘಟ್ಟದಿಂದ ಶುರುವಾಗುವ ನಮ್ಮೂರ ಕಾಡು ಒಂದು ಕಡೆ ತಮಿಳುನಾಡಿನ ಸೇಲಂ, ಕೃಷ್ಣಗಿರಿ, ಡೆಂಕಣಿಕೋಟೆ, ಅಂಚೆಟ್ಟಿ, ಹೊಗೇನಕಲ್ ಕಡೆಗೆ ಹಬ್ಬುತ್ತಾ ಹೋಗುತ್ತದೆ. ಮತ್ತೊಂದೆಡೆ ತಳಿ, ಜವಳಗಿರಿ, ಗಟ್ಟಗುಂದ, ಬಿಳಿದಾಳೆ, ಬ್ಯಾಲಪಟ್ಟಿ, ಕೆಸ್ತೂರು, ಹೀಗೆ ಹರಡುತ್ತಾ ಕಾವೇರಿ ನದಿ ದಾಟಿ ಮಲೈಮಹದೇಶ್ವರ ಬೆಟ್ಟದ ಕಡೆಗೆ ಸಾಗುತ್ತದೆ.

ಈ ಕೆಸ್ತೂರಿನಲ್ಲಿ ಕಳೆದ ವಾರ ರೈತನೊಬ್ಬನಿಗೆ ಆನೆ ಮರಿಯೊಂದು ಲಾತ ಕೊಟ್ಟ ಕತೆ ಇದು.

ಎಂದಿನಂತೆ ಕಾಡಿಗೆ ಮೇಯಲು ಹೋಗಿದ್ದ ಅವನ ಎಮ್ಮೆಗಳು ಸಂಜೆ ದೊಡ್ಡಿಗೆ ವಾಪಸ್ ಬಂದವು. ಊರಂಚಿನ ದನದ ಕೊಟ್ಟಿಗೆ ಬಳಿ ಇಳಿಸಂಜೆಯ ವೇಳೆ ತನ್ನ ಎಮ್ಮೆಗಳಿಗೆ ಕಾಯುತ್ತಾ ಇವನು ನಿಂತಿದ್ದಾನೆ. ಅದೋ... ಎಮ್ಮೆಗಳೂ ಗುಂಪಾಗಿ ಕದಲುತ್ತಾ ಬರುತ್ತಿವೆ. ಇನ್ನೇನು ದೊಡ್ಡಿ ಬಾಗಿಲು ಹತ್ತಿರಾದಂತೆ ಗುಂಪಿನ ಒಂದು ಮೂಲೆಯಿಂದ ಒಂದು ಪ್ರಾಣಿ ಹೊರಟು ಸೀದಾ ರೈತನ ಹತ್ತಿರಕ್ಕೆ ಬಂತು.


ನೋಡಿದರೆ ಅದೊಂದು ಆನೆ ಮರಿ!

ಕಾಡಿನಲ್ಲಿ ಮೇಯುತ್ತಾ ಇದ್ದ ಎಮ್ಮೆಗಳಿಗೆ ಈ ಆನೆಮರಿ ಅದ್ಹೇಗೆ ಜೊತೆಯಾಯಿತೋ ಏನೋ ಸಂಜೆ ಅವುಗಳ ಜೊತೆಗೇನೆ ಊರಿಗೆ ಬಂದು ಬಿಟ್ಟಿತ್ತು ಆ ಪುಟಾಣಿ ಆನೆ. ಸೊಂಡಿಲು ಆಡಿಸುತ್ತಾ ತಲೆ ಬಗ್ಗಿಸಿಕೊಂಡು ಎಮ್ಮೆಗಳೊಂದಿಗೆ ಹೊರಟು ಬಂದ ಆನೆ ಮರಿಗೆ ಊರ ಬಾಗಿಲು ಹತ್ತಿರಾದಾಗ ಒಬ್ಬ ಮನುಷ್ಯನೂ, ಮನೆಗಳೂ ಕಂಡಿವೆ. ಅದಕ್ಕೆ ಗಾಬರಿ ಯಾಯಿತೋ ಏನೋ ಸೀದಾ ಅವನ ಹತ್ತಿರ ಬಂದು ಸೊಂಡಿಲಿನಿಂದ ತಳ್ಳಿ ಬೀಳಿಸಿ ಕಿರುಚಿಕೊಂಡು ಕಾಡಿಗೆ ಓಡಿಹೋಗಿದೆ.

ನಮ್ಮೂರ ಜನರಿಗೆ ಇದೀಗ ಹರಟೆಯ ಸುದ್ದಿಯಾಗಿದೆ.

ಆನೆ ಹೊಟ್ಟೆಗೆ ಅರೆಪಾವು ಹಾಲು

ಕಳೆದ ತಿಂಗಳು ತಾನೇ ಅದೇ ಬನ್ನೇರುಘಟ್ಟ ರಕ್ಷಿತಾರಣ್ಯದ ತೇರು ಬೀದಿಯ ಹತ್ತಿರದ ಕಾಡಿನಲ್ಲಿ ಒಂದು ನ್ಯೂ ಬಾರ್ನ್ ಆನೆ ಮರಿ ಅರಣ್ಯ ಇಲಾಖೆಗೆ ಸಿಕ್ಕಿತು. ಅಮ್ಮನಿಂದ ಬೇರೆಯಾಗಿದ್ದ ಅದು ಕಾಡಿನಲ್ಲೆಲ್ಲೋ ಅಳುತ್ತಾ ಇದ್ದಾಗ ಗಮನಿಸಿದ ಜನ ಇಲಾಖೆಗೆ ತಿಳಿಸಿದಾಗ ಅವರು ನ್ಯಾಷನಲ್ ಪಾರ್ಕಿಗೆ ತಲುಪಿಸಿದರು. ಅದೇ ತರದ ಇನ್ನೊಂದು ಘಟನೆ ಬಿಳಿದಾಳೆಯ ಸಮೀಪದ ಉಡುಬುರಾಣಿ ಎಂಬಲ್ಲೂ ಆಗಿದೆ.



ಆಡು ಮೇಯಿಸಲು ಕಾಡಿಗೆ ಹೋಗಿದ್ದ ಕೆಲವರಿಗೆ ಪುಟ್ಟ ಆನೆ ಮರಿಯೊಂದು ಕಂಡಿದೆ. ಅದನ್ನು ನೋಡಿ ಖುಷಿಯಾದ ಅವರು ಸೀದಾ ಊರಿಗೆ ಕರೆದುಕೊಂಡು ಬಂದರು. ಸರಿ, ಊರಿಗೆ ಬಂದ ಅತಿಥಿಗೆ ತಿನ್ನಲು, ಕುಡಿಯಲು ಏನಾದರೂ ಕೊಡಬೇಕಲ್ಲ ಎಂದು ಮನೆಮನೆಗೂ ಹೋಗಿ ಹಾಲು ಸಂಗ್ರಹಿಸಿಕೊಂಡು ಬಂದರು.

ಹೀಗೆ ಹಸು, ಎಮ್ಮೆ, ಆಡಿನ ಹಾಲನ್ನೆಲ್ಲಾ ತಂದು ಒಂದು ದೊಡ್ಡ ಬಾಂಡಲಿಗೆ ಹೊಯ್ದು ಆನೆಮರಿಯ ಹತ್ತಿರ ಇಟ್ಟರೆ ಅದು ಸೊಂಡಿಲಿಳಿಸಿ ಒಂದೇ ಸಾರಿಗೆ ಎಲ್ಲವನ್ನೂ ಹೀರಿ ಎಲ್ಲರತ್ತ ಪಿಳಿಪಿಳಿ ನೋಡುತ್ತಾ ನಿಂತಿತಂತೆ!

ಈ ಆನೆಮರಿಗೆ ಹಾಲು ಪೂರೈಸುವ ಕೆಲಸ ನೆನೆದು ಹೆದರಿ ಹೋದ ಹಳ್ಳಿಗರು ಅರ್ಜೆಂಟಾಗಿ ಬರುವಂತೆ ಫಾರೆಸ್ಟ್‌ನವರಿಗೆ ಹೇಳಿ ಕರೆಸಿಕೊಂಡಿದ್ದಾರೆ. ಅವರು ಬಂದು ಬೆಳಗ್ಗೆ ಮರಿ ಕರೆದುಕೊಂಡು ಹೋಗಿ ಅದು ಎಲ್ಲಿ ಸಿಕ್ಕಿತೋ ಆ ಕಾಡಿಗೆ ಬಿಟ್ಟರು. ಮರಿ 'ಅಮ್ಮ ಬೇಕು' ಎನ್ನುವಂತೆ ಕೂಗಲು ಶುರುಮಾಡಿತು. ಅವತ್ತು ಸಂಜೆ ಹೊತ್ತಿಗೆ ಅದೆಲ್ಲಿತ್ತೋ ಅಮ್ಮ ಆನೆ ಬಂದವಳೇ ಮಗು ಕರೆದುಕೊಂಡು ಕಾಡೊಳಗೆ ಕಣ್ಮರೆಯಾಗಿದ್ದಾಳೆ.

ಪಟಾಕಿಗೆ ಹೆದರದ ಆನೆ

ಇದು ನಮ್ಮೂರಲ್ಲೇ ನಡೆದದ್ದು. ಬಿಳಿದಾಳೆಯಲ್ಲಿ ಆನೆ ಕಾಣಿಸಿಕೊಂ... ಊರೆಲ್ಲಾ ಗದ್ದಲವೋ ಗದ್ದಲ, ಆನೆಗಳನ್ನು ಹೊಲ ತೋಟಗಳಾಚೆಗೆ ಕಾ... ಓಡಿಸಲು ಪಟಾಕಿ ಹಚ್ಚುವುದೇನು, ಬಿಟ್ಟೂಬಿಡದೆ ತಮಟೆ ಬಾರಿಸು... ಗದ್ದಲವೆಬ್ಬಿಸುವುದೇನು, ಜೊತೆಗೆ ಜನರ ಮಾತು, ಕೂಗಾಟ, ಕೋರಸ್‌ನ... ಡಜನ್‌ಗಟ್ಟಲೆ ನಾಯಿಗಳ ಬೊಗಳಾಟ, ಯಾರಾದರೂ ಕಳ್ಳಕೋವಿ ಇಟ್ಟಿರುವ... ಗಾಳಿಯಲ್ಲಿ ಗುಂಡು ಹಾರಿಸುವುದೇನು... ಒಟ್ಟಿನಲ್ಲಿ ಅದೆಂತ ಗಂಡು... ಆನೆ ಇದ್ದರೂ ರೇಜಿಗೆ ಬಿದ್ದು ಕಾಡಿನೊಳಕ್ಕೆ ಓಡಿಬಿಡಬೇಕು, ಹಾಗಿರು... ನಮ್ಮೂರಿನವರ 'ಆಪರೇಷನ್ ಆನೆ' ಕಾರ್ಯಾಚರಣೆ.

ಒಮ್ಮೆ ಏನಾಯಿತೆಂದರೆ ಒಂದು ಹಿಂಡಾನೆ ಇಳಿಸಂಜೆ ಹೊತ್ತಲ್ಲಿ ಊ... ಬಳಿ ಕಾಣಿಸಿಕೊಂಡ ಸುದ್ದಿ ಹರಡಿತು. ಜನ ತಕ್ಷಣ ಗುಂಪು ಸೇರಿ ಗಲ... ಆರಂಭಿಸಿದರು. ಆನೆಗಳಿಗೆ ಆ ಸೀಜನ್‌ನಲ್ಲಿ ವಿಶೇಷವಾಗಿ ತಿನ್ನಲು ಏ... ಸಿಗುತ್ತಿರಲಿಲ್ಲ. ಜೊತೆಗೆ ಗಲಾಟೆ ಬೇರೆ, ಅದು ಗೊತ್ತಾಗಿಯೋ ಏನೋ ... ಹಿಂಡು ಮುಂದಕ್ಕೆ ಹೋಯಿತು. ಆದರೆ ಒಂದು ಆನೆ ಮಾತ್ರ ... ಮುಂದಿಡಲಿಲ್ಲ, ಕಾಡಿನತ್ತ ತಿರುಗಿಯೂ ನೋಡದೆ ತಮಟೆ, ಪಟಾಕಿ ವೀರ... ನೋಡುತ್ತಾ ನಿಂತೇ ಇತ್ತು.

ಜನರಿಗೂ ಪರಮಾಶ್ಚರ್ಯ. ಇದೆಂತಾ ಆನೆ? ಇದೇನು ಕಿವುಡ ... ಇರಬಹುದಾ ಅಥವಾ ಕುರುಡಾ? ನಮ್ಮ ಸದ್ದುಗದ್ದಲ ಕೇಳಿ ಓಡಿ ಹೋಗು... ಯಾಕೆ ಅಂತ ಅವರಿಗೆ ದೌಟು.

ಜನ ಎಷ್ಟು ಹೊತ್ತು ಅಂತ ರಾತ್ರಿ ವೇಳೆ ಗಲಾಟೆ ನಡೆಸುತ್ತಾ ಇರ... ಸಾಧ್ಯ, ಶಿಕಾರಿ ಶಿವ ಸೇರಿದಂತೆ ಊರಿನವರೆಲ್ಲ ಸುಸ... ಮನೆಗೆ ವಾಪಸ್ ಹೋಗಿದ್ದಾರೆ. ಮಾರನೇ ಬೆಳಗ್ಗೆ ... ನೋಡಿದಾಗ ಆನೆ ಅಲ್ಲಿರಲಿಲ್ಲ. ಆದರೂ ಜನರಿಗೆ ಸೋ...

ಇದೆಂತಾ ವಿಚಿತ್ರ ಆನೆ, ಪಟಾಕಿ, ತಮಟೆ ಸ... ಹೆದರಲಿಲ್ಲವಲ್ಲ ಎಂಬ ಕುತೂಹಲ ಅವರಿಗೆ.

ಆದಾದ ಕೆಲ ದಿನಗಳ ಮೇಲೆ ಫಾರೆಸ್ಟ್ ಡಿಪಾ... ಮೆಂಟ್‌ನವನೊಬ್ಬ ಅತ್ತ ಬಂದ. ಅವನಿಗೆ ಪಟಾಕಿಗೆ ಹೆದ... ಆ ಆನೆಯ ಬಗ್ಗೆ ಗೊತ್ತಿತ್ತು. ಜನ "ಏನ್ ಸ್ವಾಮಿ ಈ ... ಹೀಗೆ?" ಅಂದರು.

"ಊ.. ಅದು ಪಟಾಕಿಗೆ, ಡೋಲು ತಮಟೆಗೆ ಹೆದರೋ ಆನೆ ... ಈ ಶಬ್ದ ಎಲ್ಲಾ ಅದಕ್ಕೆ ಉತ್ಸವ, ಮೆರವಣಿಗೆ ಮಾಡಿದಂಗೆ" ಅಂತ ...

"ಅದೇ ಯಾಕೆಂತ!?"

"ರೀ ಅದು ತಮಿಳುನಾಡಿನ ಯಾವ್ದೋ ದೇವಸ್ಥಾನದಲ್ಲಿದ್ದ ಆನೆ ಕಂಣ್ರೀ... -ದೇವಸ್ಥಾನದಲ್ಲಿ ಬಂಡಿಗಟ್ಟಲೇ ಅನ್ನ, ಸೊಪ್ಪು ತಿಂದುಕೊಂಡು ದೇ... ಉತ್ಸವ ಮೆರವಣಿಗೆಗಳಲ್ಲಿ ಓಡಾಡಿಕೊಂಡಿದ್ದ ಆ ಆನೆಗೆ ನಮ್ಮೂರ ... ಪಟಾಕಿ, ತಮಟೆಯ ಶಬ್ದಗಳೆಲ್ಲಾ 'ವೆಲ್‌ಕಂ' ಅನ್ನುವಂತೆ ಕೇಳಿಸುತ್ತಿತ್ತೇನೋ...

ಅಂದಹಾಗೆ ಇಲ್ಲಿರುವ ಪುಟ್ಟ ಫೋಟೋ ನೋಡಿ...

ಆನೆ ಲದ್ದಿಯ ರಾಶಿ ಮೇಲೆ ಹುಟ್ಟಿಕೊಂಡಿರುವ ಅಣಬೆಗಳಿವು... ಹಿಡಿದು ಎತ್ತಲೋ ಹೊರಟಂತಿಲ್ಲವೇ?

ನನ್ನ ಸ್ಫೂರ್ತಿಯ ಸೆಲೆ

• ಲಲಿತಾ

ಹೆಚ್ಚೇನೂ ಬೇಕಿಲ್ಲ
ಕಣ್ಣು ತೆರೆದು ಒಮ್ಮೆ ನೋಡಿದರೆ ಸಾಕು
ಒಳಗೆ, ಹೊರಗೆ, ಸುತ್ತಮುತ್ತ
ಸ್ಫೂರ್ತಿಯನ್ನು ಸವಿಯಲು ಸಾಕಷ್ಟು ಉಂಟು

ಸಕಲರೂ ತುಳಿಯುತ್ತಾ ನಡೆಯುವಾಗಲೂ
ಮತ್ತೆ ಮತ್ತೆ ಸುಧಾರಿಸಿಕೊಂಡು ತಲೆಯೆತ್ತುವ
ಸಣ್ಣ ಸಣ್ಣ ಹುಲ್ಲು ಹೂಗಳು ನನಗೆ ಸ್ಫೂರ್ತಿ

ಪದೇ ಪದೇ ಬಿದ್ದರೂ, ಎಷ್ಟೇ ಏಟು ತಿಂದರೂ
ಪುಟ್ಟ ಕಾಲುಗಳನ್ನು ಎತ್ತಿಡುತ್ತಾ ನಿಲ್ಲುವ, ನಡೆಯುವ
ಸಣ್ಣ ಕೂಸಿನ ಕೊನೆಯರಿಯದ ಪ್ರಯತ್ನದಲ್ಲಿ,
ಹುರುಪಿನ ಹೂಗುಚ್ಛವಾಗಿರುವ ಅದರ ಮುಗ್ಧ ಮುಖದಲ್ಲಿ
ಸ್ಫುರಿಸುತ್ತಿದೆ ಸಂತಸಯುತ ಸ್ಫೂರ್ತಿ

ಅಷ್ಟೇಕೆ, ಸಾಲುಸಾಲಾಗಿ ಕೆಲಸಕ್ಕೆ ಹೊರಟ ಇರುವೆಗಳನ್ನು
ಸರಿಸಿರಿ... ಹೊಸಕಿರಿ.. ತಬ್ಬಿಬ್ಬಾದರೂ ತಲೆಕೊಡವಿ
ಕೆಲವೇ ಕ್ಷಣಗಳಲ್ಲಿ ಮತ್ತೆ ಸಾಲು ಸೇರುವವು, ಮುಂದೆ ಕಾಲು ಹಾಕುವವು
ಅಲ್ಲಿಯೂ ಉಂಟು ಸಂದೇಶಭರಿತ ಪುಟ್ಟ ಸ್ಫೂರ್ತಿ


ಯಾವ ನಿಬಂಧನೆಗಳಿಲ್ಲದೆ, ನಿರೀಕ್ಷೆಗಳಿಲ್ಲದೆ
ಇನ್ನೊಬ್ಬರ ದುಃಖ ದುಮ್ಮಾನಕ್ಕೆ ದಮನ ದಬ್ಬಾಳಿಕೆಗೆ
ಮಿಡಿಯುವ ಹೃದಯಗಳು, ಮಡಿಯುವ ಜೀವಗಳು
ನನ್ನೊಳಗೆ ಬೆಳಗಿಸಿವೆ ಪ್ರೀತಿ, ಸ್ಫೂರ್ತಿ.

ಕಂಡಕಂಡಲ್ಲಿ ಗುಂಡುಗಳೆ ಕಾಯುತ್ತಿದ್ದರೂ
ಕಾಡುಮೇಡುಗಳಲ್ಲಿ, ಬೀದಿಬೀದಿಗಳಲ್ಲಿ
ನಾಳೆಗಾಗಿ, ಇನ್ನಿತರರ ಒಳಿತಿಗಾಗಿ ನಲುಗುವ, ಅಲೆಯುವ
ನನ್ನ ಪ್ರತಿಯೊಬ್ಬ ಸಂಗಾತಿಯಿಂದಲೂ
ನನಗದೆಷ್ಟೊ ಸ್ಫೂರ್ತಿ

ಸುತ್ತಲೂ ಸಾವಿನ ಛಾಯೆ ಆವರಿಸುತ್ತಿದ್ದರೂ
ಅದರ ಜೊತೆಗೇ ಸಂವಾದ ನಡೆಸುತ್ತಾ ಮುಂದೆ ಸಾಗುವ
ಈ ದೇಹವೂ ಸೂಸುತ್ತಿದೆ ನನಗೆ ಸ್ಫೂರ್ತಿ

ಹೆಚ್ಚೇನು ಬೇಕಿಲ್ಲ
ಅಹಂ ಕಳಚಿ ಆಲಿಸಿದರೆ ಸಾಕು
ಗೂಡು ಬಿಟ್ಟು ಹೊರಗೆ ತಲೆ ಹಾಕಿದರೆ ಸಾಕು
ಸಾವಿರ ಸಾವಿರ ಸಂಗತಿಗಳುಂಟು

ಸ್ಫೂರ್ತಿ ಪಡೆಯಲು, ಸ್ಫೂರ್ತಿ ನೀಡಲು
ಇಷ್ಟು ಸಾಕು, ಇಷ್ಟೇ ಸಾಕು
ನಾವು ಸ್ಫೂರ್ತಿ ಪಡೆಯುವವರಾಗಿ ಮಾತ್ರವೇ ಉಳಿಯದೆ
ಸ್ಫೂರ್ತಿ ಚಿಲ್ಲುವ ಚಿಕ್ಕ ಚಿಲುಮೆಗಳಾಗಲು.





...ಜದ ತಲೆಮ್ಯಾಲೆ ಹೊಡಿದಂಗೆ ಸುಳ್ಳೇಳೂನಿಗೆ ನೊಬಲ್ ಕೊಡ್ಬೇಬೇಕು

...ಉಗ್ರಿ ಬರುವುದನ್ನೇ ಕಾಯುತ್ತಿದ್ದ ಸೀರ ಅವನು ...ಕೂಡಲೇ,

"ಎಲ್ಲಿಗೆ ಬತ್ತ ಎಡೂರಪ್ಪುಂದು?" ಎಂದ.

"ಅಯ್ಯೋ ಅವುನ ಕತೆ ಬ್ಯಾಡ. ಬವುಳಿ ಬಂದಂಗೆ ...ಡ್ತ ಅವುನೆ."

ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ಅದ್ಯಾಕಂಗೆ ಮಾತಾಡ್ತನೇ" ಎಂದು ಸೀರ ...ರವಾಗಿ ಯೋಚಿಸಿದ.

"ಅವುನಿಗೆ ನೊಬಲ್ ಪ್ರೈಜ್ ಬರಲಿಲವಂತೆ ಅದ್ಕೆ" ...ಪ ಉಗ್ರಿ. ಈ ಬಗ್ಗೆ ಕಾಳಮಾವನಿಗೂ ಕುತೂಹಲವಾಗಿ,

"ಅದ್ಯಂತಾ ಪ್ರೈಜಲಾ?" ಎಂದ.

"ಅದೂ ಪ್ರಪಂಚದ ಮಟ್ಟದಲ್ಲಿ ಏನಾರ ಸಾಧನೆ ...ದೋರಿಗೆ ಬರೋ ಪ್ರೈಜು ಕಣಮಾವ. ಏನಾರ ...ರೂಪದ್ದ ಕಂಡಿಡದಿರಬೇಕು. ಇಲ್ಲ ಅಂದ್ರೆ ...ರಬೇಕು."

"ಏನು ಬರದಿರಬೇಕು?"

"ರಾಮಾಯಣ, ಮಾಭಾರತ ಇಂತವೇನಾರ ...ರಬೇಕು."

"ಅಂಗರೆ ರಾಮಾಯ್ಣ ಮಾಭಾರತ ಬರದೋರಿಗೆ ...ಪ್ರೈಜು ಬತ್ತೇನ್ಲ?"

"ಅದ್ಯಂಗೆ ಬತ್ತದೆ ಮಾವ. ಅವುನ್ನಲ್ಲ ಬರದಿದ್ದು ...ರಾರು ವರ್ಸದ ಹಿಂದೆ. ಈ ಪ್ರೈಜ ಕೊಡಕ್ಕೆ ಶುರು ...ದಿದ್ದು ನೂರಾರು ವರ್ಸದ ಹಿಂದೆ. ಅಂಗಾಗಿ ಅವುಕೆ ...ವ ಪ್ರೈಜೂ ಸಿಕ್ಕಿಲ್ಲ. ರಾಮಾಯಣ ತಗಂಡು ತಿರಗ ...ಮಾಗಿ ಬರದು ಕೊಟ್ಟದ್ಕೆ ಕುಯೆಂಪುಗೆ ಜ್ಞಾನಪೀಠ ... ಕೊಟ್ರು."

"ಎಡೂರಪ್ಪೇನು ಬರದವುನೆ?"

"ಅವುನು ಕರ್ನಾಟಕದ ಆಸ್ತಿಯ ಹಾದಿಬೀದಿ ...ಗೋರಿಗ್ಯಲ್ಲ ಬರದವುನೆ. ಅಷ್ಟೆ ಅಲ್ಲ ಮಕ್ಕಳು, ..., ನೆಂಟ್ರು, ಇಷ್ಟರು, ಬೀಗರು, ಬಜ್ಜರಿಗೆಲ್ಲಾ ಕಂಡಕಂಡ ... ಬರದು ಮಡಿಗ್ಯವುನೆ."

"ಅಂಗರವುನಿಗೆ ಪ್ರೈಜ್ ಕೊಡಬೇಕು ಬುಡ್ರ" ಎಂದಳು ...ಬುಮ್ಮಿ.

"ಅವುನಿಗೆ ಕೊಡೋ ಅಂತ ಪ್ರೈಜೆ ಇಲವಲ್ಲೇ. ...ರ್ಣಟಕ ರತ್ನ ಅಂತ ಒಂದದೆ. ಅದು ಆಗ್ಲೆ ...ಾಗಿರದರಿಂದ ಅದ್ನೇ ಕೊಡಬವುದು."

"ಅದ್ಯಾಕಾಳಾಗಿದ್ದತ್ಲ?"

"ಜವರೇಗೌಡನಿಗೆ ಕೊಟ್ಟರದ್ರಿಂದ ಹಾಳಾಗ್ಯದೆ. ಮುಂದೆ ...ಾರನಿಗೆ ಕೊಟ್ಟತ್ಲಗೆ ನಿಲ್ಲಸದೇ ವಳ್ಳೆದು."

"ನಿಲ್ಲಸದ್ಯಾಕ್ಲ, ಅಂಥೋರಿಗೇ ಕೊಡದು ವಳ್ಳೆದು" ಎಂದ ಸೀರ.

"ಏಸು ಜನಕೆ ಅಂತ ಕೊಟ್ಟಯೋ? ಎಡೂರಪ್ಪನ ಸುತ್ತ ಬರೀ ಅಂಥೋರೆ ಅವುರೆ. ಈಗ ಎಡೂರಪ್ಪ ಮಾಡಿರೊ ಕ್ಯಲಸ ನೋಡಿದ್ರೆ ಮದ್ಲು ಅವುನಿಗೇ ಕೊಟ್ಟು ಶಾಲಲಿ ಸನುಮಾನ ಮಾಡಬೇಕು."

"ಅಂತದೇನು ಮಾಡ್ಯವುನ್ಲ?"

"ಲೋಕಾಯುಕ್ತ ನ್ಯಾಯಮೂರ್ತಿ ಸಂತೋಶಗ್ಗಡೆ ಅವುರಲ್ಲಾ, ಅವುರು ಯಾರ್‍ಯಾರಿಗೆ ಪೋನು ಮಾಡ್ತರೆ ಅಂತ ಕದ್ದು ಕೇಳಿದ್ದನಂತೆ."

"ಎಲ್ಲಿ ಕದ್ದು ಕೇಳಕ್ಯೋಗಿದ್ದಾ?"

"ಟೆಲಿಫೋನಿಲಾಕೆ ಅಧಿಕಾರಿಗಳಿಗೇಳಿದ್ರಾಯ್ತು ಕಣಮಾವ. ಅವುರು ಕೇಳಿಸಿಗಂಡು ಎಡೂರಪ್ಪಂಗೆ ಕೊಡ್ತರೆ. ಆತ ಕೇಳಿಸಿಗಂಡು ಮುಂದೇನು ಮಾಡಬೇಕು ಅಂತ ಯೋಚನೆ ಮಾಡಿ ಇದು ಮಾಡ್ತನೆ!"

"ಸರಿ ಅಂತದೇನಾರ ಮಾಡಿದ್ನೆ?"

"ಊ ಮತ್ತೆ. ಗಣಿ ಸ್ಕಾಣೆ ವಳಗಡೆ ಎಡೂರಪ್ಪನೂ ಸಿಗಾಯ್ಕಂಡಿರದ ಗೊತ್ತಾಯ್ತಂತೆ. ಆ ಕೂಡ್ಲೆ ದನಂಜಯ ಅನ್ನೊ ನನ್ನ ಮಗನ್ನ ಕರೆಸಿ 'ನೋಡಪ್ಪ, ನೀನು ದಕ್ಷಿಣ ಕನ್ನಡದೋನು. ಸಂತೋಷಗಡೆನು ಅಕಡೆನೆಯ. ಯಂಗಾರ ಮಾಡಿ ಅವುರ ಮನಿಗೋಗಿ ನನ್ನೆಸರ ತಗದಾಕಂಗೆ ಮಾಡಿಬತ್ತಿಯಾ?' ಅಂದವುನೆ. ಆ ದನಂಜಯ ಅನ್ನೋನು ಇಂತ ಕ್ಯಲಸಕ್ಕೆ ಹೇಳಿ ಮಾಡಿಸಿದಂಗವುನೆ ಕಣಮಾವ. ಆ ಕೂಡ್ಲೆ ಯಗಡೆ ಮನಿಗೋಗಿ ತುಳು ಭಾಸೆಲಿ ಮಾತಾಡ್ತ 'ಎಡೂರಪ್ಪ ತುಂಬ ವಳ್ಳೆ ಮನ್ಸ' ಅಂದವುನೆ. ಅದ್ಕೆ ಯಗಡೆ ಏನೂ ಮಾತಾಡಿಲ್ಲ, 'ನಿಮ್ಮ ಅಭಿಮಾನಿ ಸಾರ್' ಅಂದವುನೆ. ಅದ್ಕೂ ಉತ್ತರ ಇಲ್ಲ. 'ನಿಮಿಗೆ ಏನುಬೇಕಾದ್ರು ಸಹಾಯ ಮಾಡ್ತರೆ ಸಾರ್' ಅಂದನಂತೆ. ಆಗ ಸಂತೋಷ್ ಹೆಗಡೆ 'ವರಗೆ ನಡಿರಿ' ಅಂತ ಹೇಳಿ ಬಾಗಲಾಯ್ಕಂಡ್ರಂತೆ. ಸರಿ ಇಲ್ಲಿ ಬಂದ ಧನಂಜಯ 'ನಾನ್ಯಲ್ಲ ಹೇಳಿದ್ದಿನಿ? ಗಣಿ ವರದಿಗೆ ಏನೂ ಹೆದರಬ್ಯಾಡಿ. ಅದರ್‍ವಳಗೆ ನಿಮ್ಮ ಪ್ರಸ್ತಾಪ ಇದ್ರೂ ಹೆದರಬ್ಯಾಡಿ' ಅಂತ ಹೇಳಿದ್ರಂತೆ. ಎಡೂರಪ್ಪ ಆದ್ರೂ ಟೆಲಿಫೋನ್ ಕದ್ದು ಕೇಳಿಕೊಂಡು ಸಂತೋಷ್ ಹೆಗಡೆ ಕೈಗೇ ಸಿಗಾಯ್ಕಂಡವುನೆ ಇದಕೇನೇಳ್ತಿ?"

"ನೋಡು ಮತ್ತೆ, ಇನ್ಯಂಥಾ ಕಿವಿಕಿತ್ತ ಮೂಗರಕಿದ್ದನು."

"ಮೂಗರಕನೆ ಬುಡಿವುನು. ಇವುನಿಗೆ ಯಂಥಾ ಮೂಗುದಾರನೂ ತಡಿಯದಿಲ್ಲ, ಸ್ಯಣಬಿಂದೂ ಆಗದಿಲ್ಲ ಕದಬೆದೂ ಆಗದಿಲ್ಲ" ಎಂದ ಕಾಳಮಾವ.

"ಸಿಗಾಯ್ಕಂಡ್ರೂ ಒಪ್ಪಿಗಂಡಿಲ್ಲ ಕಣಮಾವ. 'ಟೆಲಿಫೋನ್ ಕದ್ದು ಕೇಳದು ಹೇಯವಾದ ಕ್ಯಲಸ. ನಾನೀ ಕ್ಯಲಸ ಮಾಡಿದ್ದಿನಿ ಅನ್ನದು ಸಾಬೀತಾದ್ರೆ ರಾಜಕೀಯನೆ ಬುಟ್ಟು ಮನಿಗೋಯ್ತಿನಿ' ಅಂದವುನೆ ಗೊತ್ತೆ?"

"ತಗಳಪ್ಪ, ಅಂಗಂದ್ರೆ ನ್ಯಾಯವೆ ಬಿದ್ದೊಯ್ತದಲ್ಲಾ."

"ಊ ಕಣ ಮಾವ. ಸುಳ್ಳ ನಿಜದ ತಲೆಮ್ಯಾಲೆ ಹ್ವಡದಂಗೇಳ್ತನೆ."

"ಯಾರೊ ಉಗ್ರಿ ಆ ತರ ಸುಳ್ಳೇಳರು?" ಎಂದು ವಾಟಿಸ್ಸೆ ಬಂದ.

"ನೀನೇಯಂತಲ್ಲಾ" ಎಂದು ಜುಮ್ಮಿ ನಕ್ಕಳು.

"ನೋಡಕ್ಕ, ನಾನು ಸತ್ಯನ ಸುಳ್ಳಿನ ತರ ಹೇಳ್ತಿನೇ ವರತೂ ಎಂದೂ ಸುಳ್ಳೇಳದಿಲ್ಲ, ಅದರಿಂದ ಏನು ಪ್ರಯೋಜನ?"

"ಪ್ರಯೋಜನ ಏನು ಅಂದ್ರೆ ಸದ್ದಿಕೆ ಬಚಾವಾಗಬವುದು, ಆಮ್ಯಾಲೆ ನೋಡಿಕಳನ ಅನ್ನೊ ಪ್ಲಾನಿರತದೆ ಕಣೊ."

"ನೀನೇಳತಯಿರೊ ಮಾತು ಎಡೂರಪ್ಪುಂದಲವೇನೊ?"

"ಸದ್ದಿಕೆ ಇನ್ಯಾರ ಸುದ್ದಿ ಮಾತಾಡನೊ."

"ಆದ್ರು ಮನ್ಸ ಇಷ್ಟೊಂದು ಹಾಳು ಬಿದ್ದೊಗಬಾರ್ದು ಕಣೊ ಉಗ್ರಿ. ರಾಮಕೃಷ್ಣ ಹೆಗಡೆನೂ ಇವುನಂಗೆ ಸಿಗಾಯ್ಕಂಡಿದ್ದ. ಕಡೇವರಿಗೂ ವಾದಿಸ್ತ ಟೆಲಿಫೋನ್ ಕದ್ದು ಕೇಳೊ ವಿಷಯದಲ್ಲಿ ಅಂಥಾ ಹೆಗಡೆನೆ ಸುಳ್ಳೇಳಿರುವಾಗ ಇನ್ನ ಎಡೂರಪ್ಪಂದು ಯಾವ ಲ್ಯಕ್ಕನೊ. ಆಗ ವಿರೇಂದ್ರ ಪಾಟೀಲ್ರು ಒಂದು ಕತೆ ಹೇಳಿದ್ರು ಗೊತ್ತೆ."



"ಏನು ಕತೆ ಹೇಳಿದ್ರು ಹೇಳ್ಲ."

"ವೆರಿ ಇಂಟರೆಸ್ಟಿಂಗ್ ಸ್ಟೋರಿ ಕಣಕ್ಕ. ಇದೇ ಎಡೂರಪ್ಪನ ತರ ಒಬ್ಬ ಕಳ್ಳ ಇದ್ನಂತೆ. ಅವುನು ಒಂದಿನ ಸಿಗಾಯ್ಕಂಡನಂತೆ."

"ಎಡೂರಪ್ಪನ ಕಳ್ಳ ಅಂತಿಯೇನ್ಲ?"

"ಆಯ್ತು, ಕಳ್ಳರ ಕಳ್ಳ ಅಂತೀನಿ ಸರೀನಾ? ಆ ಕಳ್ಳ ಸಿಗಾಯ್ಕಂಡ ಅಂದ್ರೆ ಮತ್ತೆ ಮಾತಾಡಂಗಿಲ್ಲ, ಇದೇ ತರ ಸಿಕ್ಕಿಬಿದ್ದ. ಆಗ ನಮ್ಮ ಕಾಳ ದೊಡ್ಡಪ್ಪನಂತ ಮುಖಂಡ ಪನಿಷ್‌ಮೆಂಟ ಘೋಷಣೆ ಮಾಡ್ತ ಏನಂದ ಗೊತ್ತೇ? 'ಈ ಅಪರಾಧಿ ಮಾಡಿರೊ ಕಳ್ಳತನಕ್ಕೆ ಶಿಕ್ಷೆ ಏನಪ್ಪ ಅಂದ್ರೆ ಮೂರು ವಿಧಾನದ ಶಿಕ್ಷೆ ಅವೆ. ಅದರಲ್ಲಿ ಮೊದಲನೆಯದು ನೂರು ಈರುಳ್ಳಿ ತಿನ್ನದು. ಅದು ಬೇಡ ಅಂದ್ರೆ ನೂರು ಛಡಿ ಏಟು ತಿನ್ನದು. ಅದೂ ಬೇಡ ಅನ್ನದಾದ್ರೆ ನೂರು ದಿನ ಜೈಲಲ್ಲಿರಬೇಕು. ಯಾವ ಶಿಕ್ಷೆ ಆರಿಸಿಗತ್ತಿಯಪ್ಪಾ?' ಅಂದರಂತೆ. 'ಅಯ್ಯ ಈರುಳ್ಳಿ ದ್ವಾಸೆ ತಿಂದು ರೂಢಿಯಿದ್ದಿದ್ರಿಂದ ಈರುಳ್ಳಿ ತಿಂತಿನಿ' ಅಂದನಂತೆ. ಸರಿ ಈರುಳ್ಳಿ ಸುರುದ್ರು. ಕಷ್ಟಪಟ್ಟು ಇಪ್ಪತ್ತು ಈರುಳ್ಳಿ ತಿನ್ನದ್ರಲಿ ಕಣ್ಣು ಬಾಯಿಲ್ಯಲ್ಲ ಉರಿ ಕಿತಗಂಡು ವಾಂತಿ ಮಾಡಿಕಳಂಗಾದನಂತೆ. ಆಗ 'ನನ್ನ ಕೈಲಾಗದಿಲ್ಲ, ಚಡಿ ಏಟನೆ ವಡಿರಿ' ಅಂತ ಅಂಗಿ ಬಿಚ್ಚಿ ನಿಂತಗಂಡ. ಛಡಿ ಏಟು ಇಪ್ಪತ್ತು ಬೀಳದ್ರಲ್ಲಿ 'ಅಯ್ಯಯ್ಯಪ್ಪ ನನ್ನ ಕೈಲಾಗದಿಲ್ಲ, ಜೈಲಿಗೋಯ್ತಿನಿ' ಅಂತ ಕುಣಿದಾಡಿದನಂತೆ.'

"ಓ, ಅಲ್ಲಿಗೆ ಮೂರು ಸಿಕ್ಸೆನೂ ಆಯ್ತು ಅನ್ನು."

"ಊ ಕಣಕ್ಕ, ರಾಮಕೃಷ್ಣ ಹೆಗಡೆಗೆ ವೀರೇಂದ್ರ ಪಾಟೀಲ್ರು ಇಂತ ಕತೆ ಹೇಳಿದ್ರು. ಅದು ಯಾವಾಗ ಅಂತೀ. ಯಗಡೆ ರಾಜೀನಾಮೆ ಕೊಟ್ಟು ತಿರಗ ಗೆದ್ದು ಬಂದ ವೀರೇಂದ್ರ ಪಾಟೀಲ್ರ ಎದುರಿಗೆ ಕುಂತಿದ್ದಾಗ. ಅಂಗೆ ಎಡೂರಪ್ಪ ಸಂತೋಷಗಡೆ ಪೋನ ಕದ್ದು ಕೇಳಿದ್ರೂ ಇದೊಂದು ಅಕ್ಷಮ್ಯ ಅಪರಾಧ ಅಂತ ತಾನೇ ಹೇಳಿಕತ್ತನೆ. ಅಂದ್ರೆ ಇವುನಿಗೆ ನಾವೇ ಒಂದು ನೊಬೆಲ್ ಪ್ರೈಜ ತಯಾರು ಮಾಡಿ ಶೋಬಾ ಕರಂದ್ಲಾಜೆ ಕೈಯಿಂದ ಕೊಡಸಬೇಕತ್ತಗೆ."

"ಅವುಳೇನೊ ಎಡೂರಪ್ಪನಿಗೆ ವಳ್ಳೆದಾಗ್ಲಿ ಅಂತ ಚಾಮುಂಡಿ ಬ್ಯಟ್ಟ ಹತ್ತಿದ್ಲಂತಲ್ಲಾ?" ಎಂದಳು ಜುಮ್ಮಿ.

"ಊ ಕಣಕ್ಕ, ಅದು ಬರಿಗಾಲಲ್ಲಿ ಹತ್ತಿ ಬಂದ್ಲಂತೆ. ನಮಿಗೆ ತೊಂದ್ರೆ ಆದಾಗ ನಮ್ಮ ಹಿತ್ಯೈಷಿಗಳು ಏನಾರ ಮಾಡ್ತರೆ. ಅಂಗೆ ಇವುಳಿಗೆ ಆ ಮೈಸೂರು ಚಾಮುಂಡಿ ಬ್ಯಟ್ಟ ಕಾಣುಸ್ತು, ಹತ್ತಿದ್ಲು ಅತ್ತಗೆ. ಇನ್ನ ಆ ಎಡೂರಪ್ಪ ಕೃಷ್ಣಯ್ಯ ಶೆಟ್ಟಿ ಕರದ ಅಂತ ತಿರುಪ್ತಿಗೋಗಿ ತಿಮ್ಮಪ್ಪನ್ನ ನೋಡಿಕೊಂಡು ಬಂಧ" ಎಂದು ವಾಟಿಸ್ಸೆ ಹೇಳುತ್ತಿರುವಾಗ ಸುಸ್ತಾದಂತೆ ಉಸಿರುಬಿಟ್ಟ ಕಾಳಮಾವ,

"ಇನ್ನೊಂದು ಸಬೀಗೆ ಜೋರಾಗಿ ಅಂತಿದ್ರೂ ರಾಗಿ ಬಿತ್ತನೆ ಮಾಡೇಬುಡತಿದ್ದೊ ಕಂಡ್ರ" ಎಂದ.

"ನೋಡು ನಮ್ಮ ದೊಡ್ಡಪ್ಪನ ಪ್ರಾಬ್ಲಮ್ಮು ಇದು. ಎಡೂರಪ್ಪನ ಪ್ರಾಬ್ಲಮ್ಮು ಅದು. ನಿಜವಾಗ್ಲು ಈ ಟೈಮಲ್ಲಿ ಎಡೂರಪ್ಪ ನಮ್ಮ ಕಾಳ ದೊಡ್ಡಪ್ಪನಂಗೇ ಯೋಚನೆ ಮಾಡಬೇಕಾಗಿತ್ತು."

"ಅದೀ ಜನುಮದಲ್ಲಿ ಆಗದಿಲ್ಲ ಕಣೊ ವಾಟಿಸ್ಸೆ. ಎಡೂರಪ್ಪ ಕಾಳ ಮಾವನಂಗೆ ಯೋಚನೆ ಮಾಡೋನೆ ಆಗಿದ್ರೆ ಮಾರಿಷಸ್‌ಗೆ ಹೋಗ ಬದ್ಲು ಕರ್ನಾಟಕದ ರೈತರಿಗೆ ಬೀಜಗೊಬ್ಬರ ಸರಿಯಾಗಿ ತಲುಪಿದ್ದತೇನ್ರಯ್ಯಾ, ಇನ್ನೇನಾರ ತೊಂದ್ರೆ ಇದ್ದತೆ ಅಂತ ಕೇಳೋನು. ಮಾರಿಷಸ್‌ಗೆ ಹೋಯ್ತಿರಲಿಲ್ಲ."

"ಮಾರಿಷಸ್‌ನಲ್ಲಿ ಇನ್ನೊಂದು ವಿಶೇಷವಂತೆ ಕಣೊ ಉಗ್ರಿ. ಕೇವಲ ಪೋರವರ್‌ಗೆ ಲಾಡ್ಜಲ್ಲಿ ರೂಂ ಸಿಕ್ತವಂತೆ. ಎಡೂರಪ್ಪನ ಮ್ಯಾಲೆ ಡವುಟ್ ಮಾಡನ ಅಂದ್ರೆ ಶೋಬಕ್ಕ ಇಲ್ಲೆ ಇದ್ಲು, ಎಡೂರಪ್ಪ ಇಂತ ಆಪಾದನೆಯಿಂದ ಬಚಾವಾದ. ಲಕ್ಕಿ ಫೆಲೊ!"

"!?"

...ಸ್ವಾತಂತ್ರ್ಯ ಸಂಗ್ರಾಮದ ಒಂದು ಚಿತ್ರ

...ಗಾಂಧೀಜಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದು ಹಲವಾರು ರೀತಿಯಲ್ಲಿ, ಅವರು ದೇಶದ ಜಾತೀಯತೆಯ ...ದ್ಧ ತಮ್ಮದೇ ಆದ ಅತ್ಯಂತ ಸರಳ ನೇರ ರೀತಿಯಲ್ಲಿ ವರ್ತಿಸಿದ್ದನ್ನು ಕೇಳುತ್ತಿದ್ದೇವೆ. ಕರ್ನಾಟಕದ ಹೆಣ್ಣುಮಗಳೊಬ್ಬಳು ...ರ ಜೊತೆಗೆ ಐದು ವರ್ಷ ಇದ್ದುದನ್ನು ಈ ರೀತಿ ವರ್ಣಿಸಿದ್ದಾಳೆ.

...ಶ್ರೀಮತಿ ವೀರಮ್ಮಾ ಕೋಂ ಕರಿಯಪ್ಪ ಎರೆಸೀಮಿ, ಸಂಗೂರ, ಇವರ ನೆನಹುಗಳು

...ಸೇವಾಗ್ರಾಮ ಆಶ್ರಮದಲ್ಲಿ ಗಾಂಧೀಜಿಯವರ ಹತ್ತಿರ 1936 ರಿಂದ 1941 ನೇ ಇಸ್ವಿಯವರೆಗೆ ಅವರ ...ಗಳಂತೆ ಇದ್ದೆನು. ಆಗ್ಗೆ ನನ್ನ ಕೂಡ ಎಷ್ಟು ಪ್ರೇಮದಿಂದ ಇರುತ್ತಿದ್ದರೋ ದೇವರೇ ಬಲ್ಲ. ದಿನಾಲು ನನ್ನನ್ನು ...ಡದ ವಿನಃ ಅವರಿಗೆ ಸಮಾಧಾನವಾಗುತ್ತಿದ್ದಿಲ್ಲ. ಯಾಕೆಂದರೆ ನಾನೊಬ್ಬ ಹರಿಜನ ಹೆಣ್ಣುಮಗಳಾಗಿ ಅವರಲ್ಲಿದ್ದೆನು.

... ನನ್ನ ಕೂಡ ದಿನಾಲು ನಿಯಮದಂತೆ 9 ಹಂಜಿ ಮಾಡಿಸಿಕೊಂಡು ಆ ಹಂಜಿಯಿಂದಲೇ ...ಲುತ್ತಿದ್ದರು. ಆ ನೂಲು ಭಕ್ತಿಯಿಂದ ಬೇರೆ ಇಟ್ಟು ಈ ನೂಲಿನಿಂದ ನನಗೆ ಬೇರೆ ... ಮಾಡಿರಿ. ಇದು ಪವಿತ್ರ ಇದೆ ಎಂದು ಆಭಾಬೇನಗಳಿಗೆ ತಿಳಿಸಿದ್ದರು. ಅದರಂತೆ ...ದರು ಈ ನೂಲು ಬೇರೆ ಇಟ್ಟು ಅವರಿಗೆ ಅಡ್ಡಪಂಚೆ ಮಾಡಿಸಿಕೊಟ್ಟರೆ, ಆಹಾ,ಈ ...ಚೆ ಎಷ್ಟು ಪವಿತ್ರ ಇರುವುದು ಎಂದು ಆನಂದಪಡುತ್ತಿದ್ದರು.

... ನನಗೆ ಹಿಂದಿ ಬರುತ್ತಿದ್ದಿಲ್ಲ, ತಾವೇ ಸ್ವತಃ ರಾತ್ರಿ 9 ಗಂಟೆಗೆ ಹಿಂದಿ ಹೇಳಿಕೊಡುತ್ತಿದ್ದರು ...ತ್ತು ನನ್ನಿಂದ ಅವರು ಕನ್ನಡ ಕಲಿಯುತ್ತಿದ್ದರು. ಹಾಗೆಯೇ ನನ್ನ ಕೂಡ ವಿನೋದವಾಡಿ ...ಇಬ್ಬರೂ ನಿದ್ರೆ ಹೋಗುತ್ತಿದ್ದೆವು. ನಡುವೆ ಎಚ್ಚತ್ತಾಗ ನನ್ನ ಮೈಮೇಲೆ ಏನೂ ಹೊದಿಕೆ ...ದಿದ್ದರೆ ಸ್ವತಃ ಎದ್ದು ಹೊಚ್ಚ ಮಲಗಿಸುತ್ತಿದ್ದರು. ಹರಿಜನ ಮಕ್ಕಳೆಂದರೆ ನಲಿದಾಡುತ್ತಿದ್ದರು.

... ಆಶ್ರಮದಲ್ಲಿ 4 ಗಂಟೆಗೆ ಏಳುವ ನಿಯಮ. ಆಗ್ಗೆ ಗಂಟೆ ಹೊಡೆಯುತ್ತಿದ್ದರು. ಆ ...ಟೆಯ ಸಪ್ಪಳ ಕೇಳಿ ನಾನೆದ್ದರೆ, ಏಳಬೇಡ, ಮಲಗಿಕೋ, ಅರ್ಧನಿದ್ರೆಯಾಗುವುದು ...ದು ಬೆಚ್ಚಗೆ ಮಲಗಿಸಿ ಪ್ರಾರ್ಥನೆಗೆ ಹೋಗುತ್ತಿದ್ದರು. ನನ್ನಷ್ಟಕ್ಕೆ ನಾನೇ ಎದ್ದರೆ, ಎದ್ದೆಯಾ? ಹೋಗು ಮೋರೆ ...ಳಕೊ. ಶೌಚಕ್ಕೆ ಹೋಗು. ನಾಸ್ತಾ ಮಾಡು. ನಾಸ್ತದ ಗಂಟೆ ಹೊಡೆಯಿತು ಅನ್ನುತ್ತಿದ್ದರು. ನಾಸ್ತಾ ಮಾಡಿಬಂದ ...ಲೆ ಪೂಜ್ಯ ಬಸಸಾಲಿ ಭಾಯಿಯವರಿಗೆ ತಿಳಿಸಿದ್ದೇನೆ, ಅವರಲ್ಲಿ ಹಿಂದಿ ಕಲಿ ಮತ್ತು ಅಷ್ಟು ಚೆನ್ನಾಗಿ ಹಿಂದಿ ...ವಂತೆ ಹಿಂದಿ ಕಲಿ, ನಾನು ಒಂದು ತಾಸು ಕಲಿಸಿದ್ದು ನಿನಗೆ ಅಷ್ಟು ಚೆನ್ನಾಗಿ ತಿಳಿಯುವುದಿಲ್ಲ ಎಂದು ಅವರ ...ತ್ತರ ಕಳಿಸುತ್ತಿದ್ದರು.




ಆಮೇಲೆ 12 ಕ್ಕೆ ಊಟದ ಗಂಟೆ ಹೊಡೆಯುತ್ತಿತ್ತು, ಅಷ್ಟರಲ್ಲಿ ಸ್ನಾನ, ಹಿಂದಿ ಕಲಿಯುವುದು, ಪಾಯಖಾನೆ ಕೆಲಸ, ಕಾಯಿಪಲ್ಯೆ ಹೆಚ್ಚುವ ಕೆಲಸ ಇವೆಲ್ಲ ಮುಗಿಸಿ ಊಟಕ್ಕೆ ಕೂಡಬೇಕು. ಆದರೂ ನಮ್ಮ ಕೂಡ ಕೂಡುತ್ತಿದ್ದರು. ನನ್ನನ್ನು ತಮ್ಮ ಹತ್ತಿರ ಕೂಡಿಸಿಕೊಳ್ಳುತ್ತಿದ್ದರು. ಯಾರಾದರೂ ಅತಿಥಿಗಳು ಅವರ ಭೆಟ್ಟಿಗೆ ಬಂದಾಗ್ಗೆ ಬಾಪೂ, ನಿಮ್ಮ ಕೈಯಿಂದ ನನಗೆ ಪ್ರಸಾದ ಕೊಡಿರಿ ಎಂದು ಕೇಳಿದರೆ ನನ್ನ ಕೈಯಿಂದ ಹಣ್ಣು ಕೊಡಿಸುತ್ತಿದ್ದರು. ನೀವೇ ಸ್ವತಃ ಕೊಡಿರಿ ಎಂದು ಅತಿಥಿಗಳು ಕೇಳಿದರೆ ಈ ಹಣ್ಣೇ ಪವಿತ್ರ. ಇದರಲ್ಲಿ ದೇವರಿರುವನು. ಈ ಹುಡುಗಿ ಯಾರೆಂದು ಕೇಳುವಿರಾ? ನನ್ನ ಪ್ರೀತಿಯ ಮಗಳು. ಹರಿಜನ ಹುಡುಗಿ ನಿಮಗೆ ಮೆಚ್ಚಿಗೆ ಇರುವುದಿಲ್ಲವೋ ಎಂದು ಗಾಂಧೀಜಿ ಹೇಳಿದರೆ ಅತಿಥಿಗಳು ಭಕ್ತಿಭಾವದಿಂದ ಒಪ್ಪಿ ನನ್ನ ಕೈಯಿಂದಲೇ ಹಣ್ಣು ತಕ್ಕೊಳ್ಳುತ್ತಿದ್ದರು.

ಮೇ ತಿಂಗಳು ಅಲ್ಲಿ ಬಿಸಿಲು ಬಹಳ. ಆಶ್ರಮದಲ್ಲಿದ್ದ ಹೆಣ್ಣುಮಕ್ಕಳು ನಾಮುಂದೆ ನೀಮುಂದೆ ಎಂದು ಜಗಳಾಡುತ್ತಾ ಬಾಪೂರವರಿಗೆ ಬೀಸಣಿಕೆ ಬೀಸುತ್ತಿದ್ದರು. ಅವರ ಜಗಳ ನೋಡಿ ಬಾಪೂ ನೀವಾರೂ ಜಗಳಾಡಬೇಡಿರಿ. ಆ ಕೆಲಸ ವೀರಮ್ಮನದು. ಆಕೆಗೆ ಒಪ್ಪಿಸಿದ್ದೇನೆ. ಆಕೆಯೇ ಗಾಳಿ ಬೀಸಲಿ ಎಂದು ಅವರು ಅಂದಕೂಡಲೇ ಎಲ್ಲಾ ಹೆಣ್ಣುಮಕ್ಕಳು ಏನೂ ಮಾತಾಡದೆ ಸುಮ್ಮನಾಗಿ ನನಗೆ ಬಿಟ್ಟು ಕೊಡುತ್ತಿದ್ದರು. ನಾನೇ 2 ತಾಸು ಗಾಳಿ ಹಾಕುತ್ತಿದ್ದೆ. ಅವರೇನು ಗಾಳಿ ಬೀಸಿರಿ ಅನ್ನುತ್ತಿದ್ದಿಲ್ಲ. ನಮ್ಮ ನಮ್ಮ ಪ್ರೇಮಕ್ಕಾಗಿ ಗಾಳಿ ಹಾಕುತ್ತಿದ್ದೆವು.


ತಿರುಗಾಡಿ ಬಂದ ಮೇಲೆ ನನ್ನ ಕೂಡ ಅರ್ಧ ತಾಸು ಆಟ, ಅಣಗಿಸುವುದು ಮತ್ತು ಕಥೆ ಹೇಳುವುದು, ತಾವು ಸಣ್ಣವರಿರುವಾಗ ಅವರ ತಾಯಿ ಅವರಿಗೆ ಹೇಗೆ ಪ್ರೇಮ ಮಾಡುತ್ತಿದ್ದರೋ ಅದೆಲ್ಲಾ ನನಗೆ ಹೇಳುತ್ತಿದ್ದರು. ಒಟ್ಟು ನನ್ನನ್ನು ಬಿಟ್ಟು ಒಂದು ತಾಸೂ ಇರುತ್ತಿರಲಿಲ್ಲ. ಆಗ್ಗೆ ನಾನು 13-14 ವರ್ಷದ ಬಾಲೆ. ಪತಿಯು 'ಮಾಡು ಇಲ್ಲವೇ ಮಡಿ' ಎಂಬ ಮಾತಿನಂತೆ ಸತ್ಯಾಗ್ರಹಕ್ಕೆ ಹೋಗಿದ್ದರು. ಅವರು ಬರುವತನಕ ತಮ್ಮ ಮುದ್ದುಮ ಗಳಂತೆ ನನ್ನನ್ನು ತಮ್ಮ ಹತ್ತಿರ ಗಾಂಧೀಜಿ ಇಟ್ಟುಕೊಂಡಿದ್ದರು. ಪತಿಯು ಬಂದನಂತರ ಅವರಿಗೆ ನನ್ನನ್ನು ಒಪ್ಪಿಸಿದರು. ನೋಡು ಕರಿಯಪ್ಪಾ, ಈ ಮಗ ಳನ್ನು ದೇವರು ಒಪ್ಪುವಂತೆ ನಿನ್ನ ಧರ್ಮಪತ್ನಿಯನ್ನಾಗಿ ಮಾಡಿಕೊಂಡು ಸರ್ವ ರೀತಿಯಿಂದಲೂ ಯೋಗಕ್ಷೇಮ ತಕ್ಕೊಳ್ಳಬೇಕು. ಯಾವ ರೀತಿಯಿಂದಲೂ ಕಷ್ಟಕ್ಕೆ ಹಾಕದಿರು ಎಂದು ಆಶೀರ್ವದಿಸಿ ನಮ್ಮಿಬ್ಬರನ್ನು ಕಳಿಸಿದರು ಮತ್ತು ನನಗೆ ಹೇಳಿದರು. ವೀರಮ್ಮಾ, ನಿನಗೆ ಕಷ್ಟವಾದಾಗ್ಗೆ ನನಗೆ ಪತ್ರ ಬರೆಯುತ್ತಿರು ಎಂದು.

-ವೀರಮ್ಮಾ ಎರೇಸೀಮಿ



-ಆಗಸ್ಟ್ 30, 1995

ಮಠಕ್ಕಿಂತ ಮಾರಿಷಸ್ ಸೇಫಾ?



ಎಚ್.ಎಲ್. ಕೇಶವಮೂರ್ತಿ

ಅಣಕ

'ತಾತಾ ತಾತಾ ಟೂರೋಗನ ತಾತಾ' ಅಂತ ಮೊಮ್ಮಕ್ಳು ತಾತನ ಸುತ್ತ ಕುಣಿಯುತ್ತಾ ಪೀಡಿಸಿದವು. ತನ್ನ ವಂಶದ ಕುಡಿಗಳ ಆಸೆ ಪೂರೈಸಬೇಕು ಅನ್ನೊ ಚಪಲ ತಾತನಿಗೂ ಇತ್ತು. ಆದರೆ ಕೆಲಸದ ನಡುವೆ ಪುರುಸೊತ್ತೇ ಆಗ್ತಿರಲಿಲ್ಲ. 'ಆಗಲಿ ಪುಟಾಣಿಗಳೆ ಹೋಗಾನಂತೆ. ಈಗ ನಿಮಗೆ ಸ್ಕೂಲ್ ಶುರುವಾಗಿದೆಯಲ್ಲಾ... ರಜ ಬಂದಾಗ ಹೋಗಾನಂತೆ' ಅಂತು ತಾತ. 'ಹೋಗು ತಾತಾ ನೀನು ಯಾವಾಗಲೂ ಹಿಂಗೆ ಹೇಳ್ತೀಯ' ಅಂತ ಹೈಕ್ಳು ಮುಖ ಊದಿಸಿಕೊಂಡು, ಅಳುಮೋರೆ ಮಾಡಿಕೊಂಡೊ. ಅದ ನೋಡಿ ತಾತನ ಕರುಳು ಚುರುಕ್ ಅಂತು. ಹೂವಿನಂತ ಮನಸ್ಸಿನ ಮಕ್ಕಳನ್ನು ನೋಯಿಸಿದೆನಲ್ಲ ಅಂತ ನೊಂದುಕೊಂಡಿತು. 'ಅಳಬ್ಯಾಡಿ ಕಂದಮ್ಮಗಳ ಹೋಗಾನಂತೆ' ಅಂತು. 'ತಾತಾ ಒಪ್ಕಂತು, ತಾತ ಒಪ್ಕಂತು' ಅಂತ ಹೈಕ್ಳು ಕುಣಿದು ಕುಪ್ಪಳಿಸಿದೊ. ತಾತನಿಗೆ ಇವತ್ತು ನನ್ನ ಜನ್ಮಸಾರ್ಥಕ ಆಯ್ತು ಅನ್ನಿಸಿತು. 'ಎಲ್ಲಿಗೋಗಾನ ಪುಟಾಣಿಗಳೆ' ಅಂತ ಕೇಳ್ತು ತಾತ. ಅದ್ಯಾರು ಮಾರಿಷಸ್ ಹುಳಾವ ತಲೆ ಒಳಕ್ಕೆ ಬುಟ್ಟಿದ್ರೊ ಏನೋ 'ಮಾರಿಷಸ್‌ಗೆ ಮಾರಿಷಸ್‌ಗೆ' ಅಂತ ಕೋರಸ್ ಹಾಕ್ದೊ. 'ನಡೀರಿ ಹೋಗಾನ' ಅಂತ ತಾತಾ ಮಾರಿ ಷಸ್‌ಗೆ ಟೂರ್ ಹಾಕ್ತು.

ಸನ್ಮಾನ್ಯ ಯಡ್ಯೂರಪ್ನೋರು ಮಾರಿಷಸ್‌ಗೆ ಟೂರ್ ಹೊರಟಿದ್ದರ ಹಿನ್ನೆಲೆ ಇದು. ಇದ ತಗಂಡು ಕತೆಕಟ್ಟಿ, ಬಣ್ಣ ಬಳಿದು ನಾಟಕ ಆಡ್ತಾ ಕುಂತವ್ರಲ್ಲ ಇದ್ಕೇನೇಳಾನ. ಕತೆ ಹೆಣೆಯೋರು ಹೆಣೆದ್ರು ಜನ ನಂಬೊ ಅಂತನಾದ್ರೂ ಎಣೇಬಾರ್ದ. ಅದೂ ಬರ್ದು ಅವ್ರೆ. ಅವರು ಹೋಗಿರೋದು ತಾನು ಕೊಳ್ಳೆ ಹೊಡ್ದಿರೋ ದುಡ್ಡ ಅಲ್ಲಿನ ಬ್ಯಾಂಕಲಿ ಇಡಾಕೆ ಅಂತಾರೆ. ಅರೆರೆ ಇಂತಾದ್ಕೆಲ್ಲ ಸ್ವಿಟ್ಜರ್‌ಲೆಂಡು ಫೇಮಸ್ ಅಲ್ವ ಅಂದ್ರೆ ಮಾರಿಷಸ್ಸೂ ಅದ್ರಂಗೇ ಅದೆ ಅಂತಾರೆ. ಮಸಲ ಯಡ್ಯೂರಪ್ನೋರು ಭ್ರಷ್ಟಾಚಾರದ ಹಣಾನ ಭದ್ರ ಮಾಡಬೇಕು ಅಂತಿದ್ರೂ ಅಂತಾನೆ ಅಂದ್ಕಳಾನ. ಇದ್ಕೆ ಮಾರಿಷಸ್ಸೇ ಯಾಕೆ ಬೇಕು ಅಂತೀನಿ. ನಮ್ಮ ಮಠಗಳೇನು ಹಾಳಾಗಿದ್ದಾವಾ? ಅಲ್ಲಿನ ಬ್ಯಾಂಕುಗಳಂಗೆ ಇವು ಸೇಫಲ್ಲ ಅಂದ್ರೆ ಮಠಾಧೀಶರ ಪ್ರಾಮಾಣಿಕತೆಯನ್ನೇ ಸಂಶಯಿಸಿ ದಂಗಾಯ್ತದಪ್ಪ! ಅಲ್ಲದೆ ಈಗಿನ ಮಠಗಳು ಅಂದ್ರೆ ಓಬೀರಾಯನ ಕಾಲದ ಮಠಗಳಿದ್ದಂಗಲ್ಲ. ಎಲ್ಲಾ ಹೈಟೆಕ್ ಆಗವೆ. ವ್ಯವಹಾರವೆಲ್ಲ ಠಾಕು ಠೀಕಾಗಿರ್ತವೆ. ಮತ್ತೆ ಇಲ್ಲಿ ಹಣ ಇಡೋದು ದುಬಾರೀನೂ ಅಲ್ಲ. ಕಪ್ಪು ಹಣ ಬಿಳಿ ಮಾಡಬೇಕು ಅಂತ ಆದಾಯ ತೆರಿಗೆ ಇಲಾಖೆಯ ಹತ್ತಿರಹೋದರೆ ಇದು ಎಲ್ಲಿಂದ ಬಂತು? ಹೇಗೆ ಬಂತು? ಅಂತ ಕೆಲ್ಸಕ್ಕೆ ಬಾರದ್ನೆಲ್ಲ ಕೇಳ್ತವೆ. ಸುಳ್ಳುಸುಳ್ಳು ಹೇಳಿ ಒಪ್ಸಿದ್ರಿ ಅನ್ನಿ. ಹಾಳಾದೋವು ಅರ್ಧಕ್ಕರ್ಧಾನ ತೆರಿಗೆ ಅಂತ ಹಿಡ್ಕೊಂತಾವೆ. ಅದೇ ಮಠಗಳಲ್ಲಾದ್ರೆ ಈ ತಂಟೆ ತಕರಾರೇ ಇರಲ್ಲ. ಕೊಟ್ಟ ದುಡ್ಡ ಎಣಿಸೋಕೂ ಹೋಗಲ್ಲ. ತಗ್ದು ಕೃಷ್ಣನ ಲೆಕ್ಕಕ್ಕೆ ಜಮಾ ಮಾಡಿಕೊಳ್ತವೆ. ಬೇಕು ಅಂದಾಗ ಕೊಡ್ತವೆ. ಆದರೆ ಒಂದು. ಆದಾಯ ತೆರಿಗೆ ಇಲಾಖೆಯಂಗೆ ಕಟುಕರಲ್ಲ ಮಠಗಳು. ಅವರಾದ್ರೆ ಅರ್ಧಕ್ಕರ್ಧನೆ ತೆರಿಗೆ ಅಂತ ಹಿಡ್ಕಂತಾರಲ್ವಾ. ಇವರು ಅಷ್ಟು ಮೋಸ ಇಲ್ಲ. ತೆರಿಗೆ ಹಣದಲ್ಲಿ ಅರ್ಧವನ್ನು ಮಾತ್ರ ಗುರುಕಾಣಿಕೆ ಅಂತ ಮಠಾಧೀಶರಿಗೆ ಅರ್ಪಿಸಿದರೆ ಸಾಕು. ಅಲ್ಲಿಗೆ ಗುರುಗಳ ಆಶೀರ್ವಾದವೂ ದೊರೆತಂತಾಯ್ತು, ಹಣವೂ ಉಳಿದಂಗಾಯ್ತು! ಇದಬುಟ್ಟು ಮಾರಿಷಸ್‌ಗೆ ಹೋಗವ್ರೆ ದುಡ್ಡ ಮಡ್ಗಾಕೆ ಅಂದ್ರೆ ಯಾರಾದ್ರೂ ನಂಬುವಂತ ಮಾತೆ ಅಂತೀನಿ. ಅದೂ ಅಲ್ದೆ ವಿದೇಶದಲ್ಲಿರೋ ಕಪ್ಪುಹಣ ವಾಪಸ್ಸು ತನ್ನಿ ಅಂತಾವ ಬಿಳಿ ಬಟ್ಟೆಯೋರು, ಕಾವಿ ಧರಿಸಿರೋರು ಎಲ್ಲಾ ಕೂಗಾಡ್ತಾ ಬಿದ್ದವ್ರೆ. ಆದಂಗಾಗ್ಲಿ ತಂದೇಬುಡಾನ ಅಂತ ಕೇಂದ್ರ ಸರ್ಕಾರ ಹೊಂಟೇಬುಡ್ತು ಅನ್ನಿ. ಆಗ ಆದುಡ್ನೆಲ್ಲ ತರ್ಪಣ ಬುಟ್ಟಂಗೆ ಅಲ್ವಾ. ಮಸಲ ಸ್ವಾಮಿಗಳೂ ಈ ದುಡ್ಡಿಗೆ ನಂಜನಗೂಡಿನ ಮೇಠಿಗೆ ಹಚ್ಚಿದರು ಅಂತಾನೆ ಇಟ್ಕಳಾನ. ಗುರು ಕಾಣಿಕೆ ನೀಡ ದಂಗಾಯ್ತು ಅನ್ನೊ ಸಮಾಧಾನವಾದರೂ ಇರುತ್ತೆ. ಅಲ್ಲಿಟ್ರೆ ಅದೂ ಇರೋಲ್ವೆ!

ಇಂತಾ ಕತೇನೆಲ್ಲ ಜನಾ ನಂಬಾಕಿಲ್ಲ ಅಂತ ಗೊತ್ತಾಯ್ತೊ ಇಲ್ವೊ. ಇನ್ನೊಂದು ಕತೆ ಕಟ್ಟವ್ರೆ. ಲೋಕಾಯುಕ್ತರು ಅದೆಂತದೋ ಗಣಿ ಹಗರಣ ವರದಿ ಕೊಡ್ತಾರಂತಲ್ಲ ಅದ್ರಲಿ ಯಡ್ಯೂರಪ್ನೋರ ಹೆಸರೂ ಇದ್ದತ್ತಂತೆ. ಅದ್ಕೆ ತರಗಟ್ಕೊಂಡು ನಡುಗ್ತಾ ಮಕ್ಳು ಮರಿ ಎಲ್ಲಾನೂ ಕರ್ಕೊಂಡು ಮಾರಿಷಸ್‌ನಲ್ಲಿ ತಲೆ ಮರೆಸಿಕೊಂಡವರಂತೆ. ಅದೂ ಹೆಂಗೆ ಅಂತ ಗೊತ್ತಾ? ಮಹಾಭಾರತದಲ್ಲಿ ಭೀಮನಿಗೆ ಹೆದರಿ ದುರ್ಯೋಧನ ವೈಶಂಪಾರ್ಯ ಸರೋವರದಲ್ಲಿ ಅಡಗಿಕೊಂಡಿದ್ನಲ್ಲ ಹಂಗಂತೆ. ಯಡ್ಯೂರಪ್ನೋರು ಇಂತ ವರದಿಗಳ ಸಾವಿರ ಕಂಡವ್ರೆ. ಹೇಡಿ ದುರ್ಯೋಧನನಂಗೆ ನೀರೊಳ್ಗೆ ಅವಿತುಕೊಂಡಿಲ್ಲ ಕಣ್ರೀ ಅವರು. ರಾಜಾರೋಷವಾಗಿ ಕುಟುಂಬದವರೊಡನೆ ಮಾರಿಷಸ್ ಬೀಚಲ್ಲಿ ಖುಷಿಖುಷಿಯಾಗಿ ಓಡಾಡ್ತ ಅವ್ರೆ. ದಂಡಿಗೆದರಲ್ಲ ದಾಳಿಗೆ ಹೆದರಲಿಲ್ಲ ದಾಸಯ್ಯ ಕೊಣಮಿಣಿಗೆ ಹೆದರಿದ್ರು ಅನ್ನಂಗಾಯ್ತದಪ್ಪ ಇವರ ಕತೆ ಕೇಳ್ತಾ ಇದ್ರೆ.

ಇನ್ನೂ ಒಂದು ತಮಾಷೆ ಇದೆ. ಲೋಕಾಯುಕ್ತರ ವರದಿ ಸೋರಿಕೆ ಆಯ್ತಲ್ಲ ಅದ್ಕೂಇದ್ಕೂ ನೆಂಟಸ್ತನ ಹೊಸೀತಾ ಕುಂತವ್ರೆ. ರೀ ಸಿದ್ಧರಾಮಯ್ಯನವರೆ ನೀವು ಕಾಂಗ್ರೆಸ್ಸಿನ್ನೋರು; ಕಾಂಗ್ರೆಸ್ಸಿನೋರ್ಗೆ ಮಾತಾಡೊ ಚಪಲ. ಚಪಲ ಅಂತ ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ನೆಂಟಸ್ತನ ಬೆಳೆಸೋರು ಕಣ್ರೀ ನೀವು ಅಂದ್ರೆ ಇಲ್ವಂತೆ. ವರದಿ ಸೋರಿಕೆ ಆಗೋಕೆ ಯಾರೋ ಲೋಕಾಯುಕ್ತರ ಫೋನ್ ಕದ್ದು ಕೇಳಿಸಿಕೊಂಡವರೇ ಹಿಂಗೆ ಮಾಡಿದ್ದರಂತೆ. ಅದೂ ಎಲ್ಲಿ ಆಗಿದ್ದಾತು ಅಂದ್ರೆ ಡಾಲರ್ಸ್ ಕಾಲೋನಿ ಮನೆ ನೆಲಮಾಳಿಗೇಲಿ ಹಂಗೇ ಚಾಮರಾಜಪೇಟೆ ಒಂದು ಮನೇಲಿ ಅಂತಾರೆ. ಅಲ್ಲ ಡಾಲರ್ಸ್ ಕಾಲೋನಿಯಲ್ಲಿ ನೆಲಮಾಳಿಗೆ ಇರೋದು ಒಂದೇ ಮನೇಲಾ? ಹಂಗೇ ಚಾಮರಾಜಪೇಟೇಲಿ ಸಾವಿರಾರು ಮನೆ ಅವೆ. ಇವ್ರೇ ಮಾಡವ್ರೆ ಅಂತ ಹೆಂಗೇಳ್ತೀರಿ ಅಂದ್ರೆ ಅವರೇಯ ನಂಗೊತ್ತು ಅಂತಾರೆ. ಯಡ್ಯೂರಪ್ನೋರು ಡಾಲರ್ಸ್ ಕಾಲೋನಿಯಲ್ಲಿ ಮನೆ ಮಾಡಿದ್ದು, 'ಕೇಶವಕೃಪ'ವನ್ನು ಚಾಮರಾಜಪೇಟೆಯಲ್ಲಿ ಕಟ್ಟಿಸಿದ್ದೇ ಅಪರಾಧ ಅನ್ನೊ ಹಂಗೆ ಮಾತಾಡ್ತಾರೆ. ಅಲ್ಲ ಕಣ್ರಿ ಸಿದ್ಧರಾಮಯ್ಯನೋರೆ ಯಡ್ಯೂರಪ್ನೋರ್ರೂ, ಆರೆಸ್ಸೆಸ್ನೋರ್ರೂ ಹಿಂಗೆ ಜಾಡುಸ್ತಾ ಕುಂತಿದೀರಲ್ಲ ಫೋನ್ ಇಂತ ಕಡೆ ಟ್ಯಾಪ್ ಮಾಡವ್ರೆ ಅಂತ ನಿಮಗೆ ಹೆಂಗೆ ಗೊತ್ತಾಯ್ತು? ಸಂತೋಷ್ ಹೆಗ್ಡೆ ಅವರು ಬಾಯಿ ಬಿಟ್ಟದ್ದಕ್ಕೆ ತಾನೆ. ಅವರೇ ಯಾಕೆ ಸುಳ್ಳು ಹೇಳಿರಬಾರದು.....!

ಬಳ್ಳಾರಿ ರಿಪಬ್ಲಿಕ್!

ಇದು ತುಂಬ ಅನ್ಯಾಯ.

ಯಡ್ಯೂರಪ್ನೋರ ಹೆಸರು ಗಣಿ ಹಗರಣದಲ್ಲಿ ಪ್ರಮುಖ ಆಗಿ ಕೇಳಿಬರುತ್ತಿದೆ. ಆದರೆ ಅವರು ಬಂದೂ ಗಣಿ ಲೈಸೆನ್ಸ್ ನೀಡಿಲ್ಲ!

ಲೈಸೆನ್ಸ್ ದುರುಪಯೋಗ ಆಗಿರಬಹುದು. ಅದಕ್ಕೆ ಅವರು ಹೊಣೆ ಅಲ್ಲ!

ರೆಡ್ಡಿ ಬ್ರದರ್ಸ್ ಬಳ್ಳಾರಿ ರಿಪಬ್ಲಿಕ್ ಕಟ್ಟಿದರು.

ಶಕ್ತಿ ಇತ್ತು, ಯುಕ್ತಿ ಇತ್ತು ಕಟ್ಟಿದರು.

ಕೈಲಾಗದವರು ಅದಕ್ಕೂ ಮೈ ಪರಚಿಕೊಳ್ಳುತ್ತಾರೆ.

ಬೆಂಗಳೂರಿನಲ್ಲಿ ಒಂದು ಜಾಗ ಇತ್ತು, ರೆಡ್ಡಿ ಬ್ರದರ್ಸ್ ಕಣ್ಣಿಗೆ ಅದು ಬಿತ್ತು. ಅದರ ಮೇಲೆ ಖಾಯಶ್ಯಾಯಿತು ತಮಗೆ ಚಂದ ಕಾಣಿಸಿದ್ದನ್ನು ಬಡಪೆಟ್ಟಿಗೆ ಬಿಡುವುದು ಅವರ ಸ್ವಭಾವ ಅಲ್ಲ.

ಈ ಜಾಗ ಯಾರದ್ದು ಎಂದು ವಿಚಾರಿಸಿದರು.

ಯಡ್ಯೂರಪ್ಪನವರ ಮಕ್ಕಳದ್ದು ಎಂದು ತಿಳಿಯಿತು.

'ರೇಟೆಸ್ಟು?' ಅಂದ್ರು.

'ಇಪ್ಪತ್ತು ಕೋಟಿ' ಅಂತ ತಿಳೀತು.

ಮಾರುಕಟ್ಟೆ ಬೆಲೆ ಒಂದು ಕೋಟಿ ಇತ್ತಂತೆ.

ಹಣ ಮುಖ್ಯ ಅಲ್ಲ. ತಮ್ಮ ಖಾಯಿಷ ಜಾಗ ಸಿಗಬೇಕು ಅದು ಮುಖ್ಯ. ಹಣ ಬಿಸಾಕಿದರು. ಬರೆಸಿಕೊಂಡರು.

ಕಾನೂನು ಮೀರಿ ಯಾವ ವ್ಯವಹಾರವೂ ನಡೆದಿಲ್ಲ.

ಇದು ಭ್ರಷ್ಟ ವ್ಯವಹಾರ ಅಂತೆ!

ಜಿಂದಾಲ್ ಅಂದರೆ ಸಾಮಾನ್ಯ ಕುಳ ಅಲ್ಲ.

ದಾನ ಮಾಡುವುದು ಅವರ ವೃತ್ತಿಧರ್ಮ!

ಶಿವಮೊಗ್ಗದಲ್ಲಿ ಒಂದು ಟ್ರಸ್ಟ್ ಇತ್ತು. ಪ್ರೇರಣಾ ಟ್ರಸ್ಟ್ ಎಂಬುದು ಅದರ ಹೆಸರು. ಸುತ್ತಲಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ಮಹತ್ವಾಕಾಂಕ್ಷೆಯಿಂದ ಸ್ಥಾಪಿತವಾದ ಟ್ರಸ್ಟ್ ಅದು. ಅವರು ತಮ್ಮ ಉದ್ದೇಶ ಹೇಳಿದರು. ಜಿಂದಾಲ್ ಕೋಟಿ ಕೋಟಿ ಹಣ ನೀಡಿತು.

ಎಷ್ಟೇ ಆಗಲಿ ಧರ್ಮ ನೀಡುವ ಕೈ ಅದು!

ನಂತರ ಅವರಿಗೆ ತಿಳಿಯಿತಂತೆ ಇದು ಯಡ್ಯೂರಪ್ಪನವರ ಕುಟುಂಬದ ಟ್ರಸ್ಟ್ ಅಂತ!

ಯಾವ ಭಗವಂತನ ಪ್ರೇರಣೆಯೋ ತಿಳಿಯದು ಪ್ರೇರಣಾ ಟ್ರಸ್ಟ್‌ಗೆ ಕೋಟಿಕೋಟಿ ದೇಣಿಗೆ ಹರಿದು ಬಂತು.

ದೇಣಿಗೆ ಪಡೆಯುವುದು ಅಪರಾಧ ಅಲ್ಲ. ಹಿಂದಿನವರೂ ಹೀಗೆ ಮಾಡಿದ್ದಾರೆ. ನಾವು ಅದನ್ನು ಮುಂದುವರೆಸಿದ್ದೇವೆ ಅಷ್ಟೇ!


ಇದು ಯಡ್ಯೂರಪ್ಪನವರ ಸಮಜಾಯಿಷಿ.

ದೇಣಿಗೆ ನೀಡಿದವರಿಗೆ ಸರ್ಕಾರ ಸಹಾಯ ಮಾಡಿಲ್ಲವೇ?

'ಖಂಡಿತ ಇಲ್ಲ' ಅನ್ನುತ್ತಾರೆ ಯಡ್ಯೂರಪ್ಪ.

ನಿಜವೇ ಇರಬೇಕು. ಯಾಕೆಂದರೆ ಅವರ ಹೇಳಿಯಂತೆಯೇ 'ಒಂದೂ ಗಣಿ ಲೈಸೆನ್ಸ್ ನೀಡಿಲ್ಲ!' ಜನಾರ್ದನ ರೆಡ್ಡಿ ಪ್ರಕಾರ 'ಓಬಳಾಪುರಂ ಕಂಪನಿ ರಾಜ್ಯದಲ್ಲಿ ಗಣಿಗಾರಿಕೆ ನಡೆಸುತ್ತಿಲ್ಲ!'

ರಾಮರಾಜ್ಯ ಅಂದರೆ ಇದೇ ಇರಬೇಕು!



ಶೌರಿಯವರ ಮಗನ ಕತೆ ಮನ ಕಲಕಿತು...

ಕೆಂಡಹಾಗೆ ಅಂಕಣದಲ್ಲಿ ಗೌರಿ ಲಂಕೇಶ್ ಬರೆದ 'ಬುದ್ಧಿಮಾಂದ್ಯ ಮಗನ ಬಗ್ಗೆ ಶೌರಿ ಬರೆದಿದ್ದು...' ಓದಿ ಕಣ್ಣಾಲಿಗಳು ತುಂಬಿಬಂದವು. ವ್ಯಕ್ತಿಯ ಬದುಕು ವಿಕಸನಗೊಳ್ಳಲು ಮನೆಯ ವಾತಾವರಣ ಹೆಚ್ಚು ಪ್ರಭಾವ ಬೀರುವುದರಲ್ಲಿ ಸಂಶಯವಿಲ್ಲ. ಶೌರಿಯವರ ಕೌಟುಂಬಿಕ ಬದುಕು ಅಷ್ಟೊಂದು ಯಾತನಾದಾಯಕವಾಗಿದ್ದರೂ. ಅದನ್ನು ಸಹಿಸಿಕೊಂಡು ಪತ್ರಿಕಾರಂಗದಲ್ಲಿ ಮಾಡಿದ ಸಾಧನೆ ಎಲ್ಲರೂ ಮೆಚ್ಚುವಂಥದ್ದು. 'ಭಗವಂತನಿಗೆ ತಾಯಿಯ ಹೃದಯ ಅರ್ಥವಾಗುತ್ತದೆಯೇ? ನೋವು ಹೇಗೆ ಧರ್ಮಗಳನ್ನು ನಿರಾಕರಿಸುತ್ತದೆ' ಎನ್ನುವ ಪುಸ್ತಕದ ಶೀರ್ಷಿಕೆಯನ್ನು ಗಮನಿಸಿದಾಗಲೇ ಅದರ ಆಳ-ಅಂತಃಕರಣ ಅರ್ಥವಾಗುತ್ತದೆ. ವಿಧಿ ಎಲ್ಲರ ಬದುಕಿನಲ್ಲೂ ಆಟವಾಡುತ್ತದೆ. ಎಲ್ಲ ಸಿಕ್ಕಿತು ಎನ್ನುವಾಗ ಇನ್ನೇನೋ ಮಾಯವಾಗುತ್ತದೆ. ಕೇವಲ ಕನ್ನಡ ಭಾಷೆಯೊಂದೇ ಗೊತ್ತಿರುವ ನಮ್ಮಂಥವರಿಗೆ ಪುಸ್ತಕದ ಆಯ್ದಭಾಗದ ಟಿಪ್ಪಣಿ ಒದಗಿಸಿ ಹಲವು ವಿಷಯಗಳ ಚಿಂತನೆಗೆ ಹಚ್ಚಿದ್ದೀರಿ. ಇಂತಹ ಶೌರಿಯವರು ಅದು ಹೇಗೆ ಕೋಮುವಾದಿ ಬಿಜೆಪಿ ಪಕ್ಷದ ಹಿಂದೆ ಬಿದ್ದರು ಎನ್ನುವುದು ಸೋಜಿಗ. ಆದರೂ ಅವರ ಚಿಂತನಾ ಲಹರಿ, ಪತ್ರಿಕಾರಂಗದ ಸಾಧನೆ ಎಲ್ಲರೂ ಒಪ್ಪುವಂತಹದ್ದು.




-ಬಸವರಾಜ ಹಳ್ಳಿ ಹಸಮಕಲ್ (ಸಿಂಧನೂರು)

ಕಳೆದ ಸಂಚಿಕೆಯಲ್ಲಿ 'ತರೀಕೆರೆ ವಿಶ್ವನಾಥನನ್ನು ಕೊಂದದ್ದು ಚಿರತೆಯಲ್ಲ, ಅರಣ್ಯ ಇಲಾಖೆ? ಎಂಬ ಲೇಖನದ ಕುರಿತು ನನ್ನ ಅಭಿಪ್ರಾಯ:

ಭದ್ರಾವತಿ ಡಿ.ಎಫ್.ಓ. ಲಿಂಗರಾಜ್ ಕಾಡಿನ ಬಗ್ಗೆ ಅಪಾರವಾಗಿ ತಿಳಿದುಕೊಂಡಿರುವ ಅಧಿಕಾರಿ. ತುಂಬಾ ಓದಿಕೊಂಡಿದ್ದಾರೆ. ಒಂದು ದಿನ ಬೆಳಗ್ಗೆ ಐದು ಗಂಟೆಗೆ ಪತ್ರಿಕೆ ಬಳಗದ ತರೀಕೆರೆಯ ಡಾ. ಗಿರೀಶ್ ಮತ್ತು ಡಾ. ಶರತ್ ನನ್ನನ್ನು ಎಬ್ಬಿಸಿಕೊಂಡು "ಕಡೂರು ತಾಲ್ಲೂಕಿನ ಬಾಸೂರು ಅಮೃತಮಹಲ್ ಕಾವಲ್ ನೋಡೋಣ. ಅಲ್ಲಿ ಜಿಂಕೆ, ಸಾರಂಗ, ಮೊಲ ಕಡವೆ ಪ್ರಾಣಿಗಳು ಇವೆ" ಎಂದು ಕರೆದುಕೊಂಡು ಹೋದರು.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಅಲ್ಲಿ ಇದೇ ಮೇಲ್ಕಂಡ ವ್ಯಕ್ತಿ ಲಿಂಗರಾಜ್ ಇದ್ದರು. ನಮಗೆ ಕಾಡಿನ ಪರಿಚಯ ಮಾಡುತ್ತಾ, ಕಾಡೊಳಗೆ ಅವರ ಸರ್ಕಾರಿ ವಾಹನವನ್ನು ಮೆಲ್ಲಗೆ ಡ್ರೈವ್ ಮಾಡಲು ಡ್ರೈವರ್‌ಗೆ ಹೇಳಿ "ನೀವು ಬಂದಿರದಕ್ಕೆ ನಾನು ಕಾಡೊಳಗೆ ಗಾಡಿ ತಗೊಂಡು ಹೋಗ್ತಿರದು. ಆದರೆ ನಾನು ಮತ್ತು ನನ್ನ ಸಿಬ್ಬಂದಿ ಯಾವುದೇ ಕಾರಣಕ್ಕೂ ಗಾಡಿ ತಗೊಂಡು ಹೋಗಲ್ಲ, ಬರೀ ವಾಕ್ ಮಾಡಿಕೊಂಡು ಹೋಗುತ್ತೇವೆ" ಎಂದರು.

ನನಗೆ ಅರ್ಥವಾಗದೆ "ಯಾಕೆ ಸಾರ್?" ಎಂದಾಗ "ನೋಡಿ, ಹಕ್ಕಿಗಳು ಮರದ ಮೇಲೆ ಗೂಡು ಕಟ್ಟುತ್ತವೆ. ಮರಿ ಮಾಡುತ್ತವೆ. ಆದರೆ ಇನ್ನಿತರೆ ಪ್ರಾಣಿಗಳು ಒಮ್ಮೊಮ್ಮೆ ಮೊಟ್ಟೆಗಳನ್ನು ನೆಲದ ಮೇಲೆ ಇಟ್ಟು ಪೋಷಣೆ ಮಾಡುತ್ತವೆ. ನಾವು ಗಾಡಿಯಲ್ಲಿ ಹೋಗುವಾಗ ಟೈರ್‌ಗೆ ಮೊಟ್ಟೆ ಸಿಲುಕಿ ಸಾಯುತ್ತವೆ. ಆದ್ದರಿಂದ ಕಾಡೊಳಗೆ ಯಾವುದೇ ಕಾರಣಕ್ಕೂ ವಾಹನ ತೆಗೆದುಕೊಂಡು ಹೋಗುವುದಿಲ್ಲ?? ಎಂದು ತಿಳಿಸಿದರು.


ನಾನು ಮೂಕವಿಸ್ಮಿತನಾದೆ. ಅವರ ಸೂಕ್ಷ್ಮತೆಯನ್ನು ಗಮನಿಸಿದೆ. ಅಷ್ಟರಲ್ಲಿ ಒಂದಷ್ಟು ಜಿಂಕೆ, ಸಾರಂಗಗಳು ಬೆದರುತ್ತಾ ಓಡಿಹೋದವು. ಅಲ್ಲೊಂದು ಮರದ ಮೇಲೆ ಪಕ್ಷಿಗಳು ಒಂದೇ ಸಮನೆ ಅರಚುತ್ತಿದ್ದವು. ನಾನು ಏನೆಂದು ಕೇಳಿದೆ. ಅದಕ್ಕವರು "ನೋಡಿ, ಮರದ ಮೇಲೆ ಪಕ್ಷಿಗಳ ಮೊಟ್ಟೆಯನ್ನು ತಿನ್ನಲು ಹಾವು ಹವಣಿಸುತ್ತಿದೆ?? ಎಂದು ತೋರಿಸಿದರು.

ಕಾಡಿನಲ್ಲಿ ಕಾಡುಮೃಗಗಳು ಅನಾಥವಾಗಿ ಕಂಡರೆ ಲಿಂಗರಾಜ್ ಅವುಗಳನ್ನು ತಂದು ಜೋಪಾನವಾಗಿ ಸಾಕಿ ಪುನಃ ಕಾಡಿಗೆ ಬಿಡುತ್ತಾರೆ. ಇದರಲ್ಲಿ ಲಿಂಗರಾಜ್ ಕೊಂಚ ತಪ್ಪು ಮಾಡಿದ್ದರೂ ಕಾಡು ಮತ್ತು ಪ್ರಾಣಿಗಳನ್ನು ವಿಪರೀತ ಪ್ರೀತಿಸುವ ಭರದಲ್ಲಿ ಇಂತದೊಂದು ಅವಘಡ ಸಂಭವಿಸಿರಬಹುದು.



ಅರಣ್ಯಾಧಿಕಾರಿ ಲಿಂಗರಾಜ್

-ಶೂದ್ರ ಸಂತೋಷ್, ಅಜ್ಜಂಪುರ



'ಸಿಂಗಂ' ಬಾಯಿಗೆ ಸಿಕ್ಕ ಬಸಂತ್!

ಬಸಂತ್ ಕುಮಾರ್ ಪಾಟೀಲ್ ಒಮ್ಮೊಮ್ಮೆ ಯಾಕಿಷ್ಟು ಪೆದ್ದುಪೆದ್ದಾಗಿ ಆಡುತ್ತಾರೋ? ಬಹುಶಃ ಭಗವಂತನಿಗೂ ಗೊತ್ತಿರಲಿಕ್ಕಿಲ್ಲ!


ಇತ್ತೀಚೆಗೆ 'ಸಿಂಗಂ' ಚಿತ್ರದಲ್ಲಿ ಕನ್ನಡಿಗರಿಗೆ ಅಪಮಾನವಾಗುವಂಥ ಅವಹೇಳನಕಾರಿ ಸಂಭಾಷಣೆ ಬಳಸಿದ್ದರ ವಿರುದ್ಧ ಭಾರೀ ಪ್ರತಿರೋಧ ವ್ಯಕ್ತವಾಗಿತ್ತಲ್ಲಾ? ಈ ಹಿನ್ನೆಲೆಯಲ್ಲಿ ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿ ನಡೆಸಿದ ರಿಲಾಯನ್ಸ್ ಬಿಗ್ ಸಿನಿಮಾ ಸಂಸ್ಥೆಯ ಉಪಾಧ್ಯಕ್ಷ ಶ್ರೀನಿವಾಸ್ "ಚಿತ್ರದಿಂದ ಕನ್ನಡಿಗರಿಗೆ, ಕನ್ನಡ ಭಾಷೆಗೆ ಆಗಿರುವ ಅವಮಾನಕ್ಕೆ ಕ್ಷಮೆ ಯಾಚಿಸುತ್ತೇವೆ" ಎಂದು ಹೇಳಿಕೆ ನೀಡಿದರು. ಚಿತ್ರದ ನಟರಾದ ಅಜಯ್ ದೇವಗನ್, ಪ್ರಕಾಶ್ ರೈ ಮತ್ತು ನಿರ್ದೇಶಕ ರೋಹಿತ್ ಶೆಟ್ಟಿ ಈ ಕ್ಷಮಾಪಣಾ ಪತ್ರಕ್ಕೆ ಸಹಿ ಹಾಕಿಕೊಟ್ಟಿದ್ದರು.

ಅದೇದಿನ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲೂ ಸಭೆ ಕರೆಯಲಾಗಿತ್ತು. ಸಭೆಯನ್ನುದ್ದೇಶಿಸಿ ಮಾತನಾಡಿದ ಛೇಂಬರ್ ಅಧ್ಯಕ್ಷ ಬಸಂತ್ ಕುಮಾರ್ ಪಾಟೀಲ್ "'ಸಿಂಗಂ' ಚಿತ್ರದಿಂದ ಕನ್ನಡ ಮತ್ತು ಕರ್ನಾಟಕಕ್ಕೆ ಆಗಿರುವ ಅವಮಾನದಿಂದ ಎಲ್ಲರಿಗೂ ನೋವಾಗಿದೆ. ಈ ಕೂಡಲೇ ರಿಲಯನ್ಸ್ ಸಂಸ್ಥೆಯವರು ಕ್ಷಮೆ ಕೇಳಬೇಕು" ಎಂದು ಆಗ್ರಹಿಸಿದರು.

ಆದರೆ ಆ ಹೊತ್ತಿಗಾಗಲೇ ರಿಲಯನ್ಸ್‌ನವರು ಕ್ಷಮೆಯಾಚಿಸಿ ಎಷ್ಟೋ ಹೊತ್ತಾಗಿತ್ತು. ತಮಾಷೆಯೆಂದರೆ 'ಸಿಂಗಂ' ಚಿತ್ರತಂಡದವರು ಅಪಾಲಜಿ ಕೇಳಿದ್ದು ಅಧ್ಯಕ್ಷ ಬಸಂತ್‌ಗೆ ಇನ್ನೂ ತಿಳಿದೇ ಇರಲಿಲ್ಲ. ಪತ್ರಕರ್ತರಿಂದ ಈ ವಿಚಾರ ತಿಳಿದು ಕಕ್ಕಾಬಿಕ್ಕಿಯಾದ ಪಾಟೀಲರು "ಹೌದಾ..? ಏನೋ.. ಒಟ್ನಲ್ಲಿ ಕ್ಷಮೆ ಕೇಳಿದ್ದರೆ ಸರಿ" ಎಂದು ಹೇಳಿ ಅನ್ಯಾಯವಾಗಿ ಅಪಹಾಸ್ಯಕ್ಕೀಡಾದರು.

ಇಂಥವರೂ ಛೇಂಬರ್ ಪ್ರೆಸಿಡೆಂಟು!

ಕಳ್ಳ-ಮಳ್ಳ-ಸುಳ್ಳ=ಕೊಬ್ರಿ ಮಂಜ



ಕೆ. ಮಂಜ ಅಲಿಯಾಸ್ ಕೊಬ್ರಿ ಮಂಜು ಅವರು ನಿರ್ಮಿಸುತ್ತಿರುವ 'ಹ್ಯಾಪಿ ಹಸ್ಬೆಂಡ್' ಚಿತ್ರದ ಹೆಸರನ್ನು ಅಮೋಘ ಮೂರನೇ ಬಾರಿಗೆ ಬದಲಾಯಿಸಲಾಗಿದೆ.

ರವಿಚಂದ್ರನ್, ರಮೇಶ್ ಮತ್ತು ವಿಜಯರಾಘವೇಂದ್ರ ಜೊತೆಯಾಗಿ ಮೊದಲ ಬಾರಿಗೆ ನಟಿಸುತ್ತಿರುವ ಈ ಚಿತ್ರಕ್ಕೆ ಆರಂಭದಲ್ಲಿ 'ಹ್ಯಾಪಿ' ಎಂಬ ಹೆಸರಿಟ್ಟಿದ್ದರು. ಅನಂತರ ಅದಕ್ಕೆ 'ಹ್ಯಾಪಿ ಹಸ್ಬೆಂಡ್' ಎಂದು ಮರುನಾಮಕರಣ ಮಾಡಲಾಯಿತು.

"ನಿಮ್ಮ ಚಿತ್ರಕ್ಕೆ ಇಂತಹ ಇಂಗ್ಲಿಷ್ ಹೆಸರಿಟ್ಟಿದ್ದರಿಂದಲೇ ಅದು ಹಾಲಿವುಡ್ ಚಿತ್ರವಿರಬಹುದೇ ಎಂಬ ಗುಮಾನಿಯಿಂದ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ನಿಮ್ಮ ಮನೆ ಮೇಲೆ ದಾಳಿ ನಡೆಸಿರಬಹುದೇ?" ಎಂದು ಮಂಜು ಅವರನ್ನು ಕೇಳಿದಾಗ ಅವರು ಜೋರಾಗಿ ನಕ್ಕರು. "ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ, ನನ್ನ ಚಿತ್ರ ನಿರ್ಮಾಣದ ಶೈಲಿ ಬದಲಾಗುವುದಿಲ್ಲ" ಎಂದು ಮಂಜು ಎದೆಯುಬ್ಬಿಸಿ ಹೇಳಿದರು.

ಆದರೆ ಈಗ ಮತ್ತೆ ಅದೇ ಚಿತ್ರದ ಹೆಸರನ್ನು 'ಕಳ್ಳ-ಮಳ್ಳ-ಸುಳ್ಳ' ಎಂದು ಮಂಜು ಬದಲಾಯಿಸಿದ್ದಾರೆ.

****


ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಕನ್ನಡದಲ್ಲಿ ನಿರ್ಮಾಣವಾಗುತ್ತಿರುವ 'ಗಾಡ್‌ಫಾದರ್' ಎಂಬ ರೀಮೇಕ್ ಚಿತ್ರಕ್ಕೆ ಸಂಗೀತ ನೀಡುತ್ತಿರುವುದು ನಿಮಗೆ ಈಗಾಗಲೇ ಗೊತ್ತಿರುವ ವಿಷಯ. ಹೊಸ ವಿಷಯ ಏನೆಂದರೆ ಈ ಚಿತ್ರದ ಸಂಗೀತ ನಿರ್ದೇಶನಕ್ಕಾಗಿ ಅವರು ಪಡೆಯುತ್ತಿರುವ ಸಂಭಾವನೆ ಒಂದು ಕೋಟಿ ಎಂಟು ಲಕ್ಷ ರೂ.ಗಳು. ಹೀಗಂತ ಬಹಿರಂಗಗೊಳಿಸಿದವರು ಆ ಚಿತ್ರದ ನಿರ್ಮಾಪಕ ಕೆ.ಮಂಜು.

ಮೊನ್ನೆ ಮೊನ್ನೆ ಆದಾಯ ತೆರಿಗೆ ಇಲಾಖೆಯ ದಾಳಿಗೆ ತುತ್ತಾಗಿದ್ದ ಮಂಜು ಇಷ್ಟು ಧೈರ್ಯದಿಂದ ತಾವು ಸಂಗೀತ ನಿರ್ದೇಶಕರಿಗೆ ನೀಡುತ್ತಿರುವ ಮೊತ್ತವನ್ನು ಹೇಳುತ್ತಿದ್ದಾರೆಂದರೆ ನಿಜಕ್ಕೂ ಅವರ ಅಭಿಮಾನಿಗಳು ಅವರಿಗೆ ನೀಡಿರುವ 'ಗಂಡುಗಲಿ' ಎಂಬ ಬಿರುದು ಸರಿಯಾದದ್ದು ಅನ್ನಿಸುತ್ತದೆ.

ಉಪೇಂದ್ರ ನಾಯಕನಾಗಿ ನಟಿಸುತ್ತಿರುವ, ತಮಿಳಿನ ಶ್ರೀರಾಮ್ ಎಂಬುವವರು ನಿರ್ದೇಶಿಸುತ್ತಿರುವ ಈ ಚಿತ್ರ ಅದ್ದೂರಿ ಎಂಬುದರಲ್ಲಿ ಸಂಶಯವಿಲ್ಲ. ಹಾಗೆಯೇ ಎ.ಆರ್.ರೆಹಮಾನ್ ನಮ್ಮ ದೇಶ ಕಂಡ ಅತ್ಯಂತ ದುಬಾರಿ ಸಂಗೀತ ನಿರ್ದೇಶಕ ಎಂಬುದರಲ್ಲೂ ಎರಡು ಮಾತಿಲ್ಲ. ಆದರೆ ನಮ್ಮ ಪ್ರಶ್ನೆ ಇಷ್ಟೆ: ರೀಮೇಕ್ ಚಿತ್ರದ ಸಂಗೀತ ನಿರ್ದೇಶನಕ್ಕೆ ಒಂದು ಕೋಟಿ ರೂ. ಸಂಭಾವನೆ ಕೊಡುವ ಅಗತ್ಯವಾದರೂ ಏನಿತ್ತು?

ಮಂಜು ಮಾತಿನ ದಾಟಿ ನೋಡಿದರೆ ಅವರೇ ಮತ್ತೊಮ್ಮೆ ಆದಾಯ ತೆರಿಗೆಯ ಇಲಾಖೆಯ ಅಧಿಕಾರಿಗಳನ್ನು ತಮ್ಮ ಮನೆಗೆ ಸ್ವಾಗತಿಸುತ್ತಿದ್ದಾರೆ ಎನಿಸುತ್ತಲ್ಲವೇ?!

ಕೋಮಲ್ ಈಗ 'ರಾಧಿಕಳ ಗಂಡ'!




'ಕೆಲ್ ಮಂಜ' ಚಿತ್ರದ ಯಶಸ್ಸಿನ ನಂತರ ಇಂಗ್ಲೆಂಡ್ ಪ್ರವಾಸ ಮಾಡಿ ಅಲ್ಲಿಯ ಕನ್ನಡಿಗರ ಹೃದಯ ಗೆದ್ದಿರುವ ನಾಯಕ ಕೋಮಲ್ ಈಗ ಹೊಸ ಚಿತ್ರವೊಂದಕ್ಕೆ ನಾಯಕನಾಗಿ ಆಯ್ಕೆಯಾಗಿದ್ದಾರೆ. ಆ ಚಿತ್ರದ ಹೆಸರು 'ರಾಧಿಕಳ ಗಂಡ.'

'ರಾಧಿಕಳ ಗಂಡ' ಎಂಬ ಹೆಸರು ಕೇಳಿದಾಕ್ಷಣ ಪ್ರೇಕ್ಷಕರ ಮನಸ್ಸಿನಲ್ಲಿ ಕನ್ನಡ ಚಿತ್ರರಂಗದಲ್ಲಿ ನಾಯಕಿಯಾಗಿ ಮೆರೆದ ರಾಧಿಕಾ ಅನಂತರ ರಾಜಕಾರಣಿ ಕುಮಾರಸ್ವಾಮಿಯವರನ್ನು ಮದುವೆಯಾದ ಸಂಗತಿಯೇ ಬರುತ್ತವೆ. ಆ ಮಟ್ಟಿಗೆ 'ರಾಧಿಕಳ ಗಂಡ' ಎಂಬ ಚಿತ್ರದ ಹೆಸರು ಜನರ ಕುತೂಹಲವನ್ನು ಕೆರಳಿಸುತ್ತದೆ.

ಆದರೆ ಈ ಚಿತ್ರದ ಕಥಾವಸ್ತು ರಾಧಿಕಾ ಮತ್ತು ಕುಮಾರಸ್ವಾಮಿಗೆ ಸಂಬಂಧಪಟ್ಟಿದ್ದೇ ಎಂಬುದನ್ನು ನಿಗೂಢವಾಗಿಡಲಾಗಿದೆ. ಚಿತ್ರ ಬಿಡುಗಡೆಯಾದ ನಂತರವೇ ಈ ಪ್ರಶ್ನೆಗೆ ಉತ್ತರ ಸಿಗಲಿದೆ.

ಹಲವು ಗಾಂಧಿನಗರಿಗಳ ಪ್ರಕಾರ ಕುಮಾರಸ್ವಾಮಿಯನ್ನು ಎದುರು ಹಾಕಿಕೊಂಡು ಚಿತ್ರ ಮಾಡುವ ಶಕ್ತಿ ನಾಯಕ ಕೋಮಲ್‌ಗೆ ಇಲ್ಲ. ಆದರೆ ಅದೇ ಗಾಂಧಿನಗರದ ಇತರೆ ಜನರ ತರ್ಕ ಕೋಮಲ್ ಅವರ ಸಹೋದರ ಜಗ್ಗೇಶ್ ಈಗ ಆಡಳಿತಾರೂಢ ಬಿಜೆಪಿ ಪಕ್ಷದಲ್ಲಿರುವುದರಿಂದ ಇಂತಹ ಸಿನಿಮಾ ಮಾಡಲು ಕೋಮಲ್‌ಗೆ ತೊಂದರೆಯಾಗದು.

ಇವರು ಡಾನ್ ರಮೇಶ್!



ಕಳೆದ ಒಂದು ವರ್ಷದಿಂದ ಅಜ್ಞಾತವಾಸದಲ್ಲಿದ್ದ ರಮೇಶ್ ಅರವಿಂದ್ ಈಗ ಮತ್ತೆ ಲೈಮ್‌ಲೈಟ್‌ಗೆ ಬರುತ್ತಿದ್ದಾರೆ. ಎಂದಿನಂತೆ ಅವರೇ ನಿರ್ದೇಶಿಸಿ ನಾಯಕನಾಗಿ ನಟಿಸುತ್ತಿರುವ ಚಿತ್ರವೊಂದನ್ನು ಆರಂಭಿಸಲಿದ್ದಾರೆ. ಅಂದಹಾಗೆ ಈ ಚಿತ್ರಕ್ಕೆ 'ನಮ್ಮಣ್ಣ ಡಾನ್' ಎಂಬ ಹೆಸರಿಟ್ಟಿದ್ದಾರೆ.

ಚಿತ್ರದ ಹೆಸರೇನೋ ಹೊಸತನದಿಂದ ಕೂಡಿದೆ. ಇನ್ನು ಚಿತ್ರದ ಕಥೆ ಕೂಡ ಈಗಿನ ಜಮಾನದ ಪಡ್ಡೆ ಹುಡುಗರಿಗೆ ಇಷ್ಟವಾಗುವಂತೆ ಇದೆಯೋ ನೋಡಬೇಕು.

ರವಿಚಂದ್ರನ್ ಅವರನ್ನು ಕಂಡರೆ ನನಗೆ ತುಂಬಾ ಭಯ!

ಕನ್ನಡ ಚಿತ್ರರಂಗದಲ್ಲಿ ನಮ್ಮವರು ಎಂದು ಉಳಿದಿರುವ ಕೆಲವೇ ಜನ ನಾಯಕಿಯರಲ್ಲಿ ನೀತೂ ಎಂಬ ಲಂಬೂಲಟಕ್ ಹುಡುಗಿಯೂ ಒಬ್ಬಳು. ಇತ್ತೀಚಿನ ದಿನಗಳಲ್ಲಿ ರಂಗಭೂಮಿ ಹಿನ್ನೆಲೆಯಿಂದ ಬಂದಿರುವ ಯಾವ ನಾಯಕನಟಿಯರೂ ಕನ್ನಡದಲ್ಲಿಲ್ಲ. ಆದರೆ, ನೀತೂ ಮಾತ್ರ ಕಿರುತೆರೆ, ಹಿರಿತೆರೆಗೂ ಮುನ್ನವೇ ರಂಗಭೂಮಿಯಲ್ಲಿ ಒಂದಷ್ಟು ದಿನ ಪಳಗಿದ ಪ್ರತಿಭೆ. ಯೋಗರಾಜ ಭಟ್ಟರ 'ಗಾಳಿಪಟ' ಚಿತ್ರದಲ್ಲಿ 'ಪಿ ಥೂ...' ಅಂದು ನಾಯಕನಟ ದಿಗಂತನಿಗೆ ಉಗಿಯುತ್ತಾ ಗಯ್ಯಾಳಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದವಳು ನೀತೂ. ಸದ್ಯ 'ಯೋಗರಾಜ್' ಚಿತ್ರದಲ್ಲಿ ನಾಯಕಿಯಾಗಿ ನಟಿಸಿ ಇನ್ನೂ ಹಲವಾರು ಚಿತ್ರಗಳಲ್ಲಿ ಮುಖ ತೋರಿರುವ ಈಕೆಯನ್ನು ಮಾತಿಗೆಳೆದಾಗ...

ಟಾಕ್ ನಿಕ್

ನೀವು ಶ್ಯಾನೆ ಉದ್ದ-ದಪ್ಪ ಇರೋದ್ರಿಂದ ಎಲ್ಲಾ ಹೀರೋಗಳೊಟ್ಟಿಗೆ ಛಾನ್ಸು ಮಿಸ್ ಆಗ್ತಿದೆ ಅನಿಸ್ತಿಲ್ವಾ? ನಿಮ್ಮ ಪರ್ಸನಾಲಿಟೀನೇ ನಿಮಗೆ ಮೈನಸ್ ಅಲ್ವೇ?

ನೀತೂ: ಏನ್ ಮಾಡೋದು ಉದ್ದಕ್ಕಿದ್ದೀನಿ ಅಂತಾ ತುಂಡ ಆಗೊಕಾಗಲ್ವಲ್ಲ...! ಇತ್ತೀಚೆಗೆ ಸ್ವಲ್ಪ ಕ್ಷಮಿಸಿ ಜಾಸ್ತಿ ದಪ್ಪ ಆಗಿರೋದೇನೋ ನಿಜ. ಅದಕ್ಕೆ ದಿನಕ್ಕೆ ಎರಡರಿಂದ ಎರಡೂವರೆಗಂಟೆ ಜಿಮ್‌ನಲ್ಲೇ ಕಾಲ ಕಳೆಯುತ್ತೀನಿ. ನನಗೆ ಉತ್ತಮ ಕಲಾವಿದೆಯಾಗಬೇಕು ಎಂಬ ಬಯಕೆಯೇ ಹೊರತು ಇಂಥ ಹೀರೋ ಜೊತೇನೇ ನಟಿಸಬೇಕು ಅನ್ನೋ ಕ್ರೇಜ್ ಇಲ್ಲ. ನನಗೊಪ್ಪುವ ಯಾವುದೇ ಉತ್ತಮ ಸಿನಿಮಾಗಳಲ್ಲಿ ನಟಿಸಬೇಕು ಅನ್ನೋದಷ್ಟೇ ನನ್ನ ಬಯಕೆ. ಅದು ಕಲಾತ್ಮಕ ಚಿತ್ರವಾದರೂ ಪರವಾಗಿಲ್ಲ, ಕಮರ್ಷಿಯಲ್ ಸಿನಿಮಾ ಆದರೂ ಪರವಾಗಿಲ್ಲ, ಹೀರೋಗಳ ಹಿಂದೆ ಬೀಳುವ ಜಾಯಮಾನ ನನ್ನದಲ್ಲ.

ಬರುತ್ತಿರುವ ಸಂಭಾವನೆ ಕಾಸು ನಿಮ್ಮ ಮೇಂಟೇನೆನ್ಸ್‌ಗೆ ಸಾಕಾಗುತ್ತಾ?


ಸಂಪಾದನೆಯೇನೋ ಸದ್ಯಕ್ಕಂತೂ ಮೋಸ ಇಲ್ಲ. ಸಿಕ್ಕಾಪಟ್ಟೆ ಖರ್ಚು ಜಾಸ್ತಿ ಇರೋದ್ರಿಂದ ಎಷ್ಟು ಬಂದ್ರೂ ಸಾಲೋದಿಲ್ಲ. ಆದರೆ ಇನ್ನೂ ಹೆಚ್ಚೆಚ್ಚು ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸಿ ಒಂದಿಷ್ಟು ಸಂಪಾದನೆ ಮಾಡಬೇಕು. ಪಾಕೆಟ್ ಮನಿ ಹೆಚ್ಚಿಸಿಕೊಳ್ಳುತ್ತಲೇ ಜನರಿಗೂ ಇನ್ನಷ್ಟು ಹತ್ತಿರವಾಗಬೇಕು...

ಮೊದಲ ಚಿತ್ರವನ್ನು ಜಗ್ಗೇಶ್ ಮತ್ತು ಕೋಮಲ್ ಜೊತೆ ನಟಿಸಿದ್ದೀರಲ್ಲಾ. ಈಗ ಮತ್ತೆ ಅವರೊಂದಿಗೆ ನಟಿಸುವ ಅವಕಾಶ ಬಂದರೆ...?

ನಿಜಕ್ಕೂ ನನಗೆ ಅವರೊಂದಿಗೆ ಮತ್ತೆ ನಟಿಸುವ ಅವಕಾಶ ಸಿಕ್ಕರೆ ಅದು ನನ್ನ ಪುಣ್ಯ ಎಂದೇ ಭಾವಿಸುತ್ತೇನೆ. ಜಗ್ಗೇಶ್ ಅವರು ನಮ್ಮ ಚಿತ್ರರಂಗದಲ್ಲಿರುವ ಅದ್ಭುತ ಕಲಾವಿದ. ಮೊನ್ನೆ ಜಗ್ಗೇಶ್ ಅವರು ಸಿಕ್ಕಾಗ "'ಎದ್ದೇಳು ಮಂಜುನಾಥಾ'ದಂಥ ಸಿನಿಮಾದಲ್ಲಿ ನೀವು ನಟಿಸಿದರೆ ಹೇಳಿ ಸರ್ ನಾನು ಹೀರೋಯಿನ್ ಆಗಿ ಆ್ಯಕ್ಟ್ ಮಾಡ್ತೀನಿ" ಎಂದು ಹೇಳಿದ್ದೇನೆ. ಕೋಮಲ್ ಕೂಡಾ ಅತ್ಯುತ್ತಮ ನಟ. ಅವರಿಬ್ಬರು ಯಾವಾಗ ಕರೆದರೂ ಹೋಗಿ ನಟಿಸಲು ಐ ಯಾಮ್ ರೆಡಿ.

ಬಜಾರಿ ಇಮೇಜ್‌ನಿಂದ ನಿಮ್ಮ ಪರ್ಸನಲ್ ಲೈಫಿಗೇನೂ ತೊಂದ್ರೆ ಆಗಿಲ್ವಾ?

'ಮೊದ್ಲು ನೀನು ತುಂಬಾ ಸೈಲೆಂಟಾಗಿದ್ದೆ, ಬಜಾರಿ ಪಾತ್ರದಲ್ಲಿ ಮಾಡಿದ ಮೇಲೆ ಮನೇಲೂ ಬಜಾರಿ ಆಗ್ಬಿಟ್ಟಿದ್ದೀಯಾ' ಅಂತ ಅಮ್ಮ ಆಗಾಗ ಹೇಳ್ತಾಇರ್ತಾರೆ. ಯೋಗರಾಜ್ ಭಟ್ರು ನನ್ನನ್ನು 'ನಿನ್ನಂಥ ಗಂಡ್‌ಮಕ್ಳು' ಎಂದೂ, ದಿಗಂತನನ್ನು 'ನಿನ್ನಂಥ ಹೆಣ್ಣುಮಕ್ಳು' ಎಂದೂ ಛೇಡಿಸುತ್ತಿರುತ್ತಾರೆ. ಆದಕ್ಕೇ ನಾನು "ಮದುವೆ ಆಗೋ ಟೈಂನಲ್ಲಿ ಹುಡುಗ ಸಿಕ್ಕಲ್ಲ ಅಂದ್ರೆ ನಿಮ್ಮತ್ರಾನೇ ಬರ್ತೀನಿ ನೀವೇ ಹುಡುಗನ್ನ ಹುಡುಕಿಕೊಡಬೇಕು" ಅಂತಾ ಯೋಗರಾಜ್ ಭಟ್ಟರಿಗೆ ಹೇಳಿಬಿಟ್ಟಿದ್ದೀನಿ.



ನಿಮ್ಮ ಫ್ರೆಂಡ್ ದಿಗಂತನ ಬಗ್ಗೆ ನಿಮ್ಮ ಒಪೀನಿಯನ್?

ದಿಗಂತ್ ಮೊದಲಿಗಿಂತ ಈಗ ತುಂಬಾ ಛೇಂಜ್ ಆಗಿದಾನೆ. ಮೊದಲಿನ ಅಶಿಸ್ತು, ಸೋಮಾರಿತನ ದೂರವಾದಂತೆ ಕಾಣುತ್ತಿದೆ. ಈಗೊಂಚೂರು ಪ್ರೊಫೆಷನಲ್ ಆಗಿದಾನೆ ಅನಿಸುತ್ತೆ! ಇತ್ತೀಚೆಗೆ ಚಾನೆಲ್ ಪ್ರೋಗ್ರಾಂ ಒಂದರಲ್ಲಿ ನಾವಿಬ್ಬರೂ ಒಟ್ಟಿಗೇ ಆ್ಯಂಕರಿಂಗ್ ಮಾಡಿದೆವು. ಆಗ ನನಗಿಂತಲೂ ಮುಂಚೆನೇ ಬಂದು ಟೈಮಿಗೆ ಸರಿಯಾಗಿ ಹಾಜರಾಗಿದ್ದ!!

ಯಾರನ್ನು ಕಂಡರೆ ಭಯ?

ರವಿಚಂದ್ರನ್ ಅವರನ್ನು ಕಂಡರೆ ನನಗೆ ತುಂಬಾ ಭಯ. ಅವರು ಎದುರಿಗೆ ನಿಂತಿದ್ದರೆ ಬಾಯಿಬಿಟ್ಟು ಮಾತಾಡಲೂ ಹೆದರಿಕೆಯಾಗುತ್ತೆ. ಅಮೃತಮಹೋತ್ಸವದ ಸಂದರ್ಭದಲ್ಲಿ ನಾನು ಹೆದರುವುದನ್ನು ಕಂಡ ರವಿಸರ್ ಅವರೇ "ಅದ್ಯಾಕೆ ನನ್ನ ನೋಡಿದ್ರೆ ಹೆದರ್ಕೊಂಡು ಸಾಯ್ತಿಯಾ?" ಎಂದಿದ್ದರು. ನಾನು ಚಿಕ್ಕವಳಾಗಿದ್ದಾಗ ಅವರ 'ಪ್ರೇಮಲೋಕ' ಸೇರಿದಂತೆ ಎಲ್ಲ ಸಿನಿಮಾಗಳನ್ನೂ ನೋಡಿ ಬೆಳೆದವಳು. ನಮ್ಮ ಮಮ್ಮಿ ಕೂಡಾ ರವಿಚಂದ್ರನ್ ಅವರ ಫ್ಯಾನ್. ಅದಕ್ಕೇ ಇರಬೇಕು ಅವರನ್ನು ಕಂಡರೆ ಅಷ್ಟೊಂದು ಗೌರವ- ಹೆದರಿಕೆ.

ಗ್ಲಾಮರಸ್ ಆಗಿ ಕಾಣಿಸಿಕೊಳ್ಳಲು ಅಷ್ಟೊಂದು ಇಷ್ಟಾನಾ?

ಗ್ಲಾಮರ್ ಉಡುಗೆ ತೊಡೋದಕ್ಕೆ ಅಭ್ಯಂತರವಿಲ್ಲ. ಆದರೆ, ಅದು ಅಸಹ್ಯವಾಗಿರಬಾರದು. 'ಕೃಷ್ಣ ನೀ ಲೇಟಾಗಿ ಬಾರೋ' ಚಿತ್ರದಲ್ಲಿ ಸ್ವಲ್ಪ ಅತಿಯಾಯ್ತು ಅಂತ ನನಗೇ ಅನ್ನಿಸ್ತು. ನನ್ನದು ದೊಡ್ಡ ಪರ್ಸನಾಲಿಟಿ ಆಗಿರೋದ್ರಿಂದ ಕಾಸ್ಟ್ಯೂಮರ್‌ಗಳು ಹೊಲಿದ ಬಟ್ಟೆ ಕೆಲವೊಮ್ಮೆ ಹಾಕಿಕೊಂಡಮೇಲೆ ಚಿಕ್ಕದು ಅನಿಸಿಬಿಡುತ್ತದೆ... ಮುಂದೆ ಹಾಗೆಲ್ಲಾ ಆಗೋಕೆ ಬಿಡೊಲ್ಲ!!

ಯಾವುದನ್ನ ಮಿಸ್ ಮಾಡಿಕೊಂಡಾಗ ಹೆಚ್ಚು ಬೇಸರವಾಗುತ್ತೆ?

ಒಳ್ಳೊಳ್ಳೆ ಕ್ಯಾರೆಕ್ಟರುಗಳು ಕೈತಪ್ಪಿ ಹೋದಾಗ ಸಿಕ್ಕಾಪಟ್ಟೆ ಫೀಲ್ ಆಗುತ್ತೆ. 'ಕಾಡಬೆಳದಿಂಗಳು' ಚಿತ್ರದಲ್ಲಿ ಡೇಟ್ಸ್ ಪ್ರಾಬ್ಲಂನಿಂದ ನಟಿಸಲು ಸಾಧ್ಯವಾಗಲಿಲ್ಲ. ನಂತರ ಆ ಪಾತ್ರದಲ್ಲಿ ಅನನ್ಯಾ ಕಾಸರವಳ್ಳಿ ನಟಿಸಿದರು. ಈಗಲೂ ಆ ಪಾತ್ರವನ್ನು ಮಿಸ್ ಮಾಡ್ಕೊಂಡಿದ್ದಕ್ಕೆ ಬೇಸರವಾಗುತ್ತೆ. 'ಇಜ್ಜೋಡು' ಸಿನಿಮಾದಲ್ಲಿ ಮೀರಾ ಜಾಸ್ಮಿನ್ ನಟನೆ ನೋಡಿದ ಮೇಲಂತೂ 'ನಾನೂ ಅಂಥ ಪಾತ್ರದಲ್ಲಿ ನಟಿಸಬೇಕು' ಎಂಬ ಬಯಕೆ ಹುಟ್ಟಿದೆ. ಅದಕ್ಕೇ ಕಲಾತ್ಮಕ ಚಿತ್ರಗಳ್ಯಾವುದೇ ಬಂದರೂ ಡೇಟ್ಸ್ ಹೊಂದಿಸಿ ಕೊಡುತ್ತೀನಿ.

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 10-8-2011

ಓಲ್ಡು ಸಿನೆಮಾಗಳ 3ಡಿ ಸಾಹಸ



ಇದು ಸಾಹಸವೋ, ದುಸ್ಸಾಹಸವೋ ಗೊತ್ತಿಲ್ಲ.

ಕೆ.ಸಿ.ಎನ್ ಚಂದ್ರಶೇಖರ್ ಅವರ ತಂದೆ ಕೆ.ಸಿ.ಎನ್.ಗೌಡರು ರಾಜ್‌ಕುಮಾರ್ ನಟಿಸಿದ್ದ ಐದು ಚಿತ್ರಗಳನ್ನು ತ್ರಿಡಿಗೆ ರೂಪಾಂತರಿಸುತ್ತಿದ್ದಾರೆ. 'ವೀರಕೇಸರಿ', 'ಕಸ್ತೂರಿ ನಿವಾಸ', 'ಬಬ್ರುವಾಹನ', 'ಹುಲಿಯ ಹಾಲಿನ ಮೇವು' ಮತ್ತು 'ಮಯೂರ' ಚಿತ್ರಗಳನ್ನು ತ್ರಿಡಿ ತಾಂತ್ರಿಕತೆಗೆ ರೂಪಾಂತರಿಸಲು ಕನಿಷ್ಠವೆಂದರೂ 40 ಕೋಟಿ ರೂಪಾಯಿಗಳು ಬೇಕು. ಗೌಡರು ಈಗಾಗಲೇ 'ಬಬ್ರುವಾಹನ' ಚಿತ್ರದ ತ್ರಿಡಿ ರೂಪಾಂತರದ ಕೆಲಸವನ್ನು ಆರಂಭಿಸಿ ಅದಕ್ಕಾಗಿ ಸುಮಾರು ಐದು ಕೋಟಿ ರೂಪಾಯಿಗಳನ್ನು ಸುರಿದಿದ್ದಾರೆ.



ಈಗ ಇಂತಹ ಸಾಹಸಕ್ಕೆ ಕೈಹಾಕಿರುವ ಗೌಡರು ಈ ಹಿಂದೆ ಕನ್ನಡ ಚಿತ್ರರಂಗದಲ್ಲಿ ಹಲವಾರು ಸಾಹಸಗಳನ್ನು ಮಾಡಿರುವವರು. ಇವರ ಕೆಲವು ಸಾಹಸಗಳಿಗೆ ಜಯ ಸಿಕ್ಕಿದ್ದರೆ, ಹಲವು ಸಲ ಇವರು ಕೈಸುಟ್ಟುಕೊಂಡಿದ್ದೂ ಉಂಟು. ಕೆಲ ವರ್ಷಗಳ ಹಿಂದೆ 'ಮೊಘಲ್-ಎ-ಅಜಮ್' ಎಂಬ ಅರೆ ಕಪ್ಪು-ಬಿಳುಪು ಹಿಂದಿ ಚಿತ್ರ ಸಂಪೂರ್ಣವಾಗಿ ಬಣ್ಣದ ಚಿತ್ರವಾದಾಗ ಪ್ರೇಕ್ಷಕರು ಅದನ್ನು ತುಂಬು ಹೃದಯದಿಂದ ಸ್ವಾಗತಿಸಿದ್ದರು. ಅದನ್ನು ಕಂಡು ಸ್ಫೂರ್ತಿ ಪಡೆದ ಗೌಡರು 'ಸತ್ಯ ಹರಿಶ್ಚಂದ್ರ' ಎಂಬ ಕಪ್ಪುಬಿಳುಪು ಚಿತ್ರವನ್ನು ಬಣ್ಣಕ್ಕೆ ರೂಪಾಂತರಿಸಿದರು. ಆ ಚಿತ್ರವನ್ನು ಬಣ್ಣರೂಪದಲ್ಲಿ ನೋಡಿ ಪ್ರೇಕ್ಷಕ ಮೆಚ್ಚಬಹುದು ಎಂಬ ಅವರ ಲೆಕ್ಕಾಚಾರ ಯಾಕೋ ತಿರುವುಮುರುವಾಯಿತು. ಸುಮಾರು ಮೂರೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಬಣ್ಣ ಪಡೆದ 'ಸತ್ಯ ಹರಿಶ್ಚಂದ್ರ'ನಿಂದಾಗಿ ಗೌಡರು ಕನಿಷ್ಠವೆಂದರೂ ಮೂರು ಕೋಟಿ ರೂ.ಗಳನ್ನು ಕಳೆದುಕೊಂಡರು.

ವಿಶೇಷವೆಂದರೆ ಇಂತಹ ಸಾಹಸ ಮಾಡುವ ಕೆ.ಸಿ.ಎನ್. ಗೌಡರು ಈಗಾಗಲೇ 90 ವರ್ಷ ದಾಟಿರುವ ಹಿರಿಯರು. ಆದರೂ ಅವರ ವಯಸ್ಸು ಅವರ ಸಾಹಸ ಮನೋಭಾವಕ್ಕೆ ಯಾವುದೇ ಅಡ್ಡಿ ಮಾಡಿಲ್ಲ. "ರಾಜ್‌ಕುಮಾರ್ ಅವರ ಐದು ಚಿತ್ರಗಳನ್ನು ತ್ರಿಡಿ ತಾಂತ್ರಿಕತೆಗೆ ಬದಲಾಯಿಸಿದರೆ, ಅವುಗಳನ್ನು ಪ್ರದರ್ಶನ ಮಾಡಲು ನಮ್ಮಲ್ಲಿ ಥಿಯೇಟರ್‌ಗಳು ಎಲ್ಲಿವೆ?" ಎಂದು ಕೇಳಿದರೆ "ಅಂತಹ ತಾಂತ್ರಿಕತೆಯನ್ನು ಚಿತ್ರಮಂದಿರದ ಮಾಲೀಕರು ಅಳವಡಿಸಬೇಕು. ಮುಂಬರುವ ದಿನಗಳಲ್ಲಿ ತ್ರಿಡಿ ತಾಂತ್ರಿಕತೆಯೇ ಸಿನಿಮಾ ಮತ್ತು ಟಿ.ವಿ. ಕ್ಷೇತ್ರದಲ್ಲಿ ಮುಖ್ಯವಾಗುತ್ತದೆ" ಎಂದು ಗೌಡರು ಭವಿಷ್ಯ ನುಡಿಯು...

"'ಸತ್ಯ ಹರಿಶ್ಚಂದ್ರ' ಚಿತ್ರದಿಂದಾಗಿ ನೀವು ನಷ್ಟ ಮಾಡಿ... ಈ ಪ್ರಾಜೆಕ್ಟ್‌ನಲ್ಲಿ ಲಾಭ ಮಾಡುವ ಸಾಧ್ಯತೆಯಿದೆಯೇ?" ಕೇಳಿದರೆ "ಲಾಭ ಬರುತ್ತದೋ, ನಷ್ಟ ಆಗುತ್ತದೋ ನನಗೆ... ಆದರೆ ನಾನು ಡಾ. ರಾಜ್‌ಕುಮಾರ್ ಅವರಿಗೆ ನೀಡುವ ಶ್ರ... ಇದು" ಎಂದು ಹೆಮ್ಮೆಯಿಂದ ಅವರು ಹೇಳುತ್ತಾರೆ.

ಈಗ ನೀವೇ ಹೇಳಿ. ಈ 90 ರ ಹರೆಯದ ಗೌಡರ ಉತ್... ಏನೆಂದು ಬಣ್ಣಿಸಬೇಕು? ಕನ್ನಡಿಗರಲ್ಲಿ ಸಾಹಸ ಮನ... ಕಡಿಮೆಯಾಗುತ್ತಿದೆ ಎಂದು ಹೇಳುವವರೆಲ್ಲ ಒಮ್ಮೆ ಗೌಡ... ಚಿತ್ರೋದ್ಯಮದ ಹೊಸ ತಾಂತ್ರಿಕತೆಯ ಬಗ್ಗೆ ಕುಳಿತು ಮಾತನಾ...



ನಾಣಿ ಚಿತ್ರದಲ್ಲಿ ರಾಕ್ ನಟನೆ



ಪುರಾತನ ಸ್ನೇಹಿತರಾದ ರಾಕ್‌ಲೈನ್ ವೆಂಕಟೇಶ್ ಮತ್ತು ಎಸ್. ನಾರಾಯಣ್ ಮತ್ತೆ ಒಂದಾಗಿದ್ದಾರೆ.

ಇದನ್ನು ಕೇಳಿ 'ಇದೇನಿದು ನಾಣಿ ಸಿನಿಮಾವನ್ನು ರಾಕ್‌ಲೈನ್ ಪ್ರೊಡ್ಯೂಸ್ ಮಾಡ್ತಿದಾರಾ?' ಎಂದುಕೊಳ್ಳಬೇಡಿ. ಬದಲಾಗಿ ಈ ಬಾರಿ ನಾರಾಯಣ್ ನಿರ್ದೇಶನದಲ್ಲಿ ರಾಕ್ ಬಣ್ಣ ಹಚ್ಚುತ್ತಿದ್ದಾರೆ.

'ಕಾಮಣ್ಣನ ಮಕ್ಕಳು' ಚಿತ್ರದ ನಂತರ ರಾಕ್‌ಲೈನ್ ಸಿನಿಮಾಗಳ ನಿರ್ಮಾಣ, ಮಗನ ಮದುವೆ, ಅವಳಿ ಮೊಮ್ಮಕ್ಕಳ ನಾಮಕರಣ... ಹೀಗೆ ಸಿಕ್ಕಾಪಟ್ಟೆ ಬ್ಯುಸಿಯಾಗಿಬಿಟ್ಟರು. ಈ ಕಾರಣಕ್ಕೋ ಏನೋ ಅವರು ಯಾವ ಸಿನಿಮಾಗಳಲ್ಲೂ ನಟಿಸಿರಲಿಲ್ಲ.

ಈಗ ನಾಣಿ ನಿರ್ದೇಶಿಸುತ್ತಿರುವ 'ಶೈಲೂ' ಚಿತ್ರದಲ್ಲಿ ರಾಕ್‌ಲೈನ್‌ಗೆ ಪೊಗದಸ್ತಾದ ಪಾತ್ರವೊಂದು ದಕ್ಕಿದೆ. ಕೊಬ್ರಿ ಮಂಜು ನಿರ್ಮಿಸುತ್ತಿರುವ 'ಶೈಲೂ' ತಮಿಳಿನ 'ಮೈನಾ'ದ ರಿಮೇಕು. ಈ ಚಿತ್ರವನ್ನು ತಮಿಳಿನ ಮೂಲ ನಿರ್ದೇಶಕ ಪ್ರಭು ಸಾಲೊಮನ್ ಅವರೇ ನಿರ್ದೇಶಿಸಬೇಕಿತ್ತು; ಅದಕ್ಕೆ ಎಲ್ಲ ಸಿದ್ಧತೆಗಳೂ ಮುಗಿದಿದ್ದವು. ಅಷ್ಟರಲ್ಲಿ ಏನೇನು ಬದಲಾವಣೆಗಳಾದವೋ ಗೊತ್ತಿಲ್ಲ, ಆ ಜಾಗಕ್ಕೆ ಕನ್ನಡದವರೇ ಆದ ಶ್ರೀಮಾನ್ ನಾಣಿಯವರು ಬಂದು ಕುಳಿತಿದ್ದಾರೆ. ಮಗನ ತೋಪು ಸಿನಿಮಾಗಳಿಗೆ 'ಆಕ್ಷನ್ ಕಟ್' ಹೇಳೀಹೇಳಿ ರೋಸೋಗಿರುವ ನಾಣಿ ಈ ಬಾರಿ ಗಣೇಶನನ್ನು ಹೀರೋ ಮಾಡಿಕೊಂಡಿದ್ದಾರೆ.



ಕಳೆದ ವರ್ಷ ಬಿಡುಗಡೆಯಾಗಿ ಅದ್ಭುತ ಸಿನಿಮಾ ಎನಿಸಿಕೊಂಡಿದ್ದ 'ಮೈನಾ'ದ ಒಂದೊಂದು ಪಾತ್ರವೂ ಮುಖ್ಯ. ಇಂಥ ಸಿನಿಮಾದಲ್ಲಿ ರಾಕ್‌ಲೈನ್ ನಟಿಸುತ್ತಿರುವುದು ಕುತೂಹಲದ ವಿಷಯವಾಗಿದೆ. ರಾಕ್‌ಲೈನ್ ಕಟ್ಟುನಿಟ್ಟಿನ ನಿರ್ಮಾಪಕ, ಬಿಗೀ ವ್ಯವಹಾರಸ್ಥರಾದರೂ ಅವರೊಳಗೆ ಡಿಫರೆಂಟಾದ ಒಬ್ಬ ನಟನಿದ್ದಾನೆ. 'ಡಕೋಟಾ ಎಕ್ಸ್‌ಪ್ರೆಸ್'ನ ಕಾಮಿಡಿ ಪಾತ್ರವೇ ಸಾಕು ಅದನ್ನು ಸಾಕ್ಷೀಕರಿಸಲು....

ಗಾಡ್ ಗುರುರಾಜಗೆ ಗಾಡ್!

ಕುಂತರೂ ನಿಂತರೂ ರಾಘವೇಂದ್ರ ಸ್ವಾಮಿ... ಆರಾಧಿಸುವ ಜಗ್ಗೇಶ್ 'ಗುರುರಾಜ ಫಿಲಂಸ್' ಎಂಬ ಬ್ಯಾನರ್ ಒಂದನ್ನು ಆರಂಭಿಸಿದ್ದಾರೆ.

ಮೂವತ್ತು ವರ್ಷಗಳ ಹಿಂದೆ ಜಗ್ಗೇಶ್ ಪರಿಸ್ಥಿತಿ... ಬೀಡಿಗೂ ಕಾಸಿಲ್ಲದೆ ಒದ್ದಾಡುವಂತಿತ್ತು. ಜೊತೆಗೆ ... ಮದುವೆಯಾದ ಹೆಂಡತಿ ಬೇರೆ. ಜೊತೆಗೆ ರಾಘವೇಂ...

ಇಂಥ ಸಂದರ್ಭದಲ್ಲಿ ಅವರ ಮನಸ್ಸು ... ಮಂತ್ರಾಲಯದತ್ತ ಸೆಳೆಯುತ್ತಿತ್ತಂತೆ. ಅವರ ಅಮ್ಮ ... ಅಲ್ಲಿಇಲ್ಲಿ ಇಟ್ಟ ಚಿಲ್ಲರೆ ಕಾಸು, ಅಪ್ಪನ ಜೇಬಿನಲ್ಲಿರುತ್ತಿದ್ದ... ನೋಟನ್ನು ಎಗರಿಸಿ ಪತ್ನಿ ಪರಿಮಳಾರನ್ನೂ ಕರೆದು... ಮಂತ್ರಾಲಯಕ್ಕೆ ಹೋಗೋದು ಜಗ್ಗೇಶ್‌ಗೆ ರೂಢಿಯಾ... ಒಮ್ಮೆ ಅಪ್ಪನ ಕಿಸೆಯಲ್ಲಿ ಸಾವಿರ ರೂಪಾಯಿಗಳನ್ನು ... ಮಾಡಿಕೊಂಡು ಮಂತ್ರಾಲಯಕ್ಕೆ ಹೋಗಿ ದರ್ಶನ ಪಡೆ...


ತಿರುಕನ ಕನಸು ಎನ್ನುವ ಹಾಗೆ ಕೈಲಿ ನಯಾ... ಇಲ್ಲದಿದ್ದಾಗ "ನಾನೇನಾದ್ರೂ ಸಿನಿಮಾ ಪ್ರೊಡ್ಯೂಸ್ ... ರಾಯರ ಹೆಸರಲ್ಲೇ" ಎಂದು ಹೆಂಡತಿಯ ಬಳಿ ಹೇಳ... ಆದೇನು ಅದೃಷ್ಟವೋ, ಕಾಕತಾಳೀಯವೋ? ಜಗ್ಗೇಶ್... ಸುಮ್ಮನೇ ಅಂದುಕೊಂಡಿದ್ದು ಇವತ್ತು ನಿಜವಾಗಿಬಿಟ್ಟ...

ಹೀಗಾಗಿ 'ಗುರುರಾಜ ಫಿಲಂಸ್'ಅನ್ನು ಆರಂಭಿಸಿ... ಗಾರ್ಡ್' ಅನ್ನೋ ಸಿನಿಮಾವನ್ನು ಆರಂಭಿಸಿ... ಹಿಂದೊಮ್ಮೆ 'ಮೇಕಪ್' ಎಂಬ ಎಕ್ಸ್‌ಪೆರಿಮೆಂಟ್ ... ಹೋಗಿ ಇದೇ ಜಗ್ಗೇಶ್ ಮಕಾಡೆ ಬಿದ್ದಿದ್ದರು. ... ಫೇವರಿಟ್ ಗಾಡ್ ಗುರುರಾಯರ ಹೆಸರಲ್ಲಿ ... ಶುರು ಮಾಡಿದ್ದಾರೆ. 'ಬಾಡಿಗಾಡು... ಕೊಡದಿರಲಿ ರಾಘವೇಂದ್ರನೇ...



ಬೇಟೆ
ನಿಶಿತಾ ವ್ಯಾಸ್

ನವೀನ ಯೋಗ



ನಟ ನವೀನ್ ಕೃಷ್ಣನಿಗೆ ಕಡೆಗೂ 'ಯೋಗ'ವೊಂದು ಕೈಗೆಟುಕಿದೆ!

ಪೋಷಕ ಪಾತ್ರವಿರಲಿ, ಹೀರೋ ರೋಲ್ ಆಗಲಿ, ಸೀರಿಯಲ್ಲಿನ ನಟನೆಯಾಗಲಿ ಎಲ್ಲವನ್ನು ಲೀಲಾಜಾಲವಾಗಿ ನಿರ್ವಹಿಸುವ, ತನ್ನ ಸಿನಿಮಾಗಳಿಗೆ ಸ್ವತಃ ತಾನೇ ಹಾಡುಗಳನ್ನು ಬರೆದುಕೊಂಡು ಹಾಡುವ ಪ್ರತಿಭಾವಂತ ಯುವಕ ನವೀನ್ ಕೃಷ್ಣ. ಈತ ಈವರೆಗೆ ಸಾಕಷ್ಟು ಸಿನಿಮಾಗಳಲ್ಲಿ ನಟಿಸಿದ್ದರೂ ಆತನ ಕೈ ಹಿಡಿದು ನಿಲ್ಲಿಸುವ ಪಾತ್ರಗಳೇ ಸಿಕ್ಕಿರಲಿಲ್ಲ, ಹಾಗೊಮ್ಮೆ ಸಿಕ್ಕರೂ ಪ್ರೇಕ್ಷಕರು ಈತನನ್ನು ಒಪ್ಪುವ ಮನಸ್ಥಿತಿ ಮಾಡಿರಲಿಲ್ಲ.

ತಮ್ಮ ಮಗನನ್ನು ಹೇಗಾದರು ಮಾಡಿ ಚಿತ್ರರಂಗದಲ್ಲಿ ನೆಲೆ ನಿಲ್ಲಿಸಬೇಕೆಂದು ಆತನ ತಂದೆ ಶ್ರೀನಿವಾಸ ಮೂರ್ತಿ ಮತ್ತು ತಾಯಿ ಪುಷ್ಪಾ ಇಬ್ಬರೂ ಸೇರಿ 'ಧಿಮಾಕು' ಎಂಬ ಸಿನಿಮಾ ನಿರ್ಮಿಸಿ, ನವೀನನನ್ನು ಹೀರೋ ಮಾಡಿದ್ದರು. ಸಿನಿಮಾ ಕೂಡಾ ಚೆಂದವಾಗೇ ಮೂಡಿ ಬಂದಿತ್ತು, ಆದರೆ ಬಾಕ್ಸ್‌ಆಫೀಸ್‌ನಲ್ಲಿ ಕಲೆಕ್ಷನ್ ದಕ್ಕಿಸಿಕೊಳ್ಳದೇ ನೆಲಕ್ಕೊರಗಿತ್ತು.

ಮೊನ್ನೆ ದಯಾಳ್ ಪದ್ಮನಾಭನ್ ನಿರ್ದೇಶಿಸಿರುವ 'ಯೋಗರಾಜ'... ಸಾಹಿತಿ ವಿ. ನಾಗೇಂದ್ರ ಪ್ರಸಾದ್ ನಿರ್ದೇಶಿಸಿರುವ 'ವಿನಾಯಕ ಗ... ಬಳಗ' ಚಿತ್ರಗಳು ಬಿಡುಗಡೆಯಾಗಿವೆ. ಈ ಎರಡೂ ಚಿತ್ರಗಳಲ್ಲಿ ... ನಾಯಕ. ಅದೃಷ್ಟಕ್ಕೆ ಎರಡೂ ಚಿತ್ರಗಳು ಈಗ ಪ್ರೇಕ್ಷಕರಿಂದ ಸೈ ಎನಿಸಿಕೊ... ಮಾತ್ರವಲ್ಲ ಕಲೆಕ್ಷನ್ ಕೂಡಾ ದಿವಿನಾಗಿದೆ. 'ಯೋಗರಾಜ' ಚಿತ್ರಕ್ಕೆ ... ಬರೆದ ಎರಡು ಹಾಡುಗಳೂ ಹಿಟ್ ಆಗಿವೆ.

ಸೋಲು-ಗೆಲುವು ಏನೇ ಇದ್ದರೂ ಎದೆಗುಂದದೆ, ಪ್ರತಿಭೆ... ನಂಬಿ ಹೆಜ್ಜೆಯಿಟ್ಟ ಹುಡುಗನಿಗೆ ಕಡೆಗೂ 'ಯೋಗ' ಒದಗಿ... ರುವುದು ನೆಮ್ಮದಿಯ ವಿಚಾರ...

• ಅರ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate...